MOTION OF THANKS TO THE GOVERNOR'S ADDRESS.

Sri Y. MANJAYYA SHETTY (Baindur).—I beg to move the following Motion of Thanks to the Governor's Address:

"We, the members of the Mysore Legislative Assembly assembled in this Session beg leave to thank the Governor for the Address delivered to the members of the Legislature on 28th January 1966."

Mr. SPEAKER.—Motion moved:

"That we, the members of the Mysore Legislative Assembly assembled in this Session beg leave to thank the Governor for the Address delivered to the members of the Legislature on 28th January 1966."

Sri S. M. GURADDI (Muddebihal).—I second the Motion of Thanks moved by Sri Y. Manjayya Shetty.

Mr. SPEAKER.—Motion seconded.

There are a number of amendments. I shall take all of them after the member has spoken.

Sri C. J. MUCKANNAPPA (Sira).—At the time his Excellency the Governor read his Address to this august House, he just omitted page No. 14, 16 and also the paras in page 25. I just want to know if some pages or paras are omitted to be read, shall we take it for granted that what is mentioned in the books is read out.

Mr. SPEAKER.—Now the Hon'ble Member must bear things very clearly in his mind. Then, there should be no confusion for himself, no confusion created for any others, and none for the House at any time. What has been read by the Governor, he has heard. When somebody said that there was a little wrong stitching, I had found that in some of the pages there was wrong stitching: the page relating to Food came last and pages 22-24 came first and there was a slight mistake in stitching. I do not know whether it occurred in the book that was given to His Excellency the Governor. Anyhow if Sri Muckannappa wants to be guided by Sri Kadam, he is at liberty to do so. I am reminding the House that more peculiar things happened elsewhere; where the address that was intended to be read was not read, was not permitted to be read; and once the Governor was not allowed to function and read through the first sentence or a little more than that, and the ruling was that it will be deemed to have been read. It forms part of the record. The copy that I have laid on the Table of the House has to be debated upon.

ಶ್ರೀ ಎಸ್. ಗೋಪಾಲ ಗೌಡ.—ತಾವು ಅಷ್ಟನ್ನು "deem to have been read," ಅಂತ ರೂಲಿಂಗ್ ಕೊಡುವುದಾದರೆ ನಾವು ಒಪ್ಪಿಕೊಳ್ಳುವುದಕ್ಕೆ ಸಿದ್ಧವಿದ್ದೇವೆ. ಇಲ್ಲದಿದ್ದರೆ ಓದದೆ ಇರತಕ್ಕಂಥ ಭಾಗವನ್ನು ಈ ಸಭೆ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ.

Sri C. J. MUCKANNAPPA.—The Hon'ble Speaker said that I am creating confusion. His Excellency the Governor did not read portions relating to "Municipal Administration", "Labour", "Employment and Training", and "Agriculture". Again he omitted to read the para on "Irrigation—Major, Medium and Minor." On page 25, he left entirely the matter relating to the Government Soap Factory. I was going through the Address very carefully, para, by para when the Governor was reading. Therefore, I have no confusion about the paras and matter omitted. I am not creating any confusion. I only wanted guidance as to how the Address has to be dealt with. Shall we take for granted that the copy supplied to us has been read out.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ರಾಜ್ಯಪಾಲರ ಭಾಷಣ ಮಾಡದೆ ಇರತಕ್ಕಂಥ ಅಂಶಗಳ ವಿಚಾರದಲ್ಲಿ ಮಾನ್ಯ ಸದಸ್ಯರುಗಳು ಹೇಳಿದ್ದಾರಲ್ಲ, ಆ ಭಾಷಣ ಮಾಡದೆ ಇರತಕ್ಕಂಥ ಭಾಗವನ್ನು ಎರಡನೇ ಸಾರಿ ನಮ್ಮ ರಾಜ್ಯಪಾಲರನ್ನು ಕರೆಸಿ ಪೂರ್ತಿ ಮಾಡುವುದಕ್ಕೆ ಅವಕಾಶ ಇದೆಯೇ ?

Mr. SPEAKER.—Order, order. I am not permitting this kind of talk.

ಶ್ರೀ ಎಚ್. ಆರ್. ಕೇಶವ ಮೂರ್ತಿ (ಗಂಡಸಿ).—ಸ್ವಾಮಿ, ಪೂರ್ತಿ ಭಾಷಣ ಮಾಡಬೇಕೆಂದು ಏನು ಕಡ್ಡಾಯ, ಕಾನೂನು ಏನೂ ಇಲ್ಲ, ಬಿಟ್ಟಿರುವುದನ್ನು ಸೇರಿಸಿಕೊಂಡು ಭಾಷಣ ಮಾಡಬಹುದು.

Mr. SPEAKER.—Now time has been unneceassarilly spent even after I explained the position very clearly. They develop pet theories in their own minds and hug them. They do not understand why I said that copy of the Address has been placed on the Table and it has been distributed to all the Members. In fact, during the past years copy of the Address was not available to the Members at the time the Governor was reading. If the Government has gone a little forward in sympathising with the Members, in helping them in understanding and absorbing, that should not be a ground for grievance. If necessary, the Government may not give the copy next year before the Governor reads his address.

Sri Y. MANJAYYA SHETTY.—Mr. Speaker, Sir, In supporting the motion......

ಶ್ರೀ ಎಸ್. ಗೋಪಾಲ ಗೌಡ.—ಶ್ರೀ ಮಂಜಯ್ಯ ಶೆಟ್ಟಿಗೆ ಕನ್ನಡ ಬರುತ್ತದೆ, ಅವರು ಸಮರ್ಪಕವಾಗಿ ಮಾತನಾಡಬಲ್ಲರು, ಅವರು ಕನ್ನಡದಲ್ಲೇ ಮಾತನಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—He has already commenced his speech in English. How can the Member ask him to switch over to Kannada unless he yields and unless I permit him ?

Sri Y. MANJAYYA SHETTY.—I cannot switch over to Kannada since I have already begun my speech in English. My friend Sri Gopala Gowda will excuse me.

In supporting the Motion of Thanks under discussion, I wish to make a few observations. At the outset, let me express my sincere thanks and gratitude to the Leader of the House for giving me an opportunity to move the Motion of Thanks to the Address of the Governor. Our State is singularly fortunate in having Sri

V. V. Giri, a great patriot, an able, efficient and experienced administrator as the head of the State. Since the time he has assumed office, he has been taking keen and intense interest in the welfare of the people of the State. We are greatly indebted to him for the same. It may not be out of place if I take this opportunity of expressing our sincere gratitude and appreciation for the excellent work turned out by the Ministry headed by our beloved Chief Minister Sri Nijalingappa. In fact, there are several great achievements to the credit of the Ministry. I do not wish to narrate each one of them and take the time of the House. But I shall be failing in my duty if I lose sight of the fact that the success of the Ministry is largely due to the loyal and efficient services rendered by the Public Services and also due to the wholehearted support and co-operation extended by the people of the State. The Governor's Address, apart from being an inspiring one, is also an exhaustive one. He has narrated the policy and the programme of the Government and the achievements of the administration.

The Governor has rightly paid glowing tribute to the armed forces for their heroic part played in the defence of our motherland in the recent conflict between our country and Pakistan. Our armed forces deserve our appreciation and gratitude. On this occasion, let us also pay our homage to those Army men who have laid their lives in the cause of defending our motherland. During the period of the conflict, Sir, the people of this great country stood united behind the Government. But for the unity expresed by the people of this country, our late Prime Minister Lal Bahadur Shastri could not have carried on the struggle with Pakistan so efficiently and admirably.

The Governor, in his Address, has made a reference to the historic meeting that was held at Tashkent between the late Prime Minister Lal Bahadur Shastri and President Ayub Khan. In this connection we will be failing in our duty if we do not express our sincere thanks to the Russian Prime Minister Mr. Kosygin, who has done yoeman service in bringing about the Tashkent declaration. Unfortunately for our country Prime Minister Lal Bahadur Shastri passed away, when his services, and his leadership is very badly needed It is our duty to express our deep and profound sorrow at the untimely demise of our revered leader Prime Minister Lal Bahadur Shastri. His demise is a great and irreparable loss to the country. May I take this opportunity to pray God that his soul may rest in peace in Heaven ?

The Governor, in his Address, made a reference to the democratic way by which Prime Minister Mrs. Indira Gandhi was elected. With her educational background and with her training under her great father and with her great heritage, I am sure and confident that she will be a very successful Prime Minister. I wish success and glory to her.

(SRI Y. MANJAYYA SETTY)

[MR. DEPUTY SPEAKER in the Chair.]

Our Government has implemented the Third Five-Year Plan very successfully. It is coming to a close in March 1966. The target of expenditure of the Third Five-Year Plan is 250 crores. But for the interruptions caused in the implementation of the several schemes sponsored in the Third Five Year-Plan by the Chinese aggression in 1962 and Pakistan aggression in 1965, I am sure, that the target of Rs. 250 crores during the Third Five-Year Plan, would have been completely spent. But, in spite of that, the target reached during the Third Five Year Plan was excellent and I have to congratulate the Government for having implemented the Third Five-Year Plan so excellently and efficiently.

Sri C. J. MUCKANNAPPA.—**.

Sri Y. MANJAYYA SHETTY.—In April 1966, we will be launching the Fourth Five-Year Plan. The size of the Plan is not yet settled or finalised. But it is likely to be double that of the Third Five-Year Plan. The outlay on the first year of the Fourth Five-Year Plan has been fixed at 53·72 crores. It is said that the Central Government is going to give us the financial assistance to the extent of 34 crores for implementing the schemes of the first year of the Fourth Five-Year Plan. In the Plan, stress is laid on agriculture, irrigation and power. It is said that nearly fifty per cent of the first year plan outlay will be spent on agricultural production. I wish, if the Government has taken a similar decision either during the first or the second or the third plan period, our country would not have landed in this serious food situation. After all, by experience we learn so many things, and I am happy that the Government has taken a bold step in implementing the agricultural programme so that there may not be starvation or famine in this country.

Sri G. V. GOWDA (Palya).—Here! Here!

Sri Y. MANJAYYA SHETTY.—As I said, out of the outlay of 50.72 crores for the first year of the Fourth Five-Year Plan, the Central Government is going to assist us to the extent of 34 crores. The balance is to be met out of our own resources. Every one of us wants some amenities to our own people, our own constituencies or to our own district, when we claim amenities, we must be able to sacrifice also. Let us not grudge if the Government comes forward with taxation measures to augument the finances of the State.

An HON'BLE MEMBER.—Please tell us.

Sri Y. MANJAYYA SHETTY.—I am very happy that the Government has relaxed the prohibition rules. Though Prohibition is good, nobody disputes that...

**Portion expunged as ordered by the Chair.

Sri C. J. MUCKANNAPPA.—There is a deficiency of finances to the tune of forty crores for the last year of the Third Five-Year Plan. By getting fifty lakhs or one crore, if my friend says that the problem of finance is solved, I will bow my head and walk out of the Assembly.

Sri Y. MANJAYYA SHETTY.—Prohibition policy is good. Nobody wants that people should drink and get spoiled. But, when we are incapable of implementing Prohibition policy, we should not be blind to realities. We must try and see that at least finances of the State is augmented by revenues got from relaxing the Prohibition rules.

2-30 P.M.

I am unhappy that one of the very able Ministers has taken a very hasty decision in tendering the resignation. No doubt, she may be having her own views in the matter, but after all we should not be blind to realities. We know how the prohibition law is being implemented in our State. I must say with a certain amount of conviction that this is a total failure. Now, as per the relaxed rules, permission is given for the sale of liquor and consumption of liquor by permit holders. I wish the rules are relaxed still further so as to embrace toddy which is a beverage of the poor.

The Governor has also mentioned the various financial measures that are going to be introduced by the Government. There may be some difference of opinion with regard to certain taxation measures, but as taxation is inevitable, somehow or other we must adjust and see that Revenue is brought to the exchequer so that we can implement the Fourth Five-Year Plan with courage and with more benefit to the people of this State.

Then, the Governor was pleased to mention about the bad seasonal conditions in this State. On account of failure of rains or on account of late rains in certain areas draught conditions are prevailing. I am very happy that the Government has taken steps to start scarcity relief works. Here I must pay a tribute to the Government for having taken such scarcity measures which would be beneficial for food production. We have heard that generally these scarcity measures are taken in the shape of constructing roads, etc. Here, the Government has changed its policy and it has taken steps for digging of wells, construction of feeder channels, providing of pumpsets, starting of lift irrigation schemes, etc. which are necessary for the production of food. I am very happy that scarcity conditions were immediately conveyed to the Central Government by this Government. As a result of their representation, the Central Government has appointed a Study Team which would be visiting our State very shortly to have first-hand information about draught conditions here.

Sri C. J. MUCKANNAPPA.—Is it the opinion of the Hon'ble Member that the Government of India were not satisfied with the information submitted by the State Government to them and is that the reason why they are sending a team to find out whether there is scarcity condition or not? Do they disbelieve the State Government?

Sri Y. MANJAYYA SHETTY.—Most probably they want to give permanent relief and that is why they want to send a Study Team. I wish the Government furnishes all the requirements needed by the Study Team and see that the Study Team recommends to the Central Government to take permanent measures to meet the scarcity conditions in this State which recur year after year.

Next, the Governor was pleased to mention in his Address about the food situation. It is alarming and it is very critical. We have been importing lot of foodgrains, but we cannot go on importing for ever. We have to pay for these imports through our nose and so we must stand on our own legs with regard to food. I must say with due respect that food problem is a national one. Let not Members of the Opposition think that it is a problem of the Ruling Party. I say again that it has got to be tackled on a national basis and for that it is necessary that all members irrespective of party affiliation should give their helping hand in solving this problem. I must say on this occasion that this problem cannot be solved by hooliganism as has been done now in Kerala. It is really pitiable that the people of Kerala has chosen to solve the food problem by resorting to violence. For solving this food problem it is necessary that the producers and consumers should play a great role. It is necessary that the farmer should adopt new methods of farming. Our farmers being illiterate and conservative are not willing to take up new methods of farming. Unless they switch on to new methods of farming, there is no hope for our country. Apart from that, it is necessary that the food habits of the people should also change. If 50 per cent of the people living in Southern India had switched on to wheat instead of rice, there would have been no food problem in Southern India. It is for the people to consider all these aspects and take action on these lines. It is said in the Governor's Address that our State is marginally deficit but due to draught conditions and failure of rains, there is a deficit of 9. 78 lakh tons of foodgrains. The Government have thought of procuring some foodgrains by means of levy orders. In fact, in some districts the Government was able to procure a large quantity under the levy order. With due respect to the Government I must say that levy order has done some injustice in some areas. In the guise of uniformity all people who grow in fertile lands and barren lands are asked to give the same quantity under this levy order. We have represented this matter with regard to South Kanara. The agriculturists of South Kanara are required to deliver paddy at the rate of one quintal per acre irrespective of whether the land is first class, second class or third class. This has resulted in great injustice. I wish the Government changes the levy order in this regard.

Another injustice done is that the price fixed for paddy delivered under the levy order is too low.

If the Government provide irrigation facilities and provide fertilizers to the ryots and assure good price to the foodgrains grown,

then I am sure there is no necessity for Government to hold conferences and seminars to step up food production.

For cultivation of primary foodgrains like rice wheat water is needed. We cannot entirely depend upon rain water. We have to conserve the water flowing in the rivers. In our State there are innumerable rivers flowing eastwards and westwards. All these rivers are to be harnessed and utilized. In this connection I am very happy to say that the Madras Government have harnessed and utilized the waters of all their rivers and they are now casting their evil eyes on other States, especially on our State. The rivers flowing towards the east have been harnessed to a certain extent and their water is being utilized for irrigation. But what about the rivers flowing westwards. Their waters are being wasted without being used. I wish some irrigation schemes are taken up in these rivers. I wish lift irrigation schemes are taken up by the Government.

There are certain areas in the State where there are no rivers. In these areas underground water sources should be tapped for irrigation purposes. I am happy that even though the target of irrigation wells in the Third Plan was 12,500 the Government have taken up irrigation wells numbering 42,000. and they have completed 24,800 so far. If the Govesnment supply water and power to the agriculturists they can in turn give food in abundance. If the Government take up steps for providing irrigation facilities including pumpsets and power, I am sure we can wipe out our deficit within a couple of years and feed the whole country.

The Governor has referred in his Address to the progress in the field of education. Compulsory primary education is the primary duty of the State. We are very happy that compulsory primary education has been introduced in our State and it is said that this scheme has been working very successfully. Nearly, 14,000 teachers have been appointed in this State to man the primary schools. It is unfortunate that most of the schools are not housed in proper buildings. The Government must have a phased programme to provide school buildings to all these primary schools.

The Government have a scheme to award merit certificate to these primary school teachers who work well in implementing the compulsory primary education scheme. The teachers seem to be dissatisfied with mere certificate being awarded. They seem to be in favour of some material benefit. Instead of merely issuing some certificate to these teachers, I wish they are given some advance increment or cash prize so that they may have some incentive to work more vigorously.

In the Address it is said that Government have sanctioned 2,100 Hindi teachers to work in primary schools. I doubt whether all these teachers are appointed because the minimum qualification fixed for these Hindi teachers is Rashtrabhasha. We my not be able to get teachers with this high qualification. I wish the Education Minister

(SRI Y. MANJAYYA SHETTY)

takes steps not to insist upon Hindi teachers having Rashtrabhasha qualification. If the qualification is lowered we may be able to get the required number of teachers for our State to teach Hindi. Hindi is the national language and it is necessary that we should learn Hindi. So it is necessary in the interests of the nation that all these 2,100 posts should be filed up immediately.

In the field of secondary education several high schools have been opened during the Third Plan. Nearly 87 per cent of the students who attend high schools get freeship. I am very happy to learn that from 1966-67 there would be free secondary education to all pupils irrespective of the income of their parents. In this connection I wish to point out one thing. Due to the paucity of graduate hands, many of the high schools are ill-staffed. A gruaduate would like to go and take up appointment either in the L. I. C. or a bank because the remuneration that he gets there is higher than what he gets as a teacher. It is also stated that in 58 high schools of our State XI Standard equivalent to P. U. C. is introduced by Government. For teaching the XI Standard graduate having M.A., M.SC., M.COM. degrees are necessary, but persons who hold these degrees do not prefer to join any high school because they are getting better pay in colleges. Whatever facilities the Government may provide for promoting education it will not have the desired result unless the teachers are made to lead a happy and contented life by increasing their emoluments. I wish the Government take an early decision to increase the salary, both for Elementary and Secondary School teachers.

The teachers have been for long agitating that their retirement age should be fixed at 58 years. In old Mysore retirement age of teachers is 58 but for the rest of the State this is not made applicable. I wish the Government take a decision and make the retirement age at 58 for all teachers.

Thanks to the Australian and the Swedish Governments for gifting paper costing Rs. 10 lakhs to our State for printing textbooks. In this connection I wish to say that though it is a laudable object to supply free books, generally these books do not reach the students in time. Government should take steps to see that these text-books are distributed to students early in the beginning of the year.

Regarding Health services, it is a good thing that the longstanding problem of amalgamation of Public Health and Medical Departments has been done. Thanks to the efforts of our Hon'ble Health Minister for taking a bold step in amalgamating these two Departments. I may not be misunderstood if I say something about the omission and commission of this Department. Though much progress has been achieved by this Department under the Malaria Eradication programme, small-pok eradication programme, family-planning programme and such other programmes, there are several hospitals and primary health centres in

the State without a doctor. It is a sad commentory on the Department. There is a feeling that most of the medical students who pass out of the colleges of this State do not propose to take employment in the State. They prefer to go and take appointments in the neighbouring States of Madras, Kerala and Andhra because the pay-scales there are more attractive than it is here. I am very happy to say that the Hon'ble Minister at Rotary club meeting at Hassan has announced that he will take immediate decision to increase the salary of the doctors. I hope he has has taken steps in that regard and he will not forget his promise and see that the posts here are also made attractive so that the medical students who pass out of the medical colleges in the State may not go out of the State.

I am very sorry to say that medicinal supplies are not made to hospitals in time and if at all it is supplied in time it is inadequate. I wish the Hon'ble Minister takes personal interest and reviews medicines supplied to each and every hospital and supplement medicines and linens, etc., wherever it is necessary.

I am very happy that the Minister in charge of Fisheries has done an excellent job. I must pay a tribute not only to the Minister and also to the Department for spending the whole amount of Rs. 130 lakhs provided for fisheries development during the Third Five-year Plan. The Central Government is prepared to assist and the Hon'ble Minister for Agriculture, Sri C. Subramanayam has made it clear more than once that he is prepared to help the State Government in promoting fisheries. Fortunately, we have got a coast line of 200 miles; a large number of fishermen families living in coastline are poor and are neglected. Before integration, the catches of fish was only about a lakh tons. Now it has been increased to 1,30,000. But due to want of processing and other facilities, in 1963-64 and 1964-65, 6,000 tons and 2,000 tons of fish which have been caught have gone into waste. Now, I am very happy that under the crash programme, the Central Government has sanctioned Rs. 86 lakhs for intensive development of fisheries. Under this scheme, two additional fishermen training centres were opened; work regarding 8 units of ice plants has commenced and the Hon'ble Minister has laid foundation of all these 8 units and the work is going on in right earnest. Freezing plant and cold storages have to be established and approach roads to fishing hamlets have to be laid. This grant of Rs. 80 lakhs has to be spent by the 30th March 1966 and I am sure that with the zeal and enthusiasm with which this programme has been pushed through by the Hon'ble Minister and his Department, the whole amount would be spent. If they spend that amount they will have to the credit of having done a great service to that poor and neglected class of people. It would give them a good handle to claim more from the Central Government. In this connection, I wish to say that though there is a scheme for putting up fishing harbours, in this matter alone, the progress is not quite satisfactory. Though the plans are prepared, though the blue-prints are ready and estimates are almost ready, no action has been

(SRI Y MANJAAYYA SHETTY)

taken to implement these schemes. There is a great demand for mechanised fishing. People are coming forward to train themselves in mechanised fishing. So far, the Government was able to provide only 245 mechanised boats. The need for such boats is great. Nearly a thousand mechanised boats is needed. Instead of providing 100 and 200 boats every year, I wish a gigantic programme is launched by the Fisheries Ministry for providing at least 1,000 mechanised boats within one or two years. There is a demand for housing for fishermen. They have neither land nor housing facilities. The Government shoud launch a scheme for providing housing facilities for these fishermen. There is reference in the Governor's Address about community development. This scheme is revolutionary in character and it has benefited to a great extent the rural people in the country. In view of the introduction of the Panchayathiraj, I wish the scheme is integrated in the taluk development schemes; as the Community Development scheme has its utility in view of panchayatraj earlier the community development is abolished the better it is. Otherwise, it will be a simple duplication of the work by the same officer. I am hopeful that since the Central Minister of Agriculture is also in charge of community development schemes, he will appreciate and understand that with the introduction of panchayathiraj, this duplication of the scheme may not be necessary and may take such suitable steps as to do away with this scheme. The Governor has said in his address that the Third Five-Year Plan target under communication has been achieved. It is true. But let it not be understood that all the communication problems of our State are over. Especially in malnad areas, in view of the innumerable streams, it would be very difficult to go from one village to another by crossing these streams. All these important streams have to be bridged and roads have to be laid. I wish the Government earmarks a special fund for communication facilities to the malnad areas of the State.

3-00 P.M.

With regard to power, our State is far in advance than many other States. Though we have plenty of power and though there is great demand for agriculture and industrial purposes, somehow or other power is not supplied for industrial and agricultural purposes. The only excuse that the Mysore State Electricity Board pleads is that they have not got sufficient materials. Were they not aware of the availability of power with the inaguration of Sharavathi? They ought to have taken precaution beforehand and seen that sufficient materials were available. I am very happy to know that two important hydro-electric projects are under investigation, the Kali nadi project and the Varahi project. I am happy that the Kalinadi project has reached the final stage and in all probability it will be taken up in the Fourth Plan. In this connection I wish to plead that the Varahi project is equally beneficial. It is in the stage of preliminary investigation and as per preliminary investigation

it is found that it is one of the cheapest hydro-electric projects in the State. I wish the Government takes up this scheme also in the Fourth Plan.

With these words I wish to commend for the motion for the unanimous acceptance of the House. Thank you.

ಶ್ರೀ ಎಸ್. ಎಂ. ಗುರೆಡ್ಡಿ.—ರಾಜ್ಯಪಾಲರವರು ವಿಧಾನ ಮಂಡಲದಲ್ಲಿ ಮಾಡಿದ ಭಾಷಣಕ್ಕೆ ವಂದನೆಗಳನ್ನು ಅರ್ಪಿಸುವುದಕ್ಕಾಗಿ ಶ್ರೀಮಾನ್ ಮಂಜಯ್ಯ ಶೆಟ್ಟಿಯವರು ಮಂಡಿಸಿರುವ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಲು ಬಯಸುತ್ತೇನೆ. 19 5ನೇ ಇಸವಿಯ ಕೊನೆಯ ಆರು ತಿಂಗಳುಗಳಲ್ಲಿ ದೇಶದಲ್ಲಿ ನಾನಾ ರೀತಿಯ ಅನಾಹುತಗಳು ಸಂಭವಿಸಿದವು. ಆದರೆ ಅವುಗಳನ್ನು ಧೈರ್ಯದಿಂದ ಎದುರಿಸಿ ಯಾವುದಕ್ಕೂ ಹೆದರದೆ ನಮ್ಮ ದೇಶವು ತನ್ನ ಪ್ರಗತಿಯನ್ನು ಮುಂದುವರಿಸಿಕೊಂಡು ಬಂದಿರುವುದು ಹೆಮ್ಮೆ ಪಡುವಂಥದ್ದಾಗಿದೆ. ದೇಶದ ಮಹಾನಾಯಕರಾಗಿದ್ದ ಪ್ರಧಾನಮಂತ್ರಿ ಲಾಲ ಬಹದೂರ್ ಶಾಸ್ತ್ರಿ ಅವರನ್ನು ಕಳೆದುಕೊಂಡೆವು. ಅವರ ಅಕಾಲ ನಿಧನದಿಂದ ದೇಶಕ್ಕೆ ತುಂಬಿ ಬರಲಾರದ ನಷ್ಟ ಉಂಟಾಯಿತು ಮತ್ತು ದೇಶದ ನಾನಾ ಭಾಗದಲ್ಲಿ ಬರಗಾಲ ಸಂಭವಿಸಿತು. ನಮ್ಮ ರಾಜ್ಯದಲ್ಲಿಯೂ ಕೂಡ ಬರಗಾಲದ ಹಾವಳಿಯಿಂದ ತೊಂದರೆಯಾಗಿದೆ. ಆಹಾರದ ಮತ್ತು ಇತರ ಸಮಸ್ಯೆಗಳನ್ನು ಬಿಡಿಸಲು ನಮ್ಮ ದೇಶದ ನಾಯಕರು ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ, ಮಾಡಿದ್ದಾರೆ. ಎಷ್ಟೇ ಕಷ್ಟಗಳು ಬಂದೊದಗಿದರೂ 3ನೇ ಯೋಜನೆಯನ್ನು ಯಶಸ್ವಿಯಾಗಿ ಮಾಡಲು ರಾಜ್ಯ ಸರ್ಕಾರ ಹಿಂದೆ ಬೀಳದೆ ಯೋಜನೆಗೆ ಗೊತ್ತುಪಡಿಸಿದ ಪ್ರಕಾರ ಹಣವನ್ನು ಖರ್ಚು ಮಾಡಿದೆ. ಮೂರನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ 250 ಕೋಟಿ ರೂಪಾಯಿ ಖರ್ಚುಮಾಡಬೇಕೆಂದು ಗೊತ್ತು ಪಡಿಸಲಾಗಿತ್ತು. ಇದರಲ್ಲಿ 243 ಕೋಟಿ ರೂಪಾಯಿ ಖರ್ಚು ಮಾಡಲಾಗಿದೆ ಅಂದರೆ ಗೊತ್ತುಪಡಿಸಿದ ಹಣದ ಸೇಕಡ 97ರಷ್ಟು ಹಣ ವೆಚ್ಚವಾಗುತ್ತದೆ. ನಾಲ್ಕನೇ ಯೋಜನೆ ಏಪ್ರಿಲ್ ತಿಂಗಳಿಂದ ಪ್ರಾರಂಭವಾಗುತ್ತದೆ. ಇದು ದೊಡ್ಡ ಯೋಜನೆಯಾಗಿದೆ. 1966-67ನೇ ಸಾಲಿನಲ್ಲಿ 50.72 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ಗೊತ್ತುಪಡಿಸಿದೆ. ಇದರಲ್ಲಿ ಒಕ್ಕಲತನಕ್ಕೆ ಹೆಚ್ಚು ಹಣ ಕೊಟ್ಟಿದೆ. ಇಂದಿನ ಪರಿಸ್ಥಿತಿಯಲ್ಲಿ ಅರ್ಧಕ್ಕಿಂತ ಹೆಚ್ಚು ಹಣ ಒಕ್ಕಲತನಕ್ಕೆ ಕೊಟ್ಟಿದ್ದು ಮಹತ್ವದ್ದಾಗಿದೆ ಎಂದು ಹೇಳಬಹುದು. ಇದುವರೆಗೆ ಅಧಿಕಾರ ಸ್ಥಾನದಲ್ಲಿರುವವರು, ಯೋಜನೆ ಮಾಡುವವರು ಮಂತ್ರಿಗಳು, ವ್ಯವಸಾಯಕ್ಕೆ ಹೆಚ್ಚು ಆಸಕ್ತಿ ವಹಿಸದ್ದರಿಂದ ಆಹಾರದಲ್ಲಿ ಪ್ರಗತಿ ಸಾಧನೆ ಮಾಡುವುದರ ಕಡೆಗೆ ಗಮನ ಕೊಡದೇ ಇದ್ದುದರಿಂದ ಪರದೇಶದಿಂದ ಧಾನ್ಯ ತರಿಸಬೇಕಾಯಿತು. ನಿಜವಾಗಿಯೂ ಆಹಾರ ಧಾನ್ಯ ವಿಚಾರದಲ್ಲಿ ನಾವು ನಮ್ಮ ಕಾಲ ಮೇಲೆ ನಿಲ್ಲಬೇಕು. ಆಹಾರ ಅಭಾವ ಪರಿಸ್ಥಿತಿ ಹೋಗಲಾಡಿಸಲು ಮೊದಲು ಆಹಾರ ಧಾನ್ಯ ಬೆಳೆಯತಕ್ಕ ರೈತರಿಗೆ ಹೆಚ್ಚಿನ ಅನುಕೂಲತೆ ಮಾಡಿ ಕೊಡಬೇಕಾದುದು ಅಗತ್ಯವೆಂದು ವಿಚಾರ ಮಾಡಿ ಒಕ್ಕಲತನಕ್ಕೆ ಹೆಚ್ಚು ಹಣ ಒದಗಿರುವುದು ಶುಭ ಸೂಚನೆ ಎಂದು ನಾನು ತಿಳಿದುಕೊಂಡಿದ್ದೇನೆ.

ನಮ್ಮ ರಾಜ್ಯ ಸರಕಾರ ಸಣ್ಣ ನೀರಾವರಿ ಯೋಜನೆಗಳಿಗೆ ಸಾಕಷ್ಟು ಹಣ ಖರ್ಚು ಮಾಡಿದೆ ಇನ್ನೂ ಹೆಚ್ಚು ಹಣ ಒದಗಿಸಬೇಕೆಂದು ಕೇಂದ್ರ ಸರಕಾರವನ್ನು ಕೇಳುತ್ತಿರುವುದು ಹೆಮ್ಮೆಯ ವಿಷಯ. ಸಣ್ಣ ನೀರಾವರಿ ಯೋಜನೆ ವಿಚಾರದಲ್ಲಿ ನಮ್ಮ ರಾಜ್ಯವು ಹೆಚ್ಚಿನ ಪ್ರಗತಿ ಸಾಧಿಸಿದೆ. ಭಾರತದ ಬೇರೆ ರಾಜ್ಯಗಳಲ್ಲಿ ಇಷ್ಟು ಪ್ರಗತಿ ಸಾಧನೆಯಾಗಿಲ್ಲ. ರಾಜ್ಯಪಾಲರ ಭಾಷಣ ನೋಡಿದರೆ ನಮ್ಮ ರಾಜ್ಯಸರಕಾರ ಸಣ್ಣ ನೀರಾವರಿ ಯೋಜನೆಗೆ ಹೆಚ್ಚು ಗಮನಕೊಟ್ಟಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಕೃಷ್ಣ ಮೇಲ್ದಂಡೆ ಯೋಜನೆಯನ್ನು ಆದಷ್ಟು ತೀವ್ರ ಮಾಡಲಾಗುವುದು ಎಂದು ಮುಖ್ಯ ಮಂತ್ರಿಗಳು ಹೇಳಿದ್ದರು. ಈ ಯೋಜನೆಯಿಂದ ಬರಗಾಲ ಪೀಡಿತ ಪ್ರದೇಶಗಳಿಗೆ ಅನುಕೂಲವಾಗುತ್ತದೆ ಅಲ್ಲದೆ ಶಾಶ್ವತ ಪರಿಹಾರ ಮಾಡಿದ ಹಾಗೆ ಆಗುತ್ತದೆ. ಕೃಷ್ಣಾನದಿಯ ಮೇಲ್ದಂಡೆ ಯೋಜನೆ ಪ್ರಸ್ತಾಪ ರಾಜ್ಯಪಾಲರ ಭಾಷಣದಲ್ಲಿ ಮಾಡಲಾಗಿದೆ, ಆದರೆ ಅದನ್ನು ನಾಲ್ಕನೇ ಯೋಜನೆಯಲ್ಲಿ ಸೇರಿಸಿದ್ದಾರೆಯೇ? ಅದಕ್ಕೆ ಎಷ್ಟು ಹಣ ಖರ್ಚುಮಾಡತಕ್ಕವರಿದ್ದಾರೆ ಎಂಬ ವಿವರ ಸ್ಪಷ್ಟವಾಗಿ ಇಲ್ಲ. ಬರಗಾಲದಿಂದ ಮೇಲಿಂದಮೇಲೆ ಪೀಡಿತವಾಗುವ ಗುಲ್ಬರ್ಗ, ರಾಯಚೂರು, ವಿಜಾಪುರ ಜಿಲ್ಲೆಗೆ ಈ ಯೋಜನೆಯಿಂದ ಅನುಕೂಲವಾಗುವುದರಿಂದ ಆ ಪ್ರದೇಶಕ್ಕೆ ಇದು ಬಹಳ ಮುಖ್ಯವಾದುದು. ಆದುದರಿಂದ ಈ ಯೋಜನೆಗೆ ಹೆಚ್ಚು ಲಕ್ಷ್ಯ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಆಂಧ್ರದವರು ನಾಗಾರ್ಜುನ ಸಾಗರ ಯೋಜನೆಯನ್ನು ಮುಗಿಸುವ ಹಂತದಲ್ಲಿದ್ದಾರೆ. ನಮಗೆ ಬರತಕ್ಕ ನೀರಿನ ಪಾಲು ಬಾರದೇ ಹೋದರೆ ಕೃಷ್ಣಾ ಯೋಜನೆ ಘಟಪ್ರಭಾ ಯೋಜನೆಗಳಿಗೆ ನೀರಿನ ಅಭಾವ ಬರಬಹುದು ಎಂದು ನನಗೆ ಸಂಶಯ

(ಶ್ರೀ ಎಸ್. ಎಂ. ಗುರೆಡ್ಡಿ)

ಬರುತ್ತದೆ. ಆದುದರಿಂದ ನಾವು ಸಣ್ಣ ನೀರಾವರಿ ಯೋಜನೆಗೆ ಹೆಚ್ಚು ಗಮನ ಕೊಡುವುದರ ಜೊತೆಗೆ ದೊಡ್ಡ ನೀರಾವರಿ ಯೋಜನೆಗೆ ಸಹ ಗಮನಕೊಡಬೇಕಾದುದು ಮುಖ್ಯ. ರೈತರಿಗೆ ಸಾಕಷ್ಟು ನೀರು ದೊರೆಯುತ್ತದೆ ಮತ್ತು ಕಡಿಮೆ ಖರ್ಚಿನಲ್ಲಿ ಹೆಚ್ಚು ಆದಾಯ ಸಂಪಾದನೆ ಮಾಡುವುದಕ್ಕೆ ದೊಡ್ಡ ನೀರಾವರಿ ಯೋಜನೆಯಿಂದ ಸಾಧ್ಯವಾಗುತ್ತದೆ. ಆದಕಾರಣ ದೊಡ್ಡ ನೀರಾವರಿ ಯೋಜನೆಗೆ ಗಮನ ಕೊಡತಕ್ಕದ್ದು ಪ್ರಾಮುಖ್ಯವಾದುದು.

ರಾಜ್ಯದಲ್ಲಿಯ ಜಲ ವಿದ್ಯುಚ್ಛಕ್ತಿಯ ಪ್ರಗತಿ ಬಗ್ಗೆ ನಾವು ಹೆಮ್ಮೆ ಪಡಬೇಕಾದುದ್ದು ನಿಜ. ನಮಗೆ ಶರಾವತಿ ಜಲ ವಿದ್ಯುಚ್ಛಕ್ತಿಯು ಸಾಕಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದೆ. ಆದರೆ ಅದರ ಉಪಯೋಗ ನಮ್ಮ ರಾಜ್ಯಕ್ಕೆ ಯಾವ ರೀತಿಯಿಂದ ಆಗಿದೆ, ಆಗುತ್ತಿದೆ ಎನ್ನುವುದನ್ನು ನಾವು ನೋಡಬೇಕಾಗಿದೆ. ನಾವು ಈಗಾಗಲೇ ಮದ್ರಾಸ್,ಕೇರಳ ರಾಜ್ಯಗಳಿಗೆ ವಿದ್ಯುತ್ತನ್ನು ಕೊಟ್ಟಿದ್ದೇವೆ ಮತ್ತು ಗೋವಾಕ್ಕೆ ಕೂಡ ಕೊಡಬೇಕೆಂದು ಇಚ್ಛಿಸಿದ್ದೇವೆ ಆದರೆ ನಮ್ಮಲ್ಲಿಯ ಕೈಗಾರಿಕೆಗಳಿಗೆ ಪಟ್ಟಣಗಳಿಗೆ ಹಳ್ಳಿಗಳಿಗೆ, ನೀರಾವರಿ ಬಾವಿಗಳಿಗೆ ವಿದ್ಯುತ್ತನ್ನು ಕೊಡತಕ್ಕ ಶಕ್ತಿ ನಮಗೆ ಇನ್ನೂ ದೊರೆತಿಲ್ಲ. ಇದಕ್ಕೆ ಒಂದ ನೆಪ ಎಂದರೆ ಕಂಬಗಳು ಟ್ರಾನ್ಸ್‌ಫಾರ್ಮರ್ಸ್ ಮತ್ತು ತಂತಿ ಸಿಕ್ಕುತ್ತಿಲ್ಲ ಎನ್ನುವುದು. ಬೇರೆ ರಾಜ್ಯಗಳಲ್ಲಿ ಕಂಬ ಟ್ರಾನ್ಸ್‌ಫಾರ್ಮರ್ಸ್ ಮತ್ತು ತಂತಿ ಸರಿಯಾಗಿ ಸಿಕ್ಕುವಾಗ ವಿದ್ಯುತ್ತನ್ನು ಸಾಕಷ್ಟು ಹುಟ್ಟಿಸುವಂಥ ನಮ್ಮ ರಾಜ್ಯದಲ್ಲಿ ಇವುಗಳ ಕೊರತೆ ಬರುವುದು ಅಷ್ಟು ಸರಿ ಕಾಣುವುದಿಲ್ಲ. ಪ್ರತಿಯೊಂದು ಹಳ್ಳಿಗೂ, ನೀರಾವರಿ ಬಾವಿಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಬೇಕು. ಹಾಗೆ ಮಾಡದೆ ಎರಡನೆಯವರಿಗೆ ನಮ್ಮಲ್ಲಿ ಉತ್ಪತ್ತಿ ಆಗುವ ವಿದ್ಯುತ್ತನ್ನು ಕೊಡುತ್ತ ಹೋದರೆ ರಾಜ್ಯದ ಪ್ರಗತಿಗೆ ಆತಂಕವನ್ನುಂಟುಮಾಡಿದಂತಾಗುತ್ತದೆ. ಜಲವಿದ್ಯುಚ್ಛಕ್ತಿಯಲ್ಲಿ ನಮ್ಮ ರಾಜ್ಯ ಶ್ರೀಮಂತಿಕೆಯ ರಾಜ್ಯವಾಗಬಹುದು. ಕಾಳಿ ನದಿ ಯೋಜನೆ ಕೆಲಸವನ್ನು ಕಾರ್ಯಗತ ಮಾಡಿದರೆ ನಾಲ್ಕನೆಯ ಯೋಜನೆಯಲ್ಲಿ ಇದನ್ನು ಅಳವಡಿಸಿಕೊಳ್ಳಬೇಕು ಇಲ್ಲದೆ ಕೇಂದ್ರಸರ್ಕಾರಕ್ಕೇನೇ ಇದನ್ನು ಪೂರ್ಣವಾಗಿ ಕಾರ್ಯಗತ ಮಾಡುವುದನ್ನು ವಹಿಸಿಕೊಡಬೇಕು. ವಿದ್ಯುಚ್ಛಕ್ತಿಯಿಂದ ದೇಶದ ರಾಜ್ಯದ ಭವಿತವ್ಯವು ನಿರ್ಧಾರವಾಗುತ್ತದೆ. ಆದ್ದರಿಂದ ವಿದ್ಯುಚ್ಛಕ್ತಿಯ ಕಡೆಗೆ ಹೆಚ್ಚು ಗಮನ ಕೊಡುವುದು ನಮ್ಮ ಕರ್ತವ್ಯ.

ಉದ್ಯಮಗಳ ವಿಚಾರದಲ್ಲಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅಲ್ಯೂಮಿನಿಯಂ ಕಾರ್ಖಾನೆ ಬೆಳಗಾಂ ಹತ್ತಿರ ಬರುತ್ತದೆ ಎಂದು ಹೇಳಿದ್ದಾರೆ. ಆದರೆ ನಮ್ಮಲ್ಲಿ ಜಲವಿದ್ಯುಚ್ಛಕ್ತಿ ಹೆಚ್ಚು ಉತ್ಪತ್ತಿಯಾಗುತ್ತಿರುವಾಗ ಕೇವಲ ಒಂದೇ ಒಂದು ದೊಡ್ಡ ಕಾರ್ಖಾನೆ ಬಂದರೆ ಉದ್ಯಮಗಳಲ್ಲಿ ನಮ್ಮ ರಾಜ್ಯ ಯಾವ ಪ್ರಗತಿಯನ್ನು ಸಾಧಿಸುತ್ತಿದೆ ಎನ್ನುವುದನ್ನು ಸ್ಪಷ್ಟ ತೋರಿಸುತ್ತದೆ. ಹೊಸಪೇಟೆಯಲ್ಲಿ ಒಂದು ಉಕ್ಕಿನ ಕಾರ್ಖಾನೆ ಬರುತ್ತದೆ ಎನ್ನುವ ನಿರೀಕ್ಷೆ ಇದ್ದದ್ದು ಹೋಯಿತು. ಸಣ್ಣ ಪ್ರಮಾಣದಲ್ಲಿಯಾದರೂ ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆಯನ್ನು ಕೇಂದ್ರದವರು ಸ್ಥಾಪಿಸುತ್ತಾರೆ ಎಂದು ರಾಜ್ಯದಲ್ಲಿ ಜನ ಬಹಳ ಕಾತುರತೆಯಿಂದ ಕಾಯುತ್ತಿದ್ದರು. ಅದೂ ಕೂಡ ಇಲ್ಲದೇ ಹೋಯಿತು. ಮಂಗಳೂರಿನಲ್ಲಿ ಒಂದು ಗೊಬ್ಬರದ ಕಾರ್ಖಾನೆಯನ್ನು ಹಾಕಬೇಕು ಎಂದು ರಾಜ್ಯ ಸರ್ಕಾರ ವಿಚಾರ ಮಾಡಿದ್ದಾಗಿ ಮೊನ್ನೆ ಪ್ರಶ್ನೋತ್ತರ ಕಾಲದಲ್ಲಿ ನಮ್ಮ ಉದ್ಯಮದ ಮಂತ್ರಿಗಳು ಹೇಳಿದರು. ಆದರೆ ರಾಜ್ಯಪಾಲರ ಭಾಷಣದಲ್ಲಿ ಅಲ್ಯೂಮಿನಿಯಂ ಫ್ಯಾಕ್ಟರಿ ಹೊರತು ಫರ್ಟಿಲೈಸರ್ ಫ್ಯಾಕ್ಟರಿ ಸಂಬಂಧ ನಿರ್ದಿಷ್ಟವಾಗಿ ಸರ್ಕಾರದ ಧೋರಣೆ ಏನಿದೆ ಎನ್ನುವುದು ವಿದಿತವಾಗಿಲ್ಲ.

ವ್ಯವಸಾಯಕ್ಕೆ ಹೆಚ್ಚು ಹಣ ಬೇಕು ಸರಿ. ಆದರೆ ಕೇವಲ ಹಣ ಕೊಟ್ಟರೆ ಹೆಚ್ಚು ಆಹಾರವನ್ನು ಬೆಳೆಯುತ್ತೇವೆ ಎನ್ನುವ ಮಾತು ಸತ್ಯಕ್ಕೆ ದೂರವಾದುದು. ಒಕ್ಕಲಿಗರಿಗೆ ಮುಖ್ಯವಾಗಿ ಬೇಕಾದುದೆಂದರೆ ನೀರು, ಅನಂತರ ಗೊಬ್ಬರ. ಗೊಬ್ಬರದ ಮತ್ತು ನೀರಿನ ಅಭಾವದಿಂದಲೇ ನಮ್ಮಲ್ಲಿ ಆಹಾರಾಭಾವ ಹೆಚ್ಚಾಗುತ್ತಿದೆ ಕಾರಣ ಅವುಗಳನ್ನು ಸರಕಾರ ದೊರಕಿಸಿಕೊಡಬೇಕು. ನಾವು ನೀರಾವರಿಗೆ ಸಾಕಷ್ಟು ಹಣವನ್ನು ಖರ್ಚು ಮಾಡುತ್ತಿದ್ದೇವೆ. ನೀರಾವರಿ ಹೆಚ್ಚಾಗುತ್ತಿರುವ ಹಾಗೆ ಭೂಮಿಗೆ ಗೊಬ್ಬರವನ್ನು ಹೆಚ್ಚಾಗಿ ಕೊಡಬೇಕಾಗುತ್ತದೆ ಎನ್ನುವುದನ್ನು ನಾವು ಗಮನಿಸಬೇಕು. ಮಂಗಳೂರಿನಲ್ಲಿ ಸ್ಥಾಪಿಸುವಂಥ ಗೊಬ್ಬರ (ಫರ್ಟಿಲೈಸರ್) ಕಾರ್ಖಾನೆಯಿಂದಷ್ಟೇ ನಮ್ಮ ರಾಜ್ಯಕ್ಕೆ ಸಾಕಷ್ಟು ಗೊಬ್ಬರ ದೊರೆಯಲಾರದು, ಇನ್ನೂ ಹೆಚ್ಚು ಇಂಥ ಕಾರ್ಖಾನೆಗಳು ನಮ್ಮಲ್ಲಿ ಆಗಲೇ ಬೇಕು.

ನಮ್ಮ ರಾಜ್ಯದಲ್ಲಿ ಕೆಲವೊಂದು ಪ್ರದೇಶಗಳಲ್ಲಿ ಉದ್ಯಮಗಳ ಸ್ಥಾಪನೆಯಾಗುತ್ತ ಇಲ್ಲ. ಕೆಲವೇ ಸ್ಥಳಗಳಲ್ಲಿ ಉದ್ಯಮಗಳು ಬೆಳೆಯುತ್ತಿವೆ. ಇದು ನಿಲ್ಲಬೇಕು. ಪ್ರತಿಯೊಂದು ಕಡೆಯೂ ಉದ್ಯಮಗಳು ಬೆಳೆಯಬೇಕು, ಬೆಳೆಸಬೇಕು ಒಂದೇ ಕಡೆ ಉದ್ಯಮಗಳನ್ನು ಸ್ಥಾಪನೆ ಮಾಡುವುದರಿಂದ

ಇಲ್ಲದ ಕಡೆ ನಿರುದ್ಯೋಗ ಸಮಸ್ಯೆ ಹೆಚ್ಚಾಗಿ ಜನರ ಬಡತನ ಹೋಗಲು ಸಾಧ್ಯವಿಲ್ಲ. ಪ್ರತಿಯೊಂದು
ಜಿಲ್ಲೆಯಲ್ಲಿಯೂ ಯಾವ ಉದ್ಯಮಗಳನ್ನು ಸ್ಥಾಪಿಸುವುದಕ್ಕೆ ಸಾಧ್ಯವಿದೆಯೋ ಅದನ್ನು ಗಮನಿಸಿ
ಅಂಥ ಉದ್ಯಮಗಳನ್ನು ಅಲ್ಲಿ ಸ್ಥಾಪನೆ ಮಾಡಬೇಕು. ಬೆಳಗಾಂವದಲ್ಲಿ ಒಂದು ಸಿಮೆಂಟ್ ಕಾರ್ಖಾನೆ
ಆಗುತ್ತದೆ. ಅದರಂತೆಯೇ ಬಿಜಾಪುರ ಜಿಲ್ಲೆಯ ತಾಳಿಕೋಟೆ ಹತ್ತಿರ ಸಿಮೆಂಟ್ ಉದ್ಯಮಕ್ಕೆ
ಬೇಕಾದ ಕಚ್ಚಾಮಾಲು ಸಿಕ್ಕುತ್ತದೆ ಎನ್ನುವುದನ್ನು ಸರ್ಕಾರ ಅರಿತುಕೊಂಡಿದೆ ಎಂದು ಕೇಳಿದ್ದೇನೆ.
ರಾಜ್ಯದಲ್ಲಿ ಸಾಕಷ್ಟು ನೀರಾವರಿ ಯೋಜನೆಗಳನ್ನು ಕೈಕೊಂಡಿರುವುದರಿಂದ ಕೈಕೊಳ್ಳುವುದರಿಂದ
ಆ ಕೆಲಸಗಳಿಗೆ ಬೇಕಾಗುವ ಸಿಮೆಂಟಿನ ಅಭಾವವನ್ನು ನೀಗಿಸಬೇಕಾದರೆ ತಾಳಿಕೋಟೆಯಲ್ಲಿಯೂ
ಕೂಡ ಒಂದು ಸಿಮೆಂಟ್ ಕಾರ್ಖಾನೆಯನ್ನು ಹಾಕುವ ಮನಸ್ಸು ಮಾಡಬೇಕು.

ಒಕ್ಕಲುತನದ ಬಗ್ಗೆ ನಾವು ಈಗ ಸಾಕಷ್ಟು ಗಮನವನ್ನು ಕೊಡುತ್ತಿದ್ದೇವೆ. ಆದರೂ
ಒಕ್ಕಲುತನ ಇಂದು ಯಾವ ಸ್ಥಿತಿಯಲ್ಲಿದೆ, ಒಕ್ಕಲುತನಕ್ಕೆ ಬೇಕಾದಂಥ ಸಲಕರಣೆಗಳು ರೈತರಿಗೆ
ಒದಗಿಸುತ್ತಿದ್ದೇವೆಯೋ ಇಲ್ಲವೋ ಎನ್ನುವುದನ್ನು ನೋಡಬೇಕು. ಇಂದು ರೈತ ಎಚ್ಚೆತ್ತಿದ್ದಾನೆ.
ಹೆಚ್ಚು ಬೆಳೆಯಬೇಕೆಂಬ ಉತ್ಸಾಹ ಅವನಲ್ಲಿದೆ. ಅವನಿಗೆ ಅವಶ್ಯಕವಾದ ಗೊಬ್ಬರ, ಸುಧಾರಿಸಿದ ಬೀಜ
ಇವುಗಳನ್ನು ಒದಗಿಸುವುದು ಸರ್ಕಾರದ ಮುಖ್ಯ ಕರ್ತವ್ಯ. ಈಗ ಹೈಬ್ರಿಡ್ ಬೀಜ ಬಹಳ ಪ್ರಚಾರ
ದಲ್ಲಿದೆ. ಅದು ಸಾಮಾನ್ಯ ಬಡ ರೈತನಿಗೆ ದೊರಕಲು ಸಾಧ್ಯವಿಲ್ಲ. ಒಂದು ಕಿಲೋಗ್ರಾಮಿಗೆ
ಎಂಟು ರೂಪಾಯಿ ಬೆಲೆ ಬೀಳುತ್ತದೆ. ಅಂದ ಮೇಲೆ ಬಡ ರೈತ ಈ ಬೀಜಗಳನ್ನು ತಂದು ಹಾಕುವು
ದಕ್ಕೆ ಸಾಧ್ಯವಿದೆಯೇ ಎನ್ನುವುದನ್ನು ವಿಚಾರ ಮಾಡಬೇಕು. ಇದಕ್ಕೆ ನಾನು ಹೇಳುವುದೇನೆಂದರೆ,
ರಾಜ್ಯದಲ್ಲಿ ಸರ್ಕಾರಿ ಸೀಡ್ ಫಾರಂಗಳಿವೆ; ಎಲ್ಲ ಫಾರಂಗಳಲ್ಲಿಯೂ ಹೈಬ್ರಿಡ್ ಬೀಜಗಳನ್ನು
ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕು. ಅಗತ್ಯವಾದರೆ ಕೆಲವು ಜನರನ್ನು ಈ ವಿಚಾರದಲ್ಲಿ ಶಿಕ್ಷಣ
ಪಡೆಯಲು ಕಳಿಸಿಕೊಟ್ಟು ರೈತರಿಗೆ ಸಹಾಯ ಮಾಡುವ ಗುರಿಯನ್ನಿಟ್ಟುಕೊಳ್ಳಬೇಕು. ರೈತ
ನಾದವನು ಈಗ ಬಹಳ ಹುಮ್ಮಸ್ಸಿನಿಂದ ಹೆಚ್ಚು ಬೆಳೆಯಬೇಕು ಎಂದು ಮುಂದೆ ಬರುತ್ತಿದ್ದಾನೆ.
ಹೆಚ್ಚು ಬೆಳೆಯಲು ಅವನಿಗೆ ಅವಶ್ಯವಾದ ಸಹಾಯವನ್ನು ಕೊಡದೆ ಹೋದರೆ ಅವನ ಉತ್ಸಾಹಕ್ಕೆ
ಕೊಡಲಿ ಪೆಟ್ಟು ಕೊಟ್ಟ ಹಾಗೆ ಆಗುತ್ತದೆ. ಆದುದರಿಂದ ಸರ್ಕಾರಿ ಸೀಡ್ ಫಾರಂಗಳಲ್ಲಿ ಹೈಬ್ರಿಡ್
ಬಿತ್ತನೆ ಬೀಜಗಳನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕು. ಕೆಲವು ಜನ ಹೈಬ್ರಿಡ್ ಬೀಜ
ಎಂದು ಹೇಳಿ ಸಾಧಾರಣ ಸುಮಾರಾದ ಬಿತ್ತನೆಯನ್ನು ಕೊಟ್ಟು ರೈತರನ್ನು ಮೋಸ ಮಾಡು
ತ್ತಿದ್ದಾರೆಂದು, ಆ ಬೀಜದಿಂದ ಒಂದೂ ನಾಟಿ ಆಗಿಲ್ಲ ಎಂಬ ಕೂಗಿದೆ. ಇದನ್ನು ನಿಲ್ಲಿಸಬೇಕು.
ಪ್ರತಿಯೊಬ್ಬರಲ್ಲಿಯೂ ಹೈಬ್ರಿಡ್ ಬೀಜದ ಭಾವನೆ ಬರುತ್ತಿದೆ ಬಂದಿದೆ. ಇದನ್ನು ಪೂರೈಸಿದರೆ
ರಾಜ್ಯದಲ್ಲಿರುವ ಆಹಾರದ ಕೊರತೆಯನ್ನು ನೀಗುವುದಕ್ಕೆ ಸಾಧ್ಯವಾಗುತ್ತದೆ.

ಹೈಬ್ರಿಡ್ ಉಪಯೋಗಿಸಿರಿ, ರಸಾಯನಿಕ ಗೊಬ್ಬರವನ್ನು ಉಪಯೋಗಿಸಿರಿ, ಕ್ರಿಮಿನಾಶಕ
ಗಳನ್ನು ಹೊಡೆಯಿರಿ ಎಂದು ಒಕ್ಕಲುತನದ ಖಾತೆಯವರು ಪ್ರಚಾರ ಮಾಡುತ್ತಿದ್ದಾರೆ. ಆದರೆ
ರೈತ ಯಾವ ಸ್ಥಿತಿಯಲ್ಲಿದ್ದಾನೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಅವನಿಗೆ ಆಧುನಿಕ
ಪದ್ಧತಿಯಿಂದ ವ್ಯವಸಾಯ ಮಾಡಲು ಹೇಳಿದರೆ ಸಾಧ್ಯವಿಲ್ಲ, ಅವನಿಗೆ ಅಷ್ಟು ಜ್ಞಾನವಿಲ್ಲ ಕಾರಣ
ಪ್ರತಿಯೊಂದು ತಾಲ್ಲೂಕು ಅಥವಾ ಜಿಲ್ಲಾ ಮಟ್ಟದಲ್ಲಿ ಆಧುನಿಕ ಪದ್ಧತಿಯಿಂದ ಬೇಸಾಯ ಮಾಡು
ವಂಥ ಉಚಿತ ಶಿಕ್ಷಣವನ್ನು ಸ್ವಲ್ಪದಿನಗಳಲ್ಲಿ ಕೊಡುವಂತೆ ಮಾಡಬೇಕು.

ಸಂಪರ್ಕ ಸಾಧನಗಳ ಬಗ್ಗೆ ನಾವು ಹೆಚ್ಚು ಖರ್ಚು ಮಾಡಿದ್ದೇವೆ ಎನ್ನುವಂಥದ್ದು ಹೆಮ್ಮೆಯ
ಮಾತು ಸರಿ. ರಾಜ್ಯಪಾಲರ ಭಾಷಣದಲ್ಲಿ ರೂರಲ್ ಕಮ್ಯೂನಿಕೇಷನ್ಸ್‌ದಲ್ಲಿ ಹೆಚ್ಚಿನ ಪ್ರಗತಿಯನ್ನು
ಸಾಧಿಸಿದ್ದೇವೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ಆದರೆ ಇವತ್ತಿನ ದಿವಸ ನಾವು ಹಾಕಿದಂಥ
ರಸ್ತೆಗಳ ಪರಿಸ್ಥಿತಿ ಯಾವ ರೀತಿ ಇವೆ ಎನ್ನುವುದನ್ನು ನೋಡಬೇಕು. ಈ ರಸ್ತೆಗಳಲ್ಲಿ ವಾಹನಗಳು
ಹೋಗುವುದಿರಲಿ, ಮನುಷ್ಯರು ಕೂಡ ತಿರುಗಾಡಲಿಕ್ಕೆ ಆಗದಂಥ ಪರಿಸ್ಥಿತಿಯಲ್ಲಿವೆ. ಇವುಗಳನ್ನು
ದುರಸ್ತು ಮಾಡಲು ಒಂದು ಯೋಜನೆಯನ್ನು ನಾವು ಹಾಕಿಕೊಳ್ಳಬೇಕು. ಇದಕ್ಕಾಗಿ ಹೆಚ್ಚು
ಹಣವನ್ನು ಖರ್ಚು ಮಾಡಬೇಕೆಂದು ಬಹಳ ಕಳಕಳಿಯಿಂದ ಹೇಳುತ್ತೇನೆ. ನಮ್ಮಲ್ಲಿ ಒಂದು
ತಾಲ್ಲೂಕಿನಿಂದ ಜಿಲ್ಲಾ ಸ್ಥಳಗಳಿಗೆ ಹೋಗತಕ್ಕ ರಸ್ತೆಗಳು ಸರಿಯಾದ ಸ್ಥಿತಿಯಲ್ಲಿಲ್ಲ. ಮಳೆಗಾಲದಲ್ಲಿ
ಸಾರಿಗೆ ಸಂಪರ್ಕ ಬಂದಾಗುತ್ತದೆ. ಅಂದ ಮೇಲೆ ನಾವು ಖರ್ಚು ಮಾಡಿದಂಥ ಹಣ ಎಲ್ಲಿ
ಹೋಯಿತು ಅಥವಾ ಯಾವ ಕಡೆ ಖರ್ಚಾಯಿತು ಎನ್ನುವುದನ್ನು ನಾವು ವಿಚಾರ ಮಾಡಬೇಕಾಗುತ್ತದೆ.
ಯಾವುದು ಹಿಂದುಳಿದ ಪ್ರದೇಶ ಇದೆಯೋ ಅದಕ್ಕೆ ಹೆಚ್ಚು ಗಮನ ಕೊಟ್ಟು ಅದನ್ನು ಉಳಿದ
ಪ್ರದೇಶಗಳ ಹತ್ತಕ್ಕೆ ತರುವಂತಹ ಕೆಲಸ ಮಾಡಬೇಕೇ ಹೊರತು, ಸುಮ್ಮನೆ ಹಣವನ್ನು ಬೇಕಾದಲ್ಲಿ
ಬೇಕಾದ ಹಾಗೆ ಖರ್ಚು ಮಾಡುತ್ತಾ ಹೋದರೆ ಅದರಿಂದ ಯಾವ ಉಪಯೋಗವೂ ಆಗುವುದಿಲ್ಲ.
ಸಂಪರ್ಕ ಸಾಧನೆಗೆ ಹಣ ಸಿಕ್ಕಾಪಟ್ಟೆ ಖರ್ಚಾಗುತ್ತಲೇ ಇದೆಯೇ ವಿನಾ ಯಾವ ನಿಗದಿಯಾದ

(ಶ್ರೀ ಎಸ್. ಎಂ. ಗುರಡ್ಡಿ)

ಕೆಲಸಗಳಿಗೆ ಯೋಜನೆಗೆ ಖರ್ಚಾಗಬೇಕೋ ಅದಕ್ಕೆ ಆಗುತ್ತಾ ಇಲ್ಲ. ಕಾರಣ ಸರ್ಕಾರದವರು ರೊಕ್ಕ ಖರ್ಚು ಮಾಡುವಾಗ ಹೆಚ್ಚು ನಿಗಾ ವಹಿಸಬೇಕು. ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಪ್ರಶ್ನೋತ್ತರ ಸಮಯದಲ್ಲಿ ಹೇಳಿದರು, ಒಬ್ಬ ಕಂಟ್ರಾಕ್ಟರನು 11 ಲಕ್ಷ ರೂಪಾಯಿ ಪರಿಹಾರ ಧನ ಕೇಳಿದ್ದಾನೆ ನಾರಾಯಣಪುರ ಕೆಲಸದಲ್ಲಿ 55 ಸಾವಿರ ರೂಪಾಯಿಗಳನ್ನು ಕೊಡಲು ಅಧಿಕಾರಿಗಳಿಂದ ಶಿಫಾರಸ್ ಬಂದಿವೆ ಎಂದು ಹೇಳಿದರು ಇದನ್ನು ನಿಜವಾಗಿಯೂ ವಿಚಾರ ಮಾಡಿದರೆ ನಮ್ಮ ಪ್ಲಾನ್ ಎತ್ತ ಸಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಯಾವುದೇ ಕೆಲಸವನ್ನು ಶುರುಮಾಡುವ ಮೊದಲು, ಪೂರ್ವಭಾವಿಯಾಗಿ ಎಲ್ಲವನ್ನೂ ವಿಚಾರಿಸಬೇಕು. ಅದರಲ್ಲಿ ದೊಡ್ಡ ಯೋಜನೆಯ ಕೆಲಸಗಳನ್ನು ಶುರುಮಾಡುವಾಗ ಪೂರ್ವಭಾವಿಯಾಗಿ, ಸ್ಥಳ, ಅದರ ಉಪಯುಕ್ತತೆ ಮುಂತಾದುವುಗಳನ್ನು ಒಂದಲ್ಲಾ ಎರಡು ಮೂರು ಸಲ ಪರೀಕ್ಷಿಸಿ ವಿಚಾರ ಮಾಡಿ ಕೆಲಸವನ್ನು ಪ್ರಾರಂಭಮಾಡಬೇಕು ಇಲ್ಲವೇ ಹೋದರೆ ಅವಕ್ಕೆ ಖರ್ಚಾದ ಹಣವೆಲ್ಲಾ ಅನ್ಯಾಯವಾಗಿ ಖರ್ಚಾದಂತಾಗುತ್ತದೆ. ಎಷ್ಟೋ ಕಡೆ ಈ ರೀತಿ ಸಿಕ್ಕಾಪಟ್ಟೆ ಹಣ ಖರ್ಚಾಗುತ್ತಾ ಇದೆ, ಯಾವುದಕ್ಕೆ ಅವಶ್ಯವಾಗಿ ಖರ್ಚಾಗಬೇಕೋ ಅದಕ್ಕೆ ಆಗುತ್ತಾ ಇಲ್ಲ! ನಮ್ಮ ಪ್ಲಾನ್‌ಗಳು ಫಲಪ್ರದವಾಗಿ ಆಗಬೇಕಾದರೆ ಯಾವುದಕ್ಕೆ ಅವಶ್ಯವಾಗಿ ಖರ್ಚಾಗಬೇಕೋ ಅದಕ್ಕೆ ಖರ್ಚು ಮಾಡುವುದರ ಕಡೆಗೆ ಹೆಚ್ಚು ಗಮನ ಕೊಡಬೇಕು. ನಾವು ಮೂರು ಪಂಚವಾರ್ಷಿಕ ಯೋಜನೆಗಳನ್ನು ಪೂರ್ತಿಗೊಳಿಸಿದ್ದೇವೆ. ಆದರೂ ಕೂಡ ದೇಶದಲ್ಲಿಯ ಬಡತನ ನಿರುದ್ಯೋಗ ಏನಾದರೂ ಕಡಿಮೆಯಾಗಿದೆಯೇ ಎಂದರೆ ನಮ್ಮ ದೇಶದ ಜನರ ಬಡತನ ಹೆಚ್ಚಾಗುತ್ತಾ ಇದೆ, ನಿರುದ್ಯೋಗ ಹೆಚ್ಚಾಗುತ್ತಾ ಇದೆ, ಅಂದಮೇಲೆ ಈ ಪ್ಲಾನ್‌ಗಳಿಂದ ಏನು ಉಪಯೋಗ ಆಗಿದೆ ಎಂಬುದನ್ನು ಸಾಮಾನ್ಯವಾಗಿ ವಿಚಾರ ಮಾಡಬೇಕಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರಶ್ನೋತ್ತರಗಳ ಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಶ್ರೀ ಕೆ. ಎಚ್. ರಾವ್ ಅವರು ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಸೈಟನ್ನು ಬದಲಾವಣೆ ಮಾಡಿದರು ಎಂದು ಹೇಳಿದರು. ಈ ಅಪ್ಪರ್ ಕೃಷ್ಣಾ ಸೈಟ್ ಬದಲಾವಣೆ ಮಾಡಿದ್ದರಲ್ಲಿ ರಾಜಕೀಯ ಒತ್ತಡ ಏನಾದರೂ ಇದೆಯೇ ಎಂದು ಅವರನ್ನು ನಾನು ಕೇಳುತ್ತೇನೆ.

ಶ್ರೀ ಎಸ್. ಎಂ. ಗುರಡ್ಡಿ.—ಅದು ನನಗೆ ಹೇಳಲಿಕ್ಕೆ ಸಾಧ್ಯವಿಲ್ಲ. ಬಂದರ ಅಭಿವೃದ್ಧಿ ಕಡೆಗೆ ರಾಜ್ಯ ಸರ್ಕಾರ ಸಾಕಾದಷ್ಟು ಗಮನ ಕೊಟ್ಟು ಈಗಾಗಲೇ ಮಂಗಳೂರು ಬಂದರಿನ ಕಾರ್ಯ ಶುರುವಾಗಿದೆ ಎಂದು ಕೇಳುತ್ತಾ ಇದ್ದೇವೆ. ಅದರಂತೆ ಇನ್ನೂ ಮಹತ್ವಪೂರ್ಣ ಬಂದರುಗಳ ಕೆಲಸಗಳಿವೆ ಅವುಗಳನ್ನು ತೀವ್ರ ಶುರುಮಾಡಬೇಕು. ಕಾರವಾರ ಬಂದರದ ಎರಡನೆ ಸ್ಟೇಜ್‌ದ ಕೆಲಸ ತೀವ್ರ ಚಾಲುಮಾಡಿದರೆ ಆ ಭಾಗದಲ್ಲಿ ಇದ್ದಂತಹ ಪ್ರದೇಶಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ಅದನ್ನು ತೀವ್ರ ಕಾರ್ಯರೂಪಕ್ಕೆ ತರಬೇಕಾಗಿ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಆಹಾರದ ಹಂಚಿಕೆಯ ವ್ಯವಸ್ಥೆಯ, ಮೇಲೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಆಹಾರದ ಮೂವೆಂಟ್ ವಿಷಯದಲ್ಲಿ ಜನರಲ್ಲಿ ಅತೃಪ್ತಿ ಬೆಳೆಯುತ್ತಲಿದೆ. ಪ್ರತಿಯೊಬ್ಬರಿಗೂ ಸರಿಯಾಗಿ ಸಮರ್ಪಕವಾಗಿ ಆಹಾರವನ್ನು ಕೊಡುವ ಹಂಚುವ ವ್ಯವಸ್ಥೆಯಲ್ಲಿ ಸರ್ಕಾರದವರು ಪೋಲೀಸ್‌ನವರ ಕೈಯಲ್ಲಿ ಮರ್ಚೆಂಟ್ಸ್ ಅಥವಾ ಹೋರ್ಡರ್ಸ್‌ನ್ನು ಕೊಡುವುದರಿಂದ ಆಹಾರದ ಸಮಸ್ಯೆಯನ್ನು ನೀಗಿಸಿದಂತಾಗುವುದಿಲ್ಲ, ನಿರ್ದಿಷ್ಟವಾದ ಕ್ರಮ ತೆಗೆದುಕೊಳ್ಳಬೇಕು. ಲೆವ್ಹಿ ವಸೂಲಿಯಲ್ಲಿ ಉಗ್ರ ಕ್ರಮ ತೆಗೆದುಕೊಳ್ಳಿರಿ. ಲೆವಿ ಕೊಡದಿದ್ದರೆ ಅಂಥವರನ್ನು ಕ್ರೂರವಾಗಿ ಶಿಕ್ಷೆ ಮಾಡಿ. ಲೆವಿ ಕೊಟ್ಟಮೇಲೆ ರಾಜ್ಯದಲ್ಲಿ ಆಹಾರ ಧಾನ್ಯದ ಫ್ರೀ ಮೂವ್‌ಮೆಂಟಿಂಗ್ ಅವಕಾಶ ಕೊಡಬೇಕು. ಈಗಿನ ಆಹಾರದ ಮೂವ್‌ಮೆಂಟ್ ಕಂಟ್ರೋಲ್ ಏನಿದೆ ಇದು ಲಂಚಗುಳಿತನಕ್ಕೆ ಆಸ್ಪದ ಕೊಟ್ಟಿದೆ. ಇದನ್ನು ಪ್ರಾಮಾಣಿಕ ವ್ಯಾಪಾರಸ್ಥರಿಗೂ ಕೂಡ ಪೋಲೀಸ್‌ನವರಿಂದ ಸುಮ್ಮನೆ ತ್ರಾಸವಾಗುತ್ತದೆ. ಇದರಿಂದ ಆಹಾರ ಪರಿಸ್ಥಿತಿಯನ್ನು ಸುಧಾರಿಸುವುದಿಲ್ಲ. ಕೊರತೆಯ ಪ್ರದೇಶಗಳಿಗೆ ಜಿಲ್ಲೆಗಳಿಗೆ ಆಹಾರವನ್ನು ಸಾಗಿಸಲು ಅಡ್ಡಿ ಬಹಳೇ ಆಗುತ್ತದೆ. ಕಾರಣ ಗಡಿಗಳಲ್ಲಿ ಆಹಾರ ಧಾನ್ಯ ಕಳ್ಳತನದಿಂದ ಸಾಗಾಟವಾಗುತ್ತಾ ಇದ್ದ ಪಕ್ಷದಲ್ಲಿ ಅದಕ್ಕೆ ಕಠಿಣವಾದ ಶಿಕ್ಷೆಯನ್ನು ಮಾಡಿ ಅವಕ್ಕೆ ಯಾರೂ ಬೇಡ ಎಂದು ಹೇಳುವುದಿಲ್ಲ. ಆದರೆ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ತೆಗೆದುಕೊಂಡು ಹೋಗುವಾಗ ಸಾಕಾದಷ್ಟು ಅತಂಕಗಳು ಅಧಿಕಾರಿಗಳಿಂದ ಬರುತ್ತಾ ಇದೆ. ಅವನ್ನು ತಪ್ಪಿಸಬೇಕೆಂದು ಆಹಾರ ಸಚಿವರಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ. ಈಗಾಗಲೇ ನಮ್ಮ ಕಿವಿಗೆ ಬೀಳುತ್ತಾ ಇದೆ, ಪೋಲೀಸರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡುತ್ತಾ ಇದ್ದಾರೆಂದು. ಆದ ಕಾರಣ ಇವತ್ತಿನ ದಿವಸ ಮೂವೆಂಟ್ ಕಂಟ್ರೋಲ್ ಏನಿದೆ ಅದನ್ನು ಜಾರಿ ಮಾಡ

ತಕ್ಕ ಅಧಿಕಾರಿಗಳಿಂದ ಬಹಳ ಕಿರುಕುಳವುಂಟಾಗುತ್ತಾ ಇದೆ. ಇದನ್ನು ತಪ್ಪಿಸಲು ಹೆಚ್ಚು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಆಹಾರ, ಇದು ಪ್ರತಿಯೊಬ್ಬರ ಜೀವಾಳದ ಪ್ರಶ್ನೆಯಾಗಿದೆ. ಇದನ್ನು ನೀಗಿಸಲಿಕ್ಕೆ ಎಲ್ಲರೂ ಸಹಕಾರವನ್ನು ಮಾಡುವುದು ಅವಶ್ಯ, ಮಾಡುತ್ತಾ ಇದ್ದಾರೆ. ಈ ಸಹಕಾರದ ಉಪಯೋಗವನ್ನು ತಾವು ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ಸದ್ಯಕ್ಕೆ ಕೇಂದ್ರ ಸರ್ಕಾರದಿಂದ ನಾವು ಆಹಾರವನ್ನು ಅಪೇಕ್ಷಿಸುತ್ತಿದ್ದೇವೆ ಮತ್ತು ಈಗಾಗಲೇ ಕಳಿಸಲಿಕ್ಕೆ ಹತ್ತಿದ್ದಾರೆ ಎಂಬ ಮಾತನ್ನು ಕೇಳುತ್ತಾ ಇದ್ದೇವೆ. ನಮಗೆ ಗೋಧಿಯನ್ನಾಗಲಿ, ಮೇಜ್‌ನ್ನಾಗಲಿ ಅಥವಾ ಅಕ್ಕಿಯನ್ನಾಗಲಿ ಕೇಂದ್ರ ಸರ್ಕಾರದವರು ಎಷ್ಟು ಕೊಟ್ಟಿದ್ದಾರೆ ಕೊಡಲು ಒಪ್ಪಿದ್ದಾರೆ ? ಎರಡು ದಿವಸಗಳಿಂದ ಕೇರಳದಲ್ಲಿ ಆಹಾರಕ್ಕಾಗಿ ಹಾಹಾಕಾರ ಎದ್ದಿದೆ. ನಮ್ಮ ರಾಜ್ಯದಲ್ಲಿ ಆ ಸ್ಥಿತಿ ಬರಲಿಕ್ಕೆ ಸಾಧ್ಯವಿಲ್ಲ ಆದರೂ ಎಲ್ಲ ವ್ಯವಸ್ಥೆ ಮಾಡಬೇಕು. ಕೆಲವು ಭಾಗದಲ್ಲಿ ಹೆಚ್ಚು ಬೆಳೆ ಬಂದಿದೆ ಅದನ್ನು ಹಂಚುವಂತಹ ಪರಿಸ್ಥಿತಿ ಸರಿಯಾಗದೇ ಹೋದ ಭಾಗದಲ್ಲಿ ಕೇರಳದ ಪರಿಸ್ಥಿತಿ ನಮ್ಮ ರಾಜ್ಯದಲ್ಲೂ ಬಂದೀತು ಎಂಬ ಮಾತನ್ನು ಗಮನಿಸಬೇಕು.

ಇನ್ನು ನಾನು ಶ್ರೀಮಾನ್ ಮುಕ್ಕಣ್ಣಪ್ಪನವರನ್ನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತಾ ಇದ್ದೇನೆ, ದೇಶದ ಆಹಾರದ ಪ್ರಶ್ನೆಯಾಗಲಿ ನಮ್ಮ ರಾಜ್ಯದ ಆಹಾರದ ಪ್ರಶ್ನೆಯಾನ್ನಾಗಲಿ ಪರಿಹಾರ ಮಾಡಬೇಕಾದರೆ ನಾವು ಒಂದೇ ಒಂದು ಆಹಾರಕ್ಕೆ ಈಗ ಏನು ಅಂಟಿಕೊಂಡಿದ್ದೇವೆಯೋ ಅದನ್ನು ಕಡಿಮೆ ಮಾಡಿ ಆಹಾರದಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ಅಕ್ಕಿಯನ್ನು ಬಳಸುವವರು, ಜೋಳವನ್ನು ಬಳಸಬೇಕು, ರಾಗಿಯನ್ನು ಉಣ್ಣುವವರು, ಗೋಧಿಯನ್ನು ಉಣ್ಣಬೇಕು; ಮೀನು ತಿನ್ನುವವರು ಮೀನನ್ನು ಹೆಚ್ಚಾಗಿ ಬಳಸಬೇಕು ; ಆಗ ಈ ಆಹಾರದ ಸಮಸ್ಯೆ ತೊಲಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇಡ್ಲಿ, ದೋಸೆ ಇರಬೇಕೋ ಬೇಡವೋ ?

ಶ್ರೀ ಎಚ್. ಆರ್. ಕೇಶವಮೂರ್ತಿ.—ಸ್ವಾಮಿ, ಮಾನ್ಯ ಸದಸ್ಯರು ಮೀನು ತಿನ್ನಬೇಕು ಎಂದು ಹೇಳಿ ಕ್ಯಾನ್‌ವಾಸ್ ಮಾಡುತ್ತಾ ಇದ್ದಾರೆ, ಅದಕ್ಕೆ ನಾವು ಸಮ್ಮತಿಸುವುದಿಲ್ಲ, ಸ್ವಾಮಿ.

ಶ್ರೀ ಎಸ್. ಎಂ. ಗುರೆಡ್ಡಿ.—ಇಡ್ಲಿ, ದೋಸೆ ಮಾಡುವುದನ್ನು ಬಂದು ಮಾಡಿದ್ದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

3-30 P.M.

ವಿದ್ಯಾಭ್ಯಾಸದ ವಿಷಯದಲ್ಲಿ ರಾಜ್ಯಪಾಲರು ಭಾಷಣದಲ್ಲಿ ವಿದ್ಯಾಭ್ಯಾಸದ ಪ್ರಗತಿ, ರಾಜ್ಯದಲ್ಲಿ ಒಳ್ಳೆಯ ಒಂದು ವೇಗದಿಂದ ಹೊರಟಿದೆ, ಇದೇ ರೀತಿಯಿಂದ ನಡೆದರೆ ರಾಜ್ಯದಲ್ಲಿಯ ಅಜ್ಞಾನ ನಿರಕ್ಷರತೆ ಏನಿದೆ ಅದನ್ನು ಹೋಗಲಾಡಿಸಲು ತೀವ್ರ ಸಾಧ್ಯವಾಗಬಹುದೆಂಬ ಅರ್ಥದಲ್ಲಿ ಹೇಳಿದ್ದಾರೆ. ಆದರೆ ವಿದ್ಯಾಭಾಸದ ಮಟ್ಟ ಕಾಯುವುದು ಬಹಳ ಮಹತ್ವದ ವಿಷಯವಾಗಿದೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯ (ಕಂಪಲ್ಸರಿ) ಮಾಡಿದೆ. ಬರುವ ಏಪ್ರಿಲ್ ತಿಂಗಳಿನಿಂದ ಸೆಕೆಂಡರಿ ಎಜ್ಯುಕೇಷನ್ ಫ್ರೀ ಆಗಿ ಮಾಡುತ್ತೇವೆಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಘೋಷಣೆ ಮಾಡಿದ್ದಾರೆ. ಒಂದು ಕಡೆ ಫ್ರೀ ಎಜ್ಯುಕೇಷನ್ ಎಂದು ಎನ್ನುವುದು, ಇನ್ನೊಂದು ಕಡೆ ಎಜ್ಯುಕೇಷನ್ ಸೆಸ್ಸ್ ಹಾಕುತ್ತೇವೆಂದು ಹೇಳುವುದು ಇದ ಏನು, ಸ್ವಾಮಿ ? ಇದು ಒಂದಕ್ಕೊಂದು ವಿರೋಧವಲ್ಲವೇ ? ಪ್ರೈಮರಿ ಎಜ್ಯುಕೇಷನ್‌ಗಾಗಿ ಫೀ ಕೊಡುವುದಕ್ಕೆ ಸಾಧ್ಯವಿರತಕ್ಕ ಅನುಕೂಲಸ್ಥ ಜನರು ಸಾಕಷ್ಟು ಇದ್ದಾರೆ. ಅಂಥವರು ಫೀ ಕೊಡುತ್ತಾರೆ ತೆಗೆದುಕೊಳ್ಳಿರಿ. ಆದುದರಿಂದ ಅವರವರ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಫ್ರೀ ಶಿಪ್ ಎಜ್ಯುಕೇಷನ್ ಮಾಡಬೇಕು ಎಂದು ಸೂಚಿಸುತ್ತೇನೆ. ಪ್ರಾಥಮಿಕ ಶಾಲೆಗಳನ್ನು ಗುಡಿ ಗುಂಡಾರ ಮಠದಲ್ಲಿ ಹಾಕುವುದು, ಚಿಕ್ಕಮಕ್ಕಳನ್ನು ಕುರಿ ತುಂಬಿದ ಹಾಗೆ ಆ ಸ್ಥಳಗಳಲ್ಲಿ ತುಂಬುವುದು ನಿಜವಾಗಿಯೂ ಒಳ್ಳೆಯದಲ್ಲ. ಈ ರೀತಿ ಆದರೆ ವಿದ್ಯಾಭ್ಯಾಸದಲ್ಲಿ ಪ್ರಗತಿ ಸಾಧಿಸುತ್ತೇವೆಂದು ಹೇಳುವುದು ಹಾಸ್ಯಾಸ್ಪದ. ಪ್ರತಿಯೊಂದು ಹಳ್ಳಿಗೆ ಒಂದು ಪ್ರಾಥಮಿಕ ಶಾಲೆ ಕಟ್ಟಡ ಕೊಡುವ ಸಾಮರ್ಥ್ಯ ಹೊಂದಿಲ್ಲ. ಪ್ರಾಥಮಿಕ ಶಾಲೆಯಲ್ಲಿಯ ಶಿಕ್ಷಣವೇ ಪ್ರತಿಯೊಂದು ಶಿಕ್ಷಣದ ಬುನಾದಿಯಾಗಿರುತ್ತದೆ. ಆದುದರಿಂದ ಇದಕ್ಕೆ ಆದ್ಯ ಗಮನ ಕೊಡಬೇಕಾದುದು ಅತ್ಯಗತ್ಯ. ಪ್ರತಿಯೊಂದು ಕಡೆ ಕಟ್ಟಡ ಕಟ್ಟಿಸಬೇಕು. ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಲಕ್ಷ್ಯ ಕೊಟ್ಟರೆ ಉಳಿದ ಶಿಕ್ಷಣಕ್ಕೆ ಸಹಾಯಕವಾಗುತ್ತದೆ. ಪೋಲೀಸ್ ಕಾನ್‌ಸ್ಟೇಬಲ್‌ಗಳಿಗೆ ವಾಸಕ್ಕೆ ಮನೆಗಳನ್ನು ಕಟ್ಟಿಸಿ ಕೊಡುತ್ತೀರಿ. ಆದರೆ ಶಿಕ್ಷಕರಿಗೆ ವಾಸಕ್ಕೆ ಮನೆ ಇರುವುದಿಲ್ಲ. ಆದಕಾರಣ ಇದಕ್ಕೆ ಗಮನ ಕೊಡಬೇಕು. ಹೈಸ್ಕೂಲ್ ಎಜ್ಯುಕೇಷನ್ ಫ್ರೀ ಮಾಡುವ ಅವಶ್ಯಕತೆ ಇಲ್ಲ ಎಂದು ನನಗೆ ಅನಿಸುತ್ತದೆ. ಎರಡು ಮೂರು ರೂಪಾಯಿ ಫೀ ಕೊಡುವುದಕ್ಕೆ ಅನುಕೂಲಸ್ಥರು ತಕರಾರು ಮಾಡುವುದಿಲ್ಲ. ಶಿಕ್ಷಣದ ಮಟ್ಟ ಸುಧಾರಿಸುವುದಕ್ಕೆ ಹೆಚ್ಚು ಗಮನ ಕೊಡಬೇಕೆಂದು ಹೇಳುತ್ತೇನೆ.

[MR. SPEAKER in the Chair].

Mr. SPEAKER.—I have heard in my Chambers what all the Hon'ble Member Sri Muckannappa said here. He made some remarks when Sri Manjayya Shetty was making his speech. Let the member think over it. It goes into the records.

Sri C. J. MUCKANNAPPA.—Please expunge it, Sir.

Mr. SPEAKER.—Why should the Hon'ble Member do it and why should I expunge it? Why should all this happen—inattentive or bad remarks? I will ask him to apologise in writing; it will be recorded and kept here. The remarks made by Sri Muckannappa when Sri Manjayya Shetty was about to sit down will be expunged and the Press also will not report it.

ಶ್ರೀ ಎಸ್. ಎಂ. ಗುರೆಡ್ಡಿ.—ಒಟ್ಟಿನಲ್ಲಿ ನಾವು ಪ್ರಗತಿಪರವಾದ ಹೆಜ್ಜೆ ಇಟ್ಟಿದ್ದೇವೆ. ಜನಾರೋಗ್ಯ ಮತ್ತು ವೈದ್ಯಕೀಯ ಇಲಾಖೆಗಳನ್ನು ಒಂದುಗೂಡಿಸಿರುವುದು ಉಪಯುಕ್ತವಾಗಿದೆ ಎಂದು ಹೇಳಬೇಕಾಗುತ್ತದೆ. ಜನಾರೋಗ್ಯ ಇಲಾಖೆಯು ಸಿಡುಬು ಮುಂತಾದ ರೋಗಗಳನ್ನು ಸಾಕಷ್ಟು ನಿರ್ಮೂಲನ ಮಾಡಿದೆ. ಮಲೇರಿಯಾ ಕಂಟ್ರೋಲ್‌ನಲ್ಲಿ ಬಂದಿದೆ. ನಮ್ಮ ರಾಜ್ಯದಲ್ಲಿ ಅನೇಕ ಕಡೆ ದವಾಖಾನೆಗಳು ಇಲ್ಲ. ದವಾಖಾನೆ ಇರತಕ್ಕ ಸ್ಥಳದಲ್ಲಿ ಅನುಕೂಲತೆಗಳಿಲ್ಲ. ಎಷ್ಟೋ ದವಾಖಾನೆಗಳಲ್ಲಿ ಔಷಧಿಗಳು ಇರುವುದಿಲ್ಲ. ಆದುದರಿಂದ ಔಷಧ ಗ್ರ್ಯಾಂಟ್ ಹೆಚ್ಚು ಮಾಡಬೇಕು.

Mr. SPEAKER.—Hon'ble Member may conclude soon.

ಶ್ರೀ ಎಸ್. ಎಂ. ಗುರೆಡ್ಡಿ.—ಬೆಳೆಯುತ್ತಾ ಇರತಕ್ಕಂಥ ಜನಸಂಖ್ಯೆಗೆ ಅನುಗುಣವಾಗಿ ದವಾಖಾನೆಗಳು ಇರಬೇಕಾದುದು ಅಗತ್ಯ. ದವಾಖಾನೆಗಳಿಗೆ ಔಷಧಿ ಸರಬರಾಜು ಮಾಡುವುದಕ್ಕೆ ಗಮನ ಕೊಡಬೇಕಾಗಿದೆ. ಹಳ್ಳಿಗಳಲ್ಲಿ ದವಾಖಾನೆಗಳ ಕೊರತೆ ಇರುವ ಮೂಲಕ ಅಲ್ಲಲ್ಲಿ ದವಾಖಾನೆಗಳನ್ನು ಪ್ರಾರಂಭ ಮಾಡಬೇಕು ಎಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ. ಇದಲ್ಲದೆ ಲೆಪ್ರಸಿ (ಕುಷ್ಟ) ರೋಗವು ನಮ್ಮ ರಾಜ್ಯದಲ್ಲಿ ಹೆಚ್ಚಾಗುತ್ತಿದೆ. ಈ ರೋಗಿಗಳಿಗೆ ಒಂದು ಪ್ರತ್ಯೇಕವಾದ ಕಾಲನಿ ತಯಾರ್ಮಾಡಿ ಅಲ್ಲಿ ಉಚಿತ ಚಿಕಿತ್ಸೆ ಊಟ ಉಪಚಾರ ಮಾಡತಕ್ಕ ಒಂದು ವ್ಯವಸ್ಥೆ ಸರಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ಶ್ರೀಮಾನ್ ಮಂಜಯ್ಯ ಶೆಟ್ಟರು ತಂದಿರತಕ್ಕ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸಿ ಸಮರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Now, amendments. Shall I ask them to be formally moved or shall I take them as moved?

HON'BLE MEMBERS.—They may be taken as moved, Sir.

Sri B. P. KADAM (Karwar).—I beg to move:

"That the following words shall be added at the end of the motion:

"but regret that—

(a) the Address makes no demand for an early solution of the Maharashtra—Mysore Border dispute in accordance with the assurance given by the Hon'ble Chief Minister in the First Session of the Legislative Assembly after the Re-organisation of States in 1956;

(b) the Address makes no adequate mention of the deteriorating Food Problem in the State and Government's inability to handle it;

(c) Government have crippled Civil Liberties under the Defence of India Rules."

Sri A. KRISHNA SHETTY (Mangalore II).—I beg to move :

"That the following words shall be added at the end of the motion :

"but regret that—

(a) the Address makes no mention of the deteriorating Food situation in the State and the Government's inability to handle it ;

(b) Government have curtailed Civil Liberties and Democratic rights ;

(c) the Address does not make mention of the achievements of the Third Five Year Plan ;

(d) the Address does not fully focus the Labour unrest in the State and the failure of the Government to solve un-employment problem.""

Sri H. R. KESHAVA MURTHY.—I beg to move :

"That the following words shall be added at the end of the motion :

"but regret that—

(a) the Address fails to mention the steps taken by the Government to handle the food situation and for providing food to the starving masses without any means, in the scarcity hit rural area ;

(b) the Address makes no mention of the steps taken by the Government with regard to the Act relating to the Abolition of Hereditory Rights in the light of the recent judgement of the Supreme Court.""

Sri P. VENKATAGIRIYAPPA (Kolar).—I beg to move :

"That the following words shall be added at the end of the motion ;

"but regret that—

(a) Government have failed to supply adequate foodstuffs to the famine stricken population in rural areas and small towns and it has failed to provide employment to rural labourers ;

(b) the Address makes no mention of restoring the curtailment of Civil liberties and Democratic rights ;

(c) the Address fails to mention about solving the labour unrest and about increasing their standard of living ;

(SRI P. VENKATAGIRIYAPPA)

(d) Government have failed to take concrete measures to improve agriculture in the Dry Districts of the State by providing adequate funds to sink Irrigation Wells in large number;

(e) Government have failed to abolish Land Revenue levy on small holdings;

(f) Government have failed to abolish prohibition in the State."

Sri V. S. PATIL (Belgaum I).—I beg to move:

"That the following words shall be added at the end of the motion:

"but regret that—

(a) the Address is silent on the important issue of re-distribution of the States Boundaries on Linguistic basis;

(b) the Address fails to mention about the question of safe-guarding the interests of linguistic minorities;

(c) the Address is silent on the important issue of wiping out corruption, nepotism and inefficiency in the administration of the State;

(d) Government have failed in their duty to supply sufficient food to the people of the State;

(e) Government have failed in not taking proper steps in purchasing food-grains from big land-holders;

(f) the Address makes no indication to scrap up prohibition;

(g) the proposals for increasing taxation on already starved people is inhuman."

Sri B. R. SUNTHANKAR (Belgaum City).—I beg to move:

"That the following words shall be added at the end of the motion:

"but regret that—

(a) Government have failed to indicate the way to achieve the goal of the socialistic pattern of society set before the nation;

(b) the Address fails to mention about the programme of rural industrialisation, particularly, the processing industries;

(c) Government have failed to raise the standard of education at all levels in the State;

(d) Government have failed to establish the Panchayat Raj in the State on sound foundation by initiating reforms in the structure of the Panchayat Raj Institutions so as to give wider powers to the masses of the people;

(*e*) Government have utterly failed to settled the Border disputes of the state with the neighbouring states particularly Kasargod and the Marathi speaking areas, inspite of the assurances given by the Government in December, 1956."

Sri S. GOPALA GOWDA.—I beg to move :

"That the following words shall be added at the end of the motion :

"but regret that—

(i) Government have failed

(*a*) to consider the State as one Unit and taking upon themselves the responsibility of procurement, Storage and distribution of foodgrain ;

(*b*) to control the prices of essential commodities ;

(*c*) to make Kannada as the medium of instruction in all schools and colleges of the State and to use Kannada for Official correspondences in Courts and Offices ;

(*d*) to enforce Land Reforms ;

(*e*) to amend the Levy Order in view of the loss of crops due to failure of monsoon rains and to solve the famine condition in the State, to introduce the rationing throughout the State ;

(*f*) in giving remission of Land Revenue ;

(ii) the Address fails to mention measures to be taken to root out the defects in the Administration of the Government."

Mr. SPEAKER.—Yes all the amendments are deemed to have been moved.

†ಶ್ರೀ ಎಸ್. ಶಿವಪ್ಪ.—ಮಾನ್ಯ ಸಭಾಪತಿಗಳವರೇ, ರಾಜ್ಯಪಾಲರವರೆ ಈ ಭಾಷಣ ಸರಕಾರದ ಆಡಳಿತ ನೀತಿಯ ಪ್ರಣಾಳಿಕೆಯಾಗ ಬೇಕಾಗಿತ್ತು. ಆದರೆ ವಿವಿಧ ಇಲಾಖೆ ವರದಿಗಳನ್ನು ಶೇಖರಿಸಿ ಒಂದು ಪುಸ್ತಕವನ್ನಾಗಿ ಮಾಡಿ ಅದನ್ನು ರಾಜ್ಯಪಾಲರವರಿಂದ ಸುಮಾರು ಒಂದು ಗಂಟೆ ಕಾಲ ಭಾಷಣ ಮಾಡಿಸಿದ್ದಾರೆ. ಈ ಭಾಷಣ ಕೇವಲ ಒಂದು ವರದಿ ಇದ್ದ ಹಾಗೆ ಇದೆ. ಇದರಲ್ಲಿ ಸರಕಾರದ ನೀತಿ ಇರುವುದಿಲ್ಲ. ರಸವಿಲ್ಲದ ಸಿಪ್ಪೆಯ ಹಾಗೆ ಸರಕಾರದ ನೀತಿಯ ಬಗ್ಗೆ ಭಾಷಣವಿದೆ. ಇದರಿಂದ ಉಂಟಾಗುವ ನಿರುತ್ಸಾಹ ಪರಿಸ್ಥಿತಿಯನ್ನು ಸರಕಾರ ಎದುರಿಸಬೇಕಾಗುತ್ತದೆ.

ಮೊದಲನೇಯದಾಗಿ ರಾಜ್ಯಪಾಲರವರ ಈ ಭಾಷಣದಲ್ಲಿ ನಮ್ಮ ದೇಶವಲ್ಲಿ ಉಂಟಾದ ಗಂಡಾಂತರ ಪರಿಸ್ಥಿತಿಯ ಬಗ್ಗೆ ಹೇಳಿದ್ದಾರೆ. ನಮ್ಮ ವೀರ ಸೈನಿಕರು ಅಪ್ರತಿಮಸಾಹಸದಿಂದ ಪಾಕಿಸ್ತಾನದೊಡನೆ ಹೋರಾಡಿದ್ದಾರೆ ಎಂದು ಕೊಂಡಾಡಿದ್ದಾರೆ. ನಮ್ಮ ದೇಶದ ವೀರರನ್ನು ಎಷ್ಟು ಕೊಂಡಾಡಿದರೂ ಸಾಲದು. ಭಾರತದ ಜನತೆಯಲ್ಲಿ ಎಂಥ ಶಕ್ತಿ ಅಡಕವಾಗಿದೆ ಎಂಬುದನ್ನು ಭಾರತದ ವೀರ ಸೈನಿಕರು ತೋರಿಸಿಕೊಟ್ಟಿದ್ದಾರೆ. ಭಾರತದ 45 ಕೋಟಿ ಜನ ಇದನ್ನು ಪ್ರಶಂಸೆ ಮಾಡಿದ್ದಾರೆ. ಇದಕ್ಕಾಗಿ ರಾಜ್ಯಪಾಲರವರ ಭಾಷಣವನ್ನು ಅಭಿನಂದಿಸುತ್ತೇನೆ.

ಇಷ್ಟೇ ಅಲ್ಲದೆ ರಾಜ್ಯಪಾಲರ ಭಾಷಣದಲ್ಲಿ ತಾಸ್ಕೆಂಟಿನ ಶಾಂತಿ ನಿರ್ಣಯದ ವಿಷಯ ಕೂಡ ಅಡಕವಾಗಿದೆ. ತಾಷ್ಕೆಂಟಿನ ಶಾಂತಿ ನಿರ್ಣಯವನ್ನು ವೀರ ಪ್ರಧಾನಿಯವರು ಮಹತ್ತರವಾದ ಚಮತ್ಕೃತಿಯಿಂದ ಮಾಡಿದ್ದಾರೆ. ಅವರು ಶಾಂತಿ ದೂತರಾಗಿ ಹೋಗಿ ಅಲ್ಲಿಯೇ ತಮ್ಮ ಕೊನೆ ಉಸಿರನ್ನು ಬಿಡಬೇಕಾಯಿತು. ತಾಷ್ಕೆಂಟ ಶಾಂತಿ ನಿರ್ಣಯದ ವಿಷಯ ಕೇಂದ್ರ ಸರಕಾರದ

(ಶ್ರೀ ಎಸ್. ಶಿವಪ್ಪ)

ವಿಷಯವಾಗಿದ್ದರೂ ಕೂಡ ಈ ಭಾಷಣದಲ್ಲಿ ಅದು ನಮೂದು ಆಗಿರುವುದರಿಂದ ಒಂದೆರಡು ಮಾತು ಹೇಳತಕ್ಕದ್ದು ನಮ್ಮ ಕರ್ತವ್ಯ ಎಂದು ನನ್ನ ಭಾವನೆ. ತಾಷ್ಕೆಂಟಿನಲ್ಲಿ ಶಾಂತಿ ದೀವಿಗೆ ಹತ್ತಿಸಿದ್ದೇನೋ ನಿಜ. ಈ ಶಾಂತಿ ದೀವಿಗೆ ನಂದಾ ದೀಪವಾಗಬೇಕು. ಅದು ಎಷ್ಟು ದಿವಸ ಉರಿಯುತ್ತದೆ ನೋಡಬೇಕಾಗುವುದು. ಮೊನ್ನೆ ತಾನೆ ಪಾಕಿಸ್ತಾನದ ಅಧ್ಯಕ್ಷರು ಒಂದು ಒಡಕು ಧ್ವನಿ ತೆಗೆದು ಅದನ್ನು ವಿರೋಧ ಮಾಡಿದ್ದಾರೆ. ಪ್ರಪಂಚದಲ್ಲಿ ಚಿರ ಶಾಂತಿ ಲಭಿಸಲಿ ಎಂಬ ಹೆಬ್ಬಯಕೆ ನೆರವೇರುವುದಕ್ಕಾಗಿ ಶಾಸ್ತ್ರಿಯವರು ಪ್ರಯತ್ನ ಪಟ್ಟಿದ್ದಾರೆ. ಆದರೆ ಪಾಕಿಸ್ತಾನವು ಕಾಶ್ಮೀರದ ಪ್ರಶ್ನೆಯನ್ನು ಇದರಲ್ಲಿ ಅಡಕ ಮಾಡುತ್ತಿದೆ. ಪಾಕಿಸ್ತಾನವು ಕಾಶ್ಮೀರ ಪ್ರಶ್ನೆ ತಂದು ಅಡ್ಡಿ ಬಂದರೆ ಪ್ರಪಂಚಕ್ಕೆ ಭಾರತದ ಸ್ಪಷ್ಟವಾದ ಧೀರ ನಿಲುವನ್ನು ತೋರಿಸಿಕೊಡಬೇಕು. ನೂತನ ಪ್ರಧಾನಿಯವರು ಈ ಧೀರ ನಿಲುವನ್ನು ತೋರಿಸಿಕೊಡಬೇಕೆಂದು ಅಷ್ಟೇ ಹೇಳುತ್ತೇನೆ.

ಸಭಾಪತಿಗಳವರೇ, ಇತ್ತೀಚಿಗೆ ನಡೆದ ನೂತನ ಪ್ರಧಾನಿಯವರ ಚುನಾವಣೆಯು ಪ್ರಜಾಪ್ರಭುತ್ವದ ಗಂಭೀರ ವಾತಾವರಣದಲ್ಲಿ ನಡೆದದ್ದನ್ನು ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ನೂತನ ಪ್ರಧಾನಿಯವರ ಆಯ್ಕೆಯು ಪ್ರಜಾಪ್ರಭುತ್ವದ ತತ್ವಕ್ಕನುಗುಣವಾಗಿ ಪ್ರಪ್ರಥಮವಾಗಿ ಆಯಿತು, ನಿಜ. ಇದುವರೆಗೆ ನಮ್ಮ ದೇಶದಲ್ಲಿ ಮೂರು ಮಹಾ ಚುನಾವಣೆಗಳು 1952, 1957, 1962ರಲ್ಲಿ ನಡೆದಿವೆ. ಈ ಚುನಾವಣೆಗಳು ಭಾರತದಲ್ಲಿ ಪ್ರಜಾಪ್ರಭುತ್ವ ಬೇರೂರಿದೆ ಎಂದು ಪ್ರದರ್ಶನ ಮಾಡಿದೆ. ನಾಯಕರನ್ನು ಆರಿಸುವಾಗ್ಗೆ ಪ್ರಜಾಪ್ರಭುತ್ವ ನೀತಿಯನ್ನು ಕಳೆದ 18 ವರ್ಷ ಅನುಸರಿಸದೇ ಇರುವುದು ನನಗೆ ಆಶ್ಚರ್ಯವಾಗುತ್ತದೆ. ಚುನಾವಣೆಯಿಂದ ನಾಯಕರನ್ನು ಆರಿಸುವುದು ಪ್ರಜಾಪ್ರಭುತ್ವ ನೀತಿಗೆ ಹೊಸದಲ್ಲ. ಕಾಂಗ್ರೆಸ್ ಪಾರ್ಟಿಯಲ್ಲಿ ನಾಯಕರ ಚುನಾವಣೆ ಪ್ರಪ್ರಥಮವಾಗಿ ನಡೆದಿದೆ ಆದುದರಿಂದ ಅವರಿಗೆ ಇದು ಹೊಸದು. ಪ್ರಜಾಪ್ರಭುತ್ವ ಇರತಕ್ಕ ಬೇರೆ ದೇಶಗಳಲ್ಲಿ ಚುನಾವಣೆಯಿಂದ ನಾಯಕರನ್ನು ಆರಿಸುವುದಕ್ಕೆ ಹೊಂದಿಕೊಂಡಿವೆ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವು ಕಂಟ್ರೋಲ್ಡ್ ಡೆಮಾಕ್ರಸಿ ಆಗಬಾರದು. ಯಾಕೆಂದರೆ, ನಾಯಕರ ಚುನಾವಣೆಯ ಕಾಲಕ್ಕೆ ಮುಖ್ಯ ಮಂತ್ರಿಗಳು ಹೋಗಿ ಪ್ರಯತ್ನ ಮಾಡಿದ್ದಾರೆ ಜನರಲ್ಲಿ ಯಾವ ಅಭಿಪ್ರಾಯ ಬಂದಿದೆ ಅದನ್ನು ನೋಡಿದ್ದೇವೆ. ಪ್ರಜಾಪ್ರಭುತ್ವ ದೇಶದಲ್ಲಿ ಬೆಳೆಯಬೇಕು. ಅದು ಬೆಳಗಬೇಕು ಎಂಬುದು ನಮ್ಮ ಉದ್ದೇಶ.

ಸಭಾಪತಿಗಳವರೇ, ಇನ್ನು ರಾಜ್ಯಪಾಲರವರು ತಮ್ಮ ಭಾಷಣದಲ್ಲಿ ನಾಲ್ಕನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಪ್ರಸ್ತಾಪಮಾಡಿದ್ದಾರೆ.

ಈ ವಿಚಾರದಲ್ಲಿ ಸರ್ಕಾರದವರ ನೀತಿಯೇನೆಂಬುದನ್ನು ಸೂಚಿಸಲು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸೂಚಿಸಿರುವುದಿಲ್ಲ. ಅದನ್ನು ಹೇಳದೆ ಬರಿ ಯೋಜನೆಗಳ ವಿಚಾರವನ್ನು ಮಾತ್ರ ಪ್ರಸ್ತಾಪಿಸಿದ್ದಾರೆ. ನಾವಾದರೋ ದೇಶದಲ್ಲಿ ಈಗಾಗಲೇ 3 ಪಂಚವಾರ್ಷಿಕ ಯೋಜನೆಗಳನ್ನು ಕಳೆದು, ಇನ್ನು ಮುಂದಿನ ತಿಂಗಳು ಕೊನೆಯ ಭಾಗದಲ್ಲಿ ನಾವು ದೇಶದಲ್ಲಿ 4ನೇ ಪಂಚವಾರ್ಷಿಕ ಯೋಜನೆಗೆ ಕಾಲಿಡುತ್ತಿದ್ದೇವೆ. ಆದರೆ ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಿಂದ ನಮ್ಮ ದೇಶಕ್ಕಾದ ಪ್ರತಿಫಲವೇನು ಎಂಬುದು ಒಂದು ಬಹಳ ಮುಖ್ಯವಾದ ಪ್ರಶ್ನೆ. ನಮ್ಮ ಭಾರತ ದೇಶದಲ್ಲಿ ಇಲ್ಲಿಯವರೆಗಾಗಲೇ ಈ ಯೋಜನೆಗಳ ಬಗ್ಗೆ ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದು ದಿಟ ಈ ಯೋಜನೆಗಳ ಬಗ್ಗೆ ಸರ್ಕಾರದವರು ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಿದ್ದಾರೆಂಬುದನ್ನು ಹೇಳಿದ್ದಾರೆ ಹೀಗೆ ಹಣವನ್ನು ಖರ್ಚುಮಾಡುವುದರಲ್ಲಿ ನಮ್ಮ ಸರ್ಕಾರದವರೂ ಶೂರರೇ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇವರು ಎಷ್ಟು ಹಣವನ್ನು ಖರ್ಚುಮಾಡಬೇಕೆಂದು ಮಾಡಿದ್ದರೋ ಅಷ್ಟನ್ನೂ ಮಾಡಿದ್ದಾರೆ. ಆದರೆ ಅಷ್ಟು ಹಣವನ್ನು ಖರ್ಚುಮಾಡಿದ್ದರ ಪರಿಣಾಮವೇನಾಗಿದೆ ಎಂಬುದನ್ನು ಮಾತ್ರ ಭಾಷಣದಲ್ಲಿ ಹೇಳಿಲ್ಲ. ಅದೊಂದು ಮುಖ್ಯವಾದ ಲೋಪ. ಇಷ್ಟು ಹಣವನ್ನು ಖರ್ಚುಮಾಡಿರುವಾಗ ದೇಶದಲ್ಲಿ ಸಂಪತ್ತು ಎಷ್ಟರಮಟ್ಟಿಗೆ ವೃದ್ಧಿಹೊಂದಿದೆ ಎಂಬುದನ್ನು ಅಳತೆಮಾಡದೆ, ಅದರ ಬಗ್ಗೆ ಒಂದು ಶಬ್ದವನ್ನೂ ಹೇಳದೆ ರಾಜ್ಯಪಾಲರು ಮೌನದಿಂದಿರುವುದು ಬಹಳ ಆಶ್ಚರ್ಯ. ಅವರಾದರೂ ಇನ್ನೇನನ್ನು ಹೇಳಿಯಾರು ? ಅವರ ಭಾಷಣವು ಅಷ್ಟು ಹಣವನ್ನು ಖರ್ಚುಮಾಡಿರುವಾಗ ದೇಶದಲ್ಲಿ ಎಷ್ಟು ಆಹಾರೋತ್ಪನ್ನವಾಯಿತು, ವೃದ್ಧಿ ಎಷ್ಟಾಯಿತು, ನೀರಾವರಿ ಯೋಜನೆಗಳೆಷ್ಟು ವೃದ್ಧಿಯಾದವು, ಕೈಗಾರಿಕೆಗಳೆಷ್ಟು ಅಭಿವೃದ್ಧಿಯಾದವು, ದೇಶದಲ್ಲಿದ್ದ ನಿರುದ್ಯೋಗ ಸಮಸ್ಯೆ ಎಷ್ಟರಮಟ್ಟಿಗೆ ನಿವಾರಣೆಯಾಯಿತು ಎಂಬುದನ್ನೆಲ್ಲಾ ಅವರು ಬಿಚ್ಚಿ ಬಿಚ್ಚಿ ಬಿಡಿಸಿ ಹೇಳಿದ್ದರೆ ನಮಗೆಲ್ಲ ಬಹಳ ಸಂತೋಷವಾಗುತ್ತಿತ್ತು. ಆದರೆ ಇಲ್ಲಿ ಇನ್ನೊಂದು ವಿಶೇಷಕರವಾದ ಸಂಗತಿಯೆಂದರೆ, ನಮ್ಮಲ್ಲಿ ಈ ಯೋಜನೆಗಳು ಪ್ರಾರಂಭವಾಗಿ

ಇಲ್ಲಿಗೆ ಆಗಲೆ 15 ವರ್ಷಗಳ ಮೇಲಾಯಿತು. ಹೀಗೆ 15 ವರ್ಷಗಳು ಕಳೆದನಂತರ ನಮ್ಮ ಯೋಜನೆಗಳ ಫಲತಾಂಶವೇನಾಗಿದೆ ಎಂಬುದನ್ನು ಅಳತೆಮಾಡಬೇಕೆಂಬ ವಿಚಾರಕ್ಕೆ ಸರ್ಕಾರದವರು ಈಗ ಕೈ ಹಾಕಿದ್ದಾರೆ. ಇದು ಒಂದು ವಿಶೇಷ ಸಂಗತಿ—ಏಕೆಂದರೆ ಅಡಿಗೆಯಾದ ಮೇಲೆ ಒಲೆ ಉರಿಯಿತು ಎಂಬ ಗಾದೆಯ ಹಾಗೆ ಇವರು ಈ ಯೋಜನೆಗಳೆಲ್ಲಾ ಮುಗಿದ ನಂತರ ಅವುಗಳ ಫಲತಾಂಶವೇನಾಗಿದೆ ಎಂಬುದನ್ನು ಅಳತೆಮಾಡಲು ಪ್ರಯತ್ನ ಮಾಡಿರುವುದೂ ಹಾಗೇ ಆಯಿತು. ಒಟ್ಟಿನಲ್ಲಿ ನಾನು ಹೇಳುವುದಾದರೆ, ನಮ್ಮ ದೇಶದಲ್ಲಿ ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಿಂದ ದೇಶದಲ್ಲಿ ನಮ್ಮ ಸಂಪತ್ತು ಎಷ್ಟರಮಟ್ಟಿಗೆ ಅಭಿವೃದ್ಧಿಯಾಗಿದೆ ಎಂಬುದನ್ನು ಅಳತೆಮಾಡಿ ನೋಡುವುದಾದರೆ ಆ ನಮ್ಮ ಸಂಪತ್ತು ದೇಶದಲ್ಲಿ ಉಂಟಾದ ಕ್ಷಾಮದ ಹೊಡೆತವನ್ನು ಕೇವಲ ಮೂರುವಾರ ಕಾಲ ತಡೆಯತಕ್ಕ ಶಕ್ತಿ ಅದಕ್ಕಿಲ್ಲವಾಯಿತು ಎಂಬುದು ಸರ್ವರಿಗೂ ವಿದಿತವಾದ ವಿಷಯವಾಗಿದೆ. ಕ್ಷಾಮದ ಭೀಕರವನ್ನು ರೈತಾಪಿವರ್ಗ ತಡೆಯತಕ್ಕ ಶಕ್ತಿಯಿಲ್ಲದೆ ತಮ್ಮ ಮನೆಮಠಗಳನ್ನೂ ದನಕರುಗಳನ್ನೂ ಸಹಾ ಮಾರಾಟಮಾಡಿ ಕಡೆಗೆ ಈಗ ತಮ್ಮ ಮಕ್ಕಳನ್ನೂ ಕೂಡ ಮಾರಾಟಮಾಡಿ ಜೀವನ ನಡೆಸತಕ್ಕ ಮಟ್ಟಕ್ಕೆ ಕ್ಷಾಮ ಅವರನ್ನು ಕರೆದೊಯ್ದಿದೆ. ಮೂರನೆಯ ಪಂಚವಾರ್ಷಿಕ ಯೋಜನೆಯು ಮುಗಿಯುವ ವೇಳೆಗೆ ದೇಶದಲ್ಲಿ 48.05ಲಕ್ಷ ಟನ್ ಆಹಾರೋತ್ಪತ್ತಿ ಮಾಡಬೇಕೆಂದು ತೀರ್ಮಾನಮಾಡಿದ್ದಾರೆ. ಆದರೆ ಇಲ್ಲಿಯವರೆಗೂ ಆಗಿರತಕ್ಕ ಫಲತಾಂಶವೇನೆಂಬುದನ್ನು ಸರ್ಕಾರದವರು ಹೇಳಿಲ್ಲ. ಇಲ್ಲಿಯವರೆಗೂ ಖರ್ಚಾಗಿರತಕ್ಕ ಹಣಕಾಸಿನ ಅಂಕಿ-ಅಂಶಗಳನ್ನು ಮಾತ್ರ ಕೊಟ್ಟಿದ್ದಾರೆ. ಫಲತಾಂಶವನ್ನು ತಿಳಿಸಿಲ್ಲ. ಇಂತಿಂಥ ವರ್ಷ ಇಷ್ಟು ಹಣ ಖರ್ಚಾಯಿತೆಂಬುದೇನೋ ಸರಿ ಆದರೆ ಆಯಾಯ ವರ್ಷದಲ್ಲಿ ಉತ್ಪತ್ತಿಯಾದ ಹೆಚ್ಚಿನ ಆಹಾರ ಸಾಮಗ್ರಿಗಳ ಪ್ರಮಾಣವೇನು ಎಂಬುದನ್ನು ಹೇಳಿಲ್ಲ. ತಾವು ಏನೇನು ಯೋಜನೆ ಹಾಕಿಕೊಂಡಿದ್ದೀರೋ 47 ಲಕ್ಷ ಟನ್ ಬೆಳೆಯಬೇಕೆಂದು ಅದನ್ನು ಮುಟ್ಟುವುದಕ್ಕೆ ಈ ವರದಿಯ ಪ್ರಕಾರ ಬಹುಶಃ 5 ವರ್ಷಗಳು ಅಥವಾ 10 ವರ್ಷಗಳಾಗುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಈ ಆಹಾರದ ಕೊರತೆ ಎಷ್ಟೆಂಬುದನ್ನು ನೀವು ಅಖೈರಾಗಿ ತೀರ್ಮಾನ ಮಾಡಿದ್ದೀರ ? ಆಹಾರದ ಕೊರತೆಯ ಅಂಕಿ ಅಂಶಗಳನ್ನು ಕೂಡ ನೀವು ಸರಿಯಾಗಿ ಕೊಟ್ಟಿಲ್ಲ. ಏಕೆಂದರೆ ನಿಮ್ಮ ಅಂದಾಜಿಗೂ, ದೇಶದಲ್ಲಿರುವ ಅಭಾವಕ್ಕೂ ಬಹಳ ಅಜಗಜಾಂತರ ವ್ಯತ್ಯಾಸವಿದೆ. ನಿಮ್ಮ ಅಂಕಿ ಅಂಶಗಳ ಪ್ರಕಾರ ನಮ್ಮ ದೇಶಕ್ಕೆ ಕೇವಲ ಸುಮಾರು 10 ಪರ್‌ಸೆಂಟ್ ಡೆಫಿಸಿಟ್ ಅನ್ನುವುದು ಮಾಮೂಲಿಯಾಗಿದೆ. 3-4 ಲಕ್ಷ ಟನ್ ಆಹಾರದ ಡೆಫಿಸಿಟ್ ಮಾತ್ರವಿದೆ, ಅದನ್ನು ಆಗಿಂದಾಗ್ಗೆ ಬೆಳೆದುಕೊಳ್ಳಬಹುದೆಂದು ತಾವು ಹೇಳುತ್ತೀರಿ. ದಿನೇ ದಿನೇ ಬೆಳೆಯುತ್ತಿರುವ ಜನಸಂಖ್ಯೆಗೂ, ವರ್ಷ ವರ್ಷ ಕಡಮೆಯಾಗುತ್ತಿರುವ ಆಹಾರೋತ್ಪತ್ತಿಗೂ ಬಹಳ ವ್ಯತ್ಯಾಸವಿದೆಯೆಂದು ಹೇಳುತ್ತೇನೆ. ನೀವು ಒಂದೆರಡು ಲಕ್ಷ ಟನ್ ಆಹಾರವನ್ನು 10 ವರ್ಷಗಳಲ್ಲಿ ಜಾಸ್ತಿ ಮಾಡಿದ್ದೀರಿ. ಅಂದರೆ ಈ ದೇಶದಲ್ಲಿ ಆಹಾರೋತ್ಪತ್ತಿ ದಿನೇ ದಿನೇ ಕೆಳಕ್ಕೆ ಹೋಗುತ್ತಿದೆಯೇ ಹೊರತು ಮೇಲಕ್ಕೆ ಬರುತ್ತಾ ಇಲ್ಲ. ಯೋಜನೆಗಳಲ್ಲಿ ದೊಡ್ಡ ಲೋಪಗಳಿರುವುದು, ಇರಿಗೇಷನ್ ಮತ್ತು ನೀರಾವರಿ ಬಾವಿಗಳಿಗೆ ಸರಿಯಾಗಿ ಪ್ರೋತ್ಸಾಹ ಕೊಡದಿರುವುದು ಇದಕ್ಕೆ ಕಾರಣವಾಗಿದೆ. 3ನೇ ಪಂಚವಾರ್ಷಿಕ ಯೋಜನೆಯ ಕೊನೆಯ ಹೊತ್ತಿಗೆ ಸುಮಾರು 5 ಲಕ್ಷ ಎಕರೆ ಇರಿಗೇಷನ್ ಪೊಟೆನ್ಸಿಯಲ್ ಆದರೆ, ಉಪಯೋಗಿಸಿಕೊಂಡಿರತಕ್ಕದ್ದು, ಕೇವಲ 3 ಲಕ್ಷ ಎಕರೆಗೆ ಮಾತ್ರ ನೀರಿನ ಉಪಯೋಗವನ್ನು ಮಾತ್ರ ಹೊಂದಿದ್ದೀರಿ, ಇನ್ನೂ ಸುಮಾರು 5 ಲಕ್ಷ ಎಕರೆಗೆ ಇರಿಗೇಷನ್ ಫೆಸಿಲಿಟಿಸ್ ಕ್ರಿಯೇಟ್ ಮಾಡಬೇಕೆಂದು ಇದ್ದೀರಿ. ಆದರೆ 2 ಲಕ್ಷ ಎಕರೆಗೆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಶಕ್ತಿ ಈ ಸರ್ಕಾರಕ್ಕೆ ಇಲ್ಲವಲ್ಲಾ ಎಂದು ಹೇಳುತ್ತೇನೆ. ಇದನ್ನು ಉಪಯೋಗಿಸಿಕೊಳ್ಳದೆ ತಾವು ಉದಾರತೆಯಿಂದ ನೀರನ್ನು ನೆರೆ ರಾಷ್ಟ್ರಗಳಿಗೆ ಕೊಟ್ಟಿದ್ದೀರಿ ; ಆಂಧ್ರ ದೇಶದ ವರ್ಷಕ್ಕೆ 2 ಲಕ್ಷ ಎಕರೆಗಳಿಗೆ ಆಗುವಷ್ಟು ನೀರನ್ನು ಕೊಟ್ಟು ಆಂಧ್ರದ ರೈತರು ಅದನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ದುರ್ಭಿಕ್ಷ ಕಾಲದಲ್ಲಿ ನಮ್ಮ ರೈತರಿಗೆ ನೀರಿನ ಉಪಯೋಗವಿಲ್ಲದೆ ಹೋಯಿತಲ್ಲಾ ಎಂದು ನಾವು ಯೋಚನೆ ಮಾಡಬೇಕಾಗಿದೆ. ಈ ತಮ್ಮ ಯೋಜನೆಯ ವೈಖರಿ ಎಷ್ಟರಮಟ್ಟಿಗೆ ಇದೆಯೆಂದು ನೋಡಬಹುದಾಗಿದೆ.

ಇದೇ ರೀತಿ ಕೈಗಾರಿಕಾ ಪೊಟೆನ್ಸಿಯಾಲಿಟಿಸ್ ತೆಗೆದುಕೊಂಡರೆ ಈ ಯೋಜನೆಗಳಲ್ಲಿ ಏನು ಗುರಿ ಇಟ್ಟುಕೊಂಡಿದ್ದೀರೋ ಅದನ್ನು ಮುಟ್ಟುವುದಕ್ಕೆ ಸಾಧ್ಯವಾಗಿಲ್ಲ. ಹಣ ಖರ್ಚು ಮಾಡುವುದನ್ನು ಒಂದು ಬಿಟ್ಟರೆ ಮತ್ತೇನೂ ತಮಗೆ ಗೊತ್ತಿಲ್ಲ. ಫಿಸಿಕಲ್ ಟಾರ್‌ಜಿಟ್ ಏನು ಇಟ್ಟಿಕೊಂಡಿದ್ದೀರೋ ಅದನ್ನು ಮಾಡುವುದರಲ್ಲಿ ತಾವು ಸಂಪೂರ್ಣವಾಗಿ ವಿಫಲವಾಗಿದ್ದೀರೆಂದು ಹೇಳುತ್ತೇನೆ. ಇದು ನಮ್ಮ ದೇಶದ ಒಂದು ದುರ್ಗತಿಯ ಚಿನ್ಹೆಯಾಗಿದೆಯೆಂದು ಹೇಳಬೇಕಾಗಿದೆ. ಇವತ್ತು ಈ ಯೋಜನೆ ಆದಮೇಲೆ ತಾವು ಸ್ಕೇರ್‌ಸಿಟಿ ಕಂಡಿಷನ್ ಬಹಳ ಸೂಕ್ಷ್ಮವಾಗಿದೆಯೆಂದು ಹೇಳಿದ್ದೀರಿ; ಈ ದೇಶದಲ್ಲಿ ಎಂದೂ ಕಾಣದ ಒಂದು ಕ್ಷಾಮ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆಂದು ಹೇಳಿದ್ದೀರಿ ನಿಜ. ನಮ್ಮ ದೇಶದಲ್ಲಿ ನಮ್ಮ ಜೀವಮಾನ ಕಾಲದಲ್ಲಿ ಇದುವರೆಗೆ ನಡೆಯದೆ ಇದ್ದಂಥ

(ಶ್ರೀ ಎಸ್. ಶಿವಪ್ಪ)

ಒಂದು ಕ್ಷಾಮ ಪರಿಸ್ಥಿತಿಯ ದವಡೆಗೆ ನಾವು ಸಿಕ್ಕಿದ್ದೇವೆ. ನಮ್ಮ ದೇಶದಲ್ಲಿ ಎಷ್ಟು ಆಹಾರೋತ್ಪತ್ತಿಯಾಗಬೇಕಾಗಿತ್ತೋ ಅದರಲ್ಲಿ ಬಹುಶಃ ಸೇಕಡ 50ಕ್ಕಿಂತ ಹೆಚ್ಚಾಗಿ ಇವತ್ತು ಆಹಾರದ ಅಭಾವ ಇದೆ. ನಮ್ಮ ಆಹಾರದ ಉತ್ಪತ್ತಿ 48 ಲಕ್ಷ ಟನ್ ಆದರೆ 20-25 ಲಕ್ಷ ಟನ್ ಆಹಾರದ ಅಭಾವವಿದೆ. ಈ ಅಭಾವವನ್ನು ಪರಿಹಾರ ಮಾಡಬೇಕಾದರೆ ಏನು ಮಾಡಬೇಕೆಂಬ ಕಾರ್ಯಕ್ರಮವನ್ನು ದೇಶದ ಮುಂದೆ ಇಟ್ಟಿಲ್ಲ. ಆಹಾರದ ಮಂತ್ರಿಗಳು ಪತ್ರಿಕೆಗಳ ಮುಖಾಂತರ ಕೊಟ್ಟಿರತಕ್ಕ ಹೇಳಿಕೆಯಂತೆ, ಕೇಂದ್ರ ಸರ್ಕಾರದ ಸಹಾಯ ಮದ್ರಾಸಿನ ಸಹಾಯ, ಇನ್ನು ಬೇರೆ ಬೇರೆ ದೇಶಗಳ ಸಹಾಯವನ್ನು ಶೇಖರಣೆ ಮಾಡಿದರೆ ನಮಗೆಲ್ಲಾ ಸುಖ ಭೋಜನ ಸಿಗುತ್ತದೆಂಬ ಭಾವನೆ ಬರುತ್ತದೆ. ಮುಖ್ಯ ಮಂತ್ರಿಗಳು ಹೇಳುವುದು ಕ್ವಿಂಟಾಲೋ, ಕೆ.ಜಿ. ಯೋ, ಟನ್ನೋ ಎಂಬುದು ನಮಗಿರಲಿ, ಒಂದೊಂದು ಸಾರಿ ಅವರಿಗೇ ಅರ್ಥವಾಗುವುದಿಲ್ಲವೆಂದು ಕಾಣುತ್ತದೆ. ಘೋರ ಕ್ಷಾಮದ ದವಡೆಯಲ್ಲಿ ಸಿಕ್ಕಿರುವ ಈ ನಮ್ಮ ದೇಶವನ್ನು ಸರ್ಕಾರ ನೇರಿಕೊಳ್ಳಬೇಕಾಗಿದೆ. ಎಂಥಾ ಸರ್ಕಾರವಪ್ಪಾ ದೇವರೇ ಎಂದು ಜನಗಳು ಪರಿತಪಿಸುತ್ತಿದ್ದಾರೆ. ಈ ಕೀರ್ತಿ ಈ ಒಂದು ಸರ್ಕಾರಕ್ಕೆ ಬಂದಿದೆ. ಮೊದಲೇ ಹೇಳಿದ ಹಾಗೇ ಜನಗಳು ಇವತ್ತು ಹೊಟ್ಟೆಗಾಗಿ ಮಕ್ಕಳನ್ನು ಮಾರುವುದಕ್ಕೆ ಯೋಚನೆ ಮಾಡುತ್ತಿದ್ದಾರೆ, ದನಕರುಗಳನ್ನು ಕಟುಕರಿಗೆ ಮಾರಿದ್ದಾರೆ. ಈಗ ಅವರಲ್ಲಿ ಏನು ಉಳಿದಿಲ್ಲ. ಏನಾದರೂ ಮುಂದಿನ ವರ್ಷ ಮಳೆ ಬಂದರೆ ಬೆಳೆ ಬೆಳೆಯಲು ಅವರಲ್ಲಿ ದನಗಳಿರುವುದಿಲ್ಲ. ಆದ್ದರಿಂದ ದೇಶದಲ್ಲಿ ತಾವೇ ಒಂದು ಗೋಶಾಲೆಯನ್ನು ಏರ್ಪಾಡುಮಾಡಿ, ಸಾವಿರಾರು ದನಗಳನ್ನು ಒಂದೆಡೆ ಸೇರಿಸಿ ಸಾಕುವಂತೆ ಅನೇಕ ಸಾರಿ ಸರ್ಕಾರಕ್ಕೆ ಹೇಳಿದ್ದರೂ ಸರ್ಕಾರದವರು ಏನೂ ಮಾಡದಿರುವುದು ನಮಗೆ ದಿಕ್ಕೇ ತೋಚದ ಹಾಗೆ ಆಗಿದೆ. ನಮ್ಮ ಮುಖ್ಯ ಮಂತ್ರಿಗಳು ಭಾಷಣ ಮಾಡುವಾಗ ಒಂದು ರೀತಿ ಹೇಳುತ್ತಾರ, ಪತ್ರಿಕೆಗಳಲ್ಲಿ ಒಂದು ರೀತಿ ಹೇಳುತ್ತಾರೆ, ದೆಹಲಿಯಿಂದ ಬಂದಾಗ ಒಂದು ರೀತಿ ಹೇಳುತ್ತಾರೆ, ಮತ್ತು ಆಹಾರ ಮಂತ್ರಿಗಳು ಒಂದೊಂದು ರೀತಿ ಹೇಳುತ್ತಾರೆ, ಅವರು ಹೇಳಿದ್ದಕ್ಕೂ ಇವರು ಹೇಳಿದ್ದಕ್ಕೂ ಸಂಬಂಧವೇ ಇರುವುದಿಲ್ಲ. ದೇಶ ಇಂಥ ಅಗಾಧವಾದ ಸಮಸ್ಯೆಗಳನ್ನು ಎದುರಿಸತಕ್ಕಂಥ ಕಾಲದಲ್ಲಿ ಗಂಭೀರವಾಗಿ ಆಲೋಚನೆಮಾಡಿ ಸೂಕ್ತ ಮಾರ್ಗ ಕೊಡತಕ್ಕ ಶಕ್ತಿ ಈ ಸರ್ಕಾರಕ್ಕೆ ಇಲ್ಲವಲ್ಲಾ ಎಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ. ತಾವು ಇವತ್ತು ರೈತರ ಬಗ್ಗೆ ಕಡೆಗಣ್ಣಿನಿಂದ ನೋಡತಕ್ಕ ವಿಚಾರವನ್ನು ಬಿಡಬೇಕು. ಏಕೆಂದರೆ ರೈತರು ಹೆಚ್ಚು ಬೆಳೆದಾಗ ದೇಶಕ್ಕೆ ಕೊಟ್ಟಿದ್ದಾನೆ. ಆದರೆ ಕೇವಲ ಒಂದು ವರ್ಷ ರೈತರುಗಳಿಗೆ ನೆರವು ಕೊಡತಕ್ಕ ಶಕ್ತಿ ಸರ್ಕಾರಕ್ಕೆ ಇಲ್ಲವಲ್ಲಾ ಎಂದು ಸಭಾಪತಿಯವರಲ್ಲಿ ಹೇಳಿಕೊಳ್ಳುತ್ತೇನೆ. ಅನ್ನವನ್ನು ಉತ್ಪತ್ತಿ ಮಾಡತಕ್ಕ ರೈತರನ್ನು ಕಡೆಗಣ್ಣಿನಿಂದ ನೋಡಿದರೆ ಯಾವ ಸರ್ಕಾರಕ್ಕೆ ತಾನೆ ಅನ್ನದೇವತೆಯ ಶಾಪ ಬಾರದೆ ಇದ್ದೀತು ! ಇವರು ಇವತ್ತು ಅನ್ನದೇವತೆಯ ಶಾಪಕ್ಕೆ ಒಳಗಾಗಿದ್ದಾರೆ. ಆ ಶಾಪದಿಂದ ತಪ್ಪಿಸಿಕೊಳ್ಳಬೇಕಾದರೆ ಒಂದೇ ದಾರಿ. ಮಂತ್ರಿಗಳಾಗಿರತಕ್ಕವರು ತಮ್ಮ ಮನಸ್ಸನ್ನು ಪರಿಶುದ್ಧತೆಮಾಡಿಕೊಂಡು ಅವರ ಕೆಲಸವನ್ನು ಬೇರೆಯವರಿಗೆ ಈಗಲೇ ಕೊಡುವುದು ಒಳ್ಳೆಯದು. ಯಾರೇ ಬರಲಿ, ದೇಶದ ಜನತೆಗೆ ಇರತಕ್ಕ ಅನ್ನದಾಹ ಮುಖ್ಯವಾಗಿ ಹೋಗಬೇಕು. ಆ ಕೆಲಸವನ್ನು ಈಗಿನ ಸನ್ನಿವೇಶದಲ್ಲಿ ಮಾಡುವುದು ಮುಖ್ಯ. ಇಲ್ಲದಿದ್ದರೆ ಇವರು ಅನ್ನದೇವತೆಯ ಶಾಪಕ್ಕೆ ಸಿಕ್ಕಿ ಖಂಡಿತವಾಗಿ ಸುಟ್ಟುಹೋಗುತ್ತಾರೆ.

4-00 P.M.

ಇನ್ನು ಇವತ್ತು ರಾಜ್ಯಪಾಲರ ಭಾಷಣದಲ್ಲಿ ಕ್ಷಾಮ ನಿವಾರಣೆಗೆ ಕೆಲವು ಸಲಹೆಗಳನ್ನು ಸರ್ಕಾರದವರು ರಾಜ್ಯಪಾಲರ ಮುಖಾಂತರ ಕೊಡಿಸಿದ್ದಾರೆ. ಆ ಸಲಹೆಗಳನ್ನು ನೋಡಿದರೆ "A drop in the ocean" ಅಂದರೆ, ಸಮುದ್ರದಲ್ಲಿ ಒಂದು ತೊಟ್ಟು ನೀರು ಹಾಕಿದ ಹಾಗೆ ಇದೆ. ಇವತ್ತು ಸುಮಾರು ಒಂದೂವರೆಕೋಟಿ ಜನ ಈ ಕ್ಷಾಮಕ್ಕೆ ಈಡಾಗಿದ್ದಾರೆ. ಇಷ್ಟು ಜನಗಳಿಗೆ ಇವರು ಏರ್ಪಾಡು ಮಾಡಿರುವ ರಿಲೀಫ್ ಕಾಮಗಾರಿಗಳು, ಆಹಾರ ಹಂಚಿಕೆ ವ್ಯವಸ್ಥೆ ಏನೇನೂ ಸಾಲದು. ಇವತ್ತು ಜನ ಕೆಲಸ ಕೊಡಿ ಎಂದು ಕೇಳುತ್ತಾ ಇದ್ದಾರೆ. ಇವತ್ತು ಜನರಿಗೆ ಹೊಟ್ಟೆಗೆ ಹಿಟ್ಟಿಲ್ಲ, ಆಹಾರವನ್ನು ಕೊಳ್ಳುವುದಕ್ಕೆ ಹಣವಿಲ್ಲ. ನೀವು ಅವರಿಂದ ಚೆನ್ನಾಗಿ ಕೆಲಸಮಾಡಿಸಿ ಹೊಟ್ಟೆ ತುಂಬ ಅನ್ನ ಕೊಡಿ. ಅವಕ್ಕಾಗಿ ಪ್ರತಿಯೊಂದು ಹಳ್ಳಿಯಲ್ಲೂ ಒಂದೊಂದು ಕೈಗಾರಿಕೆಯನ್ನು ಸ್ಥಾಪಿಸಿ ಅವರಿಗೆ ಕೆಲಸ ಕೊಡಿ. ಕೆಲಸ ಮಾಡಿದಮೇಲೆ ಅವರಿಗೆ ಸಾಕಷ್ಟು ಅನ್ನ ಕೊಡಿ ದುಡ್ಡು ಕೊಡದೇ ಇದ್ದರೂ ಧಾನ್ಯರೂಪದಲ್ಲಿ ಅವರಿಗೆ ಸಹಾಯಮಾಡಿ. ಪ್ರತಿಯೊಂದು ಹಳ್ಳಿಯಲ್ಲೂ ಆಹಾರವನ್ನು ಹಂಚತಕ್ಕ ಆಹಾರ ಮಳಿಗೆಗಳನ್ನು ಮಾಡಿ ಅವುಗಳ ಮೂಲಕ ಮತ್ತು ಫೇರ್‌ಪ್ರೈಸ್ ಡಿಪೋಗಳ

ಮೂಲಕ ಆಹಾರವನ್ನು ಹಂಚಿ. ಅದೂ ಅಲ್ಲದೆ ದನಗಳಿಗೆ ಹುಲ್ಲನ್ನು ಹಂಚುವ ಏರ್ಪಾಡನ್ನು ವಾಳಿಯೇ ಮಾಡಬೇಕು. ಆದರೆ ಹುಲ್ಲು ಎಲ್ಲ ತರೋಣವೆಂದು ಕೈ ಎತ್ತಬೇಡಿ. ಇವತ್ತು ಕಾಡುಗಳಲ್ಲಿ ಆಗಲೀ ಅಥವಾ ಬೇರೆ ಎಲ್ಲಿಯೇ ಇರಲಿ ಅಲ್ಲಿ ಸಿಗತಕ್ಕ ಮರಗಳ ಸೊಪ್ಪನ್ನು ಕತ್ತರಿಸಿ ಪ್ಯಾಕ್ ಮಾಡಿ ಅವನ್ನು ಘಾಡಂ ಬ್ಯಾಂಕಿನಲ್ಲಿಟ್ಟು ಅಭಾವ ಕಾಲದಲ್ಲಿ ಪ್ರತಿಯೊಂದು ತಾಲ್ಲೂಕು ಹೆಡ್ ಕ್ವಾರ್ಟರಿಗೂ ದನಗಳ ಮೇವಿಗಾಗಿ ಸಾಗಿಸಲೇಬೇಕು ಎಂಬುದಾಗಿ ನಾನು ಸರ್ಕಾರಕ್ಕೆ ಅಗ್ರಹ ಪೂರ್ವಕವಾಗಿ ಹೇಳಬೇಕಾಗಿದೆ, ಇಲ್ಲದಿದ್ದರೆ ಗೋಮಾತೆಯ ಒಂದು ಶಾಪಕ್ಕೆ ಇವರು ಒಳಗಾಗ ಬೇಕಾಗುತ್ತದೆ. ಗೋವನ್ನು ಪೂಜೆ ಮಾಡತಕ್ಕ ಈ ದೇಶದಲ್ಲಿ, ಇವರು ಒಂದು ವೇಳೆ ಆ ಗೋವುಗಳ ಶಾಪಕ್ಕೆ ಒಳಗಾದರೆ ಅದರ ಫಲತಾಂಶವೇನಾಗುತ್ತದೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಪ್ರತಿಯೊಂದು ಹಳ್ಳಿಯಲ್ಲೂ ಗಂಜಿ ಕೇಂದ್ರಗಳನ್ನು ಸ್ಥಾಪನೆಮಾಡಿ ಆ ಮುಖಾಂತರ ನಿರುದ್ಯೋಗಿಗಳಿಗೆ ತಮ್ಮ ಜೀವವನ್ನು ಉಳಿಸಿಕೊಳ್ಳುವುದಕ್ಕೆ ಸರ್ಕಾರದವರು ನೆರವಾಗಬೇಕು. ಬಹು ಮುಖ್ಯವಾಗಿ ಆಹಾರ ಮಳಿಗೆಗಳನ್ನು ಎಲ್ಲಾ ಹಳ್ಳಿಗಳಲ್ಲೂ ಕೂಡಲೇ ತೆರೆಯಬೇಕು. ಪಡಿತರ ಪದ್ಧತಿಯನ್ನು ಅದಷ್ಟು ಜಾಗ್ರತೆ ಇಡೀ ದೇಶದಲ್ಲಿ ಜಾರಿಮಾಡದ ಹೊರತು ದೇಶದಲ್ಲಿ ಆಹಾರ ಪರಿಸ್ಥಿತಿಯನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಸರ್ಕಾರಕ್ಕೆ ಒತ್ತಿ ಒತ್ತಿ ಹೇಳಬೇಕಾಗಿದೆ.

ಇವತ್ತು ನಮ್ಮ ದೇಶದ ಆಹಾರ ನೀತಿಯಲ್ಲಿ ಎಷ್ಟರಮಟ್ಟಿಗೆ ಬಗಿ ಇದೆಯೆಂಬುದನ್ನು ಆಹಾರ ಸಚಿವರೇ ನೋಡಬೇಕು. ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ಇವತ್ತು ಒಂದು ಅಂಗಡಿಯಲ್ಲಿ ಸರ್ಕಾರದವರು ನಮೂದು ಮಾಡಿರತಕ್ಕ ದರದಲ್ಲಿ ಒಂದು ಕೆ.ಜಿ. ಅಕ್ಕಿ ಸಿಕ್ಕದರೆ, ಅದೇ ಅಂಗಡಿಯಲ್ಲಿ ಒಂದು ಕೆ.ಜಿ. ಅಕ್ಕಿಗೆ ಆಗುವ ದರದ ಎರಡರಷ್ಟು ದರವನ್ನು ಕೊಟ್ಟರೆ ಆ ಅಂಗಡಿಯಲ್ಲಿರತಕ್ಕ ಎಲ್ಲಾ ಮಾಲನ್ನು ತೆಗೆದುಕೊಂಡು ಹೋಗಬಹುದು. 90 ಪೈಸೆ ಒಂದು ಕೆ.ಜಿ. ಅಕ್ಕಿಗೆ ಆಗಿರಲಿ. ಕೊನೆಯ ಪಕ್ಷ ಒಂದು ಕೆ.ಜಿ.ಗೆ ಒಂದೂವರೆ ಅಥವಾ ಎರಡು ರೂಪಾಯಿಗಳೆಂದು ಹೇಳಲಿ. 170 ರೂಪಾಯಿಗಳಿಗೆ ಒಂದು ಮೂಟೆ ಅಕ್ಕಿ ಕೊಡುತ್ತೇವೆಂದು ಹೇಳಿದರೆ ಸಾಕು. ಆ ಅಂಗಡಿಯಲ್ಲಿರತಕ್ಕ 100 ಅಕ್ಕಿ ಮೂಟೆಗಳನ್ನು ವ್ಯಾಪಾರಮಾಡಿಕೊಂಡು ಹೋಗಬಹುದು. ಇದು ಎಂತಹ ನೀತಿ ? ಸರ್ಕಾರದವರ ಈ ಆಹಾರದ ನೀತಿ ಇದು ಒಂದು ಶಕುನಿ ನೀತಿ ಇದ್ದಹಾಗೆ ಇದೆ. ಇವರಲ್ಲಿ ಒಂದು ಕಾನೂನನ್ನು ರಚನೆ ಮಾಡಿ ಆ ಕಾನೂನನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಬೇಕೆನ್ನುವ ನೀತಿಯಿಲ್ಲ. ಒಂದು ಕಡೆ ಲೆವಿ ಪ್ರಕಾರ ಸರ್ಕಾರ ನಮೂದುಮಾಡಿರುವ ದರದ ಪ್ರಕಾರ ಆಹಾರ ಮಳಿಗೆಗಳಿಗೆ ಧಾನ್ಯ ಕೊಡಬೇಕೆಂದು ರೈತರಿಂದ ವಸೂಲು ಮಾಡುತ್ತಾರೆ. ಇವತ್ತು ಬೆಂಗಳೂರು ಮತ್ತು ಮೈಸೂರು ಅಂತಹ ದೊಡ್ಡ ದೊಡ್ಡ ನಗರಗಳಲ್ಲಿ ದೊಡ್ಡ ದೊಡ್ಡ ವರ್ತಕರು ಆಹಾರವನ್ನು ಯಥೇಚ್ಛವಾಗಿ ದಾಸ್ತಾನು ಮಾಡಿ 160—170 ರೂಪಾಯಿಗಳ ಪ್ರಕಾರ ಒಂದೊಂದು ಅಕ್ಕಿ ಮೂಟೆಯನ್ನು ಮಾರಾಟಮಾಡುತ್ತಿದ್ದಾರೆ. ಇದನ್ನು ಓಪನ್ ಮಾರ್ಕೆಟ್ಟಿನಲ್ಲಿ ಮಾರಾಟಮಾಡುತ್ತಿದ್ದಾರೆ. It is legalised blackmarket, a most heinous sin that can be heard of and that too in these days of distress, ಇದನ್ನು ತಪ್ಪಿಸಬೇಕೆಂಬ ಮನಸ್ಸು ನಿಜವಾಗಿ ಸರ್ಕಾರಕ್ಕೆ ಇದ್ದರೆ, ಆಹಾರ ದಾಸ್ತಾನು ಮಾಡುವ ಕೆಲಸ, ಆಹಾರ ಹಂಚಿಕೆಮಾಡುವ ಕೆಲಸ ಮತ್ತು ಆಹಾರ ಮಾರಾಟಮಾಡುವ ಕೆಲಸ—ಇವೆಲ್ಲವನ್ನೂ ಸರ್ಕಾರವೇ ನೇರವಾಗಿ ವಹಿಸಿಕೊಂಡು ಒಂದು ನಿಯಂತ್ರಣ ಅಥವಾ ಕಡ್ಡಾಯವಾದ ಕಾನೂನಿನಿಂದ ಈ ದೇಶದಲ್ಲಿರತಕ್ಕ ಆಹಾರವನ್ನು ಸಂಪೂರ್ಣವಾಗಿ ಸರಿಯಾಗಿ ಹಂಚಬೇಕು. ದುಡ್ಡಿದ್ದವನು ದೊಡ್ಡಪ್ಪ ಎಂದು ಹೇಳುವ ಹಾಗೆ ದುಡ್ಡಿದ್ದವನು ಎಷ್ಟು ಬೇಕಾದರೂ ತಿನ್ನಬಹುದು. ಆದರೆ ದುಡ್ಡು ಇಲ್ಲದೇ ಇದ್ದವನು ಸಾಯಬೇಕು ! ನಮ್ಮ ದೇಶದಲ್ಲಿ ಕಡಿಮೆ ಆಹಾರೋತ್ಪತ್ತಿಯಾದರೂ ಉತ್ಪತ್ತಿಯಾದ ಆಹಾರವನ್ನು ಎಲ್ಲರಿಗೂ ಸಮನಾಗಿ ಹಂಚಿ. ಸ್ಟ್ಯಾಚುಟರಿ ರೇಷನಿಂಗ್ ಪದ್ಧತಿ ಕೂಡಲೇ ಜಾರಿಗೆ ತರದೆ ಬೇರೆ ಇನ್ನಾವ ರೀತಿಯೂ ಸಾಧ್ಯವಿಲ್ಲವೆಂದು ನಾನು ಸಭಾಧ್ಯಕ್ಷರ ಮೂಲಕ ಸರ್ಕಾರದವರಿಗೆ ಸೂಚನೆ ಮಾಡಲು ಇಚ್ಛಿಸುತ್ತೇನೆ. ಇದರಲ್ಲಿ ಏನಾದರೂ ಇವರು ವಿಫಲರಾದರೆ ಜನರು ಹುಚ್ಚೆದ್ದಾರು, ಹಸಿವಿನ ಕ್ರಾಂತಿ ದೇಶವನ್ನೇ ನುಂಗುತ್ತಿದೆ ಎಂಬುದಾಗಿ ನಾನು ಇವತ್ತು ಸರ್ಕಾರಕ್ಕೆ ಮುನ್ನೆಚ್ಚರಿಕೆ ಕೊಡಬಯತ್ತೇನೆ.

ಸರ್ಕಾರದವರು ಈ ಸಾರಿಯೂ ಎಷ್ಟು ಬೇಕಾದರೂ ಕೂಡ ರಿಲೀಫ್ ಕಾಮಗಾರಿಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ ಆದರೆ ಈಗ ಎಲ್ಲೆಲ್ಲಿ ಕ್ಷಾಮ ತಲೆದೋರಿದೆಯೋ ಅಂತಹ ಕಡೆಗಳಲ್ಲಿ ಕೂಡಲೇ ಕಂದಾಯ ಮಾಫಿ ಮಾಡಬೇಕೆಂದು ನಾನು ಕೇಳುತ್ತೇನೆ. ಈಗಿನ ಸರ್ಕಾರದಲ್ಲಿ ಕಂದಾಯ ಮಾಫಿ ಮಾಡಿ ಎಂಬುದಾಗಿ ಜನತೆಯೇ ಕೇಳಬೇಕಾದ ಪರಿಸ್ಥಿತಿ ಬಂದಿದೆ. ಇಷ್ಟು ಹೊತ್ತಿಗೆ ಜನತೆಯು ಕೇಳುವುದಕ್ಕಿಂತ ಮುಂಚಿತವಾಗಿಯೇ ಸರ್ಕಾರದವರು ಕಂದಾಯವನ್ನು ಮಾಫಿ ಮಾಡಬೇಕಾಗಿತ್ತು. ಏನೂ ಬೆಳೆಯದೇ ಇರುವ ಭೂಮಿಗೆ ಕಂದಾಯ ಡಿಮ್ಯಾಂಡ್

(ಶ್ರೀ ಎಸ್. ಶಿವಪ್ಪ)

ಮಾಡತಕ್ಕ ನೀತಿ ಯಾವುದು ? ಆದ್ದರಿಂದ ಕಂದಾಯವನ್ನು ರದ್ದುಮಾಡುವ ವಿಷಯವನ್ನು ಕೂಡಲೇ ಪರಿಶೀಲಿಸಿ ತೀರ್ಮಾನವನ್ನು ತೆಗೆದುಕೊಳ್ಳುವುದು ಸರ್ಕಾರದ ಆದ್ಯ ಕರ್ತವ್ಯ. ಖಂಡಿತವಾಗಿ ಇವರಿಗೆ ಕಂದಾಯವನ್ನು ವಸೂಲು ಮಾಡತಕ್ಕ ಹಕ್ಕು ಇಲ್ಲ. ರೈತನಾದವನು ಏನೂ ಬೆಳೆಯದೇ ಇರತಕ್ಕ ಸಮಯದಲ್ಲಿ ಕಂದಾಯ ವಸೂಲುಮಾಡುವುದಕ್ಕೆ ಹೊರಟಿರುವುದು ಖಂಡಿತವಾಗಿ ನ್ಯಾಯವಲ್ಲ. ನಾಳೆಯೇ ಕಂದಾಯ ರದ್ದಿಯಾತಿ ಆಜ್ಞೆಯನ್ನು ಸರ್ಕಾರದವರು ಹೊರಡಿಸಬೇಕೆಂದು ನಾನು ಕೇಳುತ್ತೇನೆ. ಆಂಧ್ರ ಸರ್ಕಾರದವರು ಇಂತಹ ಆಜ್ಞೆಯನ್ನು ಈಗಾಗಲೇ ಹೊರಡಿಸಿದ್ದಾರೆ. ಇನ್ನೂ ಪಕ್ಕದ ಇತರ ರಾಜ್ಯ ಸರ್ಕಾರಗಳವರು ಅಂತಹ ಆಜ್ಞೆಗಳನ್ನು ಹೊರಡಿಸಿರುವಾಗ ಇವರು ಸುಮ್ಮನೆ ಇಷ್ಟು ನಿಧಾನ ಮಾಡುತ್ತಿರುವುದು ಧರ್ಮವಲ್ಲ. ಹಿಂದುಮುಂದು ನೋಡುತ್ತಿದ್ದಾರೆ. ಇದು ಖಂಡಿತವಾಗಿ ಅಕ್ಷಮ್ಯ ಅಪರಾಧ. ಆದ್ದರಿಂದ ಸರ್ಕಾರದವರು ಕೂಡಲೇ ಕಂದಾಯವನ್ನು ರದ್ದುಮಾಡುವ ವಿಷಯವನ್ನು ಜನಗಳ ತಿಳುವಳಿಕೆಗಾಗಿ ಜಾಗ್ರತೆಯಾಗಿ ಪ್ರಕಟಣೆ ಮಾಡಬೇಕು. ಅದು ಅವರ ಒಂದು ದೊಡ್ಡ ಜವಾಬ್ದಾರಿ ಎಂಬುದಾಗಿ ನಾನು ಹೇಳುತ್ತೇನೆ. ಇದನ್ನು ಮಾಡದೇಹೋದರೆ ನಿಜವಾಗಿ ಕಂದಾಯವನ್ನು ವಸೂಲು ಮಾಡುವುದಕ್ಕಾಗುವುದಿಲ್ಲ. ಕಂದಾಯವನ್ನು ವಜಾ ಮಾಡಿದರೆ ಸರಿ, ಇಲ್ಲದಿದ್ದರೆ ಕಂದಾಯವನ್ನು ಕೊಡುವುದಕ್ಕೆ ಜನರಲ್ಲಿ ದುಡ್ಡೇ ಇಲ್ಲ. ಆದ್ದರಿಂದ ಸರ್ಕಾರದವರು ಕಂದಾಯವನ್ನು ವಜಾಮಾಡುವ ಆಜ್ಞೆಯನ್ನು ಶೀಘ್ರವೇ ಹೊರಡಿಸಬೇಕೆಂದು ನಾನು ಕಂದಾಯ ಸಚಿವರಲ್ಲಿ ಹಾಗೂ ಆಹಾರ ಸಚಿವರಲ್ಲಿ ಅರಿಕೆ ಮಾಡುತ್ತೇನೆ.

ಇನ್ನು ಸ್ಟ್ಯಾಚುಟರಿ ರೇಷನಿಂಗ್, ಇನ್‌ಫಾರ್ಮಲ್ ರೇಷನಿಂಗನ್ನು ಜಾರಿಗೆ ತರಬೇಕಾದರೆ ಎಷ್ಟು ಆಹಾರ ಬೇಕೆಂಬುದಾಗಿ ಹೇಳಿದ್ದಾರೆ. ಅದರಲ್ಲಿ ಇವರ ಕಷ್ಟಗಳನ್ನೂ ಸಹ ಹೇಳಿದ್ದಾರೆ. ಹೋದವರ್ಷ ಇವರೇ ಹೇಳಿದಂಥ ಮಾತನ್ನು ಇವರ ನೆನಪಿಗೆ ತರಬೇಕಾಗಿದೆ. 1965ನೇ ಇಸವಿಯಲ್ಲಿ ಬಂಪರ್ ಕ್ರಾಪ್ ಬಂದಿದೆ ಎಂಬುದಾಗಿ ಹೇಳಿದ್ದರು. ಅಂತಹ ಕಾಲದಲ್ಲಿ ಇವರು ವಸೂಲು ಮಾಡಿರುವುದು ಕೇವಲ ಒಂದು ಲಕ್ಷ ಟನ್ನುಗಳಷ್ಟು. ಇವತ್ತು ದೇಶದಲ್ಲಿ ಕ್ಷಾಮ ಪರಿಸ್ಥಿತಿ ಇದೆ ಜನಗಳಲ್ಲಿ ಆಹಾರವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಈಗ ಸುಮಾರು 10 ಲಕ್ಷ ಟನ್ನುಗಳಷ್ಟು ಆಹಾರ ಬೇಕು ಎಂಬುದಾಗಿ ಹೇಳುತ್ತಿದ್ದಾರೆ. ಇದರಲ್ಲಿ ರೈತರಿಂದ ಸುಮಾರು ಒಂದು ಅಥವಾ ಎರಡು ಲಕ್ಷ ಟನ್ನುಗಳಷ್ಟು ಆಹಾರವನ್ನು ಶೇಖರಣೆ ಮಾಡುತ್ತೇವೆಂದು ಹೇಳುತ್ತಾರೆ. ಉಳಿದುದನ್ನು ಕೇಂದ್ರ ಸರ್ಕಾರದವರು ಕೊಡಬೇಕೆನ್ನುತ್ತಾರೆ. ಅದು ಹೇಗೆ ಸಾಧ್ಯವೋ ಗೊತ್ತಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಪುಟ 6ರಲ್ಲಿ ಬೆಂಗಳೂರು ಮತ್ತು ಕೆ. ಜಿ. ಎಫ್. ಪ್ರದೇಶದಗಳಲ್ಲಿ ವಿಧ್ಯುಕ್ತ ಪಡಿತರ ಪದ್ಧತಿಯನ್ನು ಪ್ರಾರಂಭಿಸುವ ಉದ್ದೇಶವಿದೆಯೆಂದು ಹೇಳಿದ್ದಾರೆ. ದೇಶದಲ್ಲಿ ಬಂಪರ್ ಕ್ರಾಪ್ ಇಲ್ಲದೇ ಇರುವಾಗ ಕೇವಲ ಒಂದು ಲಕ್ಷ ಟನ್ನುಗಳಷ್ಟು ಸಹ ರೈತರಿಂದ ಧಾನ್ಯವನ್ನು ಶೇಖರಿಸಲು ಕಷ್ಟವಿರುವಾಗ, ಅದರಲ್ಲೂ ಬೆಲೆಗಳು ಏರಿಳಿತವಾಗುವಾಗ, ಇವರು ಹೇಗೆ ಒಂದು ಅಥವಾ ಎರಡು ಲಕ್ಷ ಟನ್ನುಗಳಷ್ಟು ಆಹಾರವನ್ನು ಶೇಖರಿಸುತ್ತಾರೋ ಗೊತ್ತಿಲ್ಲ. ಅದಕ್ಕೋಸ್ಕರ ಎಷ್ಟು ಒತ್ತಾಯ ಮಾಡುತ್ತಾರೋ ಇವರೇ ಯೋಚನೆಮಾಡಬೇಕು. ಇತ್ತೀಚೆಗೆ ಬೆಲೆಗಳಲ್ಲಿ ಬಹಳ ವ್ಯತ್ಯಾಸ ಇದೆ. ಅಕ್ಕಿಗೆ ಇವರು ರೈತರಿಗೆ ಕೊಡುವ ಧಾರಣೆ ಬಹಳ ಕಡಿಮೆಯಾಗಿದೆ. ಬತ್ತಕ್ಕೆ ಸರಿಯಾದ ಬೆಲೆ ನಿಗದಿಮಾಡಬೇಕೆಂದು ನಾವು ಇಲ್ಲಿ ಎಷ್ಟೋ ಸಾರಿ ಹೇಳಿದ್ದೇವೆ. ಆ ರೀತಿ ಹೇಳಿದರೂ ಇವರು ಮಾಮೂಲಾಗಿ ಹೇಳುವ ರೀತಿಯಲ್ಲಿಯೇ ಹೇಳಿದ್ದಾರೆ. ಆದ್ದರಿಂದ ಸರ್ಕಾರದವರು ಒಂದು ಕಾನೂನು ಮಾಡಿ ಇವತ್ತು ಒಂದು ಕ್ವಿಂಟಾಲಿಗೆ ಇಷ್ಟೇ ಧಾರಣೆ ಎಂಬುದಾಗಿ ಹೇಳಿ ಅದರ ಮೇಲೆ ಇಷ್ಟು ಬೋನಸ್ ಕೊಡುತ್ತೇವೆಂದು ಸ್ಪಷ್ಟವಾಗಿ ಮತ್ತು ಕಟ್ಟುನಿಟ್ಟಾಗಿ ಹೇಳಲಿ. ಆಗ ಅವನಿಗೆ ಒಂದು ನಂಬಿಕೆ ಬಂದು ತಾನು ಬೆಳೆದ ಆಹಾರವನ್ನು ವಿಗೆ ಒಳ್ಳೆಯ ಬೆಲೆ ಬರುತ್ತದೆಂದು ತಿಳಿಯುತ್ತಾನೆ. ಈ ವಿಚಾರವನ್ನು ಆಹಾರ ಸಚಿವರು ನಿರ್ದಿಷ್ಟವಾಗಿ ತಿಳಿಸಬೇಕೆಂದು ಹೇಳುತ್ತೇನೆ.

ಇಲ್ಲದಿದ್ದರೆ ಅದರಲ್ಲಿ ಅಧಿಕಾರಿಗಳು ಕೈ ಹಾಕುವುದಕ್ಕೆ ಅವಕಾಶವಾಗುತ್ತದೆ. 5 ರೂಪಾಯಿ 10 ರೂಪಾಯಿಗಳನ್ನು ಕೊಡಬಹುದು. ಏನೂ ಕೊಡದೇ ಇದ್ದರೂ ಇರಬಹುದು. ಅದು ರೈತನ ಶಕ್ತಿಯ ಮೇಲೆ ಹೋಗುತ್ತದೆ. ಘಟಾನುಘಟಿ ರೈತನಾದರೆ ಅವನಿಗೆ ಸರ್ಕಾರದವರ ಆಶ್ರಯ ಇದ್ದರೆ ಅವನು ಸರ್ಕಾರದವರಿಂದ 15 ರೂಪಾಯಿಗಳನ್ನು ತೆಗೆದುಕೊಳ್ಳಬಹುದು. ಬಡವನಾದವನು ಅದನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗದೇ ಇರಬಹುದು. ಆದ್ದರಿಂದ ಅಂಥಾದ್ದಕ್ಕೆ ಅವಕಾಶವನ್ನು ಕೊಡಬಾರದು. ಎಲ್ಲರಿಗೂ ಅನ್ವಯವಾಗುವ ಹಾಗೆ ನಿರ್ದಿಷ್ಟವಾದ ಒಂದು ಧಾರಣೆಯನ್ನು ನಿಗದಿ ಮಾಡಿದ್ದೇವೆಂದು ದೇಶದ ಜನತೆಗೆ ಹೇಳಬೇಕು ಎಂದು ನಾನು ಆಹಾರ ಸಚಿವರಲ್ಲಿ ಹೇಳುತ್ತೇನೆ. ಸರ್ಕಾರದವರು ಈಗ 15 ವರ್ಷಗಳಿಂದ ಮೂರು ಯೋಜನೆಗಳಿಂದ ದೇಶದಲ್ಲಿ ಹಾಗೆ

ಮಾಡಿದ್ದೇವೆ, ಹೀಗೆ ಮಾಡಿದ್ದೇವೆ, ಸಂಪತ್ತನ್ನು ಜಾಸ್ತಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೂ ಕೂಡ ಕಡಿಮೆ ಊಟ ಮಾಡಿ ಎಂದು ಹೇಳುತ್ತಿದ್ದಾರೆ. ಇದು ಯಾವ ತತ್ವ ! 15 ವರ್ಷಗಳ ಯೋಜನೆಯ ನಂತರ ಸರ್ಕಾರದವರಿಂದ ಬಂದಿರತಕ್ಕ ಘೋಷಣೆ ಏನೆಂದರೆ ಸೋಮವಾರ ಊಟ ವನ್ನು ಬಿಡಿ, ಹೋಟಲುಗಳಲ್ಲಿ ಇಡ್ಲಿ ದೋಸೆಯನ್ನು ಮಾಡಬೇಡಿ ಅಕ್ಕಿಯನ್ನು ತಿನ್ನುವುದನ್ನು ಕಡಿಮೆ ಮಾಡಿ ಎಂದು ಒಣ ಪ್ರಚಾರ ಮಾಡತಕ್ಕಂಥ ಪರಿಸ್ಥಿತಿಗೆ ಸರ್ಕಾರ ಬಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು ಮಾಡಿರತಕ್ಕ ಅಜ್ಞೆಗೂ ಗೌರವವಿಲ್ಲ. ಕೆಲವು ಕಡೆ ಹೋಟಲುಗಳಲ್ಲಿ ಇಡ್ಲಿ ಮತ್ತು ದೋಸೆಯನ್ನು ಮಾಡುತ್ತಿದ್ದಾರೆ.

ಶ್ರೀ ಎಸ್. ಶಿವಪ್ಪ.—ಆ ಒಂದು ಪ್ರಚಾರ ಏನಿದೆ ಅದು ಕೇವಲ ಒಣ ಪ್ರಚಾರವೇ ಹೊರತು ಅದರಿಂದ ಯಾವ ಪ್ರಯೋಜನವೂ ಇಲ್ಲ. ದೇಶದಲ್ಲಿ ಸಂಪತ್ತನ್ನು ಜಾಸ್ತಿ ಮಾಡಿರತಕ್ಕ ಯಾವ ಒಂದು ಚಿನ್ಹೆಯೂ ಇಲ್ಲ. ಈ ದೇಶದಲ್ಲಿ ನೀರಾವರಿಯನ್ನು ಜಾಸ್ತಿ ಮಾಡುತ್ತೇವೆ ಎಂದು ಅನೇಕ ಕೋಟಿ ರೂಪಾಯಿಗಳನ್ನು ಸರ್ಕಾರದವರು ಖರ್ಚು ಮಾಡಿದ್ದಾರೆ. ಇವೊತ್ತು ಅದೆಲ್ಲವೂ ಏನಾಗಿದೆ ? ಅದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೋ ಅದಕ್ಕೆ ಸರಿಯಾದ ಪ್ರತಿಫಲ ಬಂದಿಲ್ಲ. ಕಡಿಮೆ ನೀರನ್ನು ಉಪಯೋಗಿಸಿ, ಈಗ ಇರತಕ್ಕ ನೀರಾವರಿ ಪ್ರದೇಶದಲ್ಲಿ ಬತ್ತ ಮುಂತಾದ ಆಹಾರದ ಪದಾರ್ಥಗಳನ್ನು ಮಾತ್ರ ಬೆಳೆಯಿರಿ, ಕಬ್ಬು ಮುಂತಾದ ಕಮರ್ಷಿಯಲ್ ಕ್ರಾಫ್ಟ್ ಬೆಳೆಯಬೇಡಿ ಎಂದು ಹೇಳತಕ್ಕಂಥ ಒಂದು ಪರಿಸ್ಥಿತಿ ಬಂದಿದೆ. ಇರಿಗೇಷನ್ ಎನ್ನುವುದಕ್ಕೆ ಇವೊತ್ತು ಒಂದು ಕ್ಷೋಬೆ ಬಂದಿದೆ. ದೇಶವನ್ನು ಸಂಪದ್ಯುಕ್ತವಾಗಿ ಮಾಡುವುದಕ್ಕೆ ಬದಲಾಗಿ ದೇಶವನ್ನು ಈ ಸರ್ಕಾರದವರು ಬಡತನಕ್ಕೆ ಗುರಿಮಾಡಿದ್ದಾರೆ. ಊಟವನ್ನು ಕಡಿಮೆ ಮಾಡಿ, ನೀರನ್ನು ಕಡಿಮೆ ಉಪಯೋಗಿಸಿ ಬೆಳೆಯನ್ನು ಬೆಳೆಯಿರಿ ಎಂದು ರೈತರಿಗೆ ಒಂದು ಸೂಚನೆಯನ್ನು ಕೊಡತಕ್ಕ ಸರ್ಕಾರದ ಒಂದು ನೀತಿ ಏನಿದೆ ಅದು ಸರಿಯಾದ ನೀತಿಯಲ್ಲ. ನಾವು ಮೇಜರ್ ಇರಿಗೇಷನ್ ಮಾಡಿದ್ದೇವೆ ಮೀಡಿಯಂ ಇರಿಗೇಷನ್ ಮಾಡಿದ್ದೇವೆ, ಮೈನರ್ ಇರಿಗೇಷನ್ ಮಾಡಿದ್ದೇವೆ, ಇಷ್ಟು ಲಕ್ಷ ಎಕರೆ ಜಮೀನಿಗೆ ನೀರನ್ನು ಒದಗಿಸತಕ್ಕ ಏರ್ಪಾಡನ್ನು ಮಾಡಿದ್ದೇವೆ, ಅಷ್ಟು ಲಕ್ಷ ಎಕರೆ ಜಮೀನಿಗೆ ನೀರನ್ನು ಒದಗಿಸತಕ್ಕ ಏರ್ಪಾಡನ್ನು ಮಾಡಿದ್ದೇವೆ ಎಂದು ಸರ್ಕಾರದವರು ಏನು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆಯೋ ಅದರಲ್ಲಿ ಅರ್ಥ ಸುಳ್ಳು. ಈಗ ಇರತಕ್ಕ ಇರಿಗೇಷನ್ ಪ್ರಾಜೆಕ್ಟ್‌ಗಳಲ್ಲಿ ಸುಮಾರು ಅರ್ಧ ಪ್ರಾಜೆಕ್ಟ್‌ಗಳು ಪೊಲಿಟಿಕಲ್ ಪ್ರಾಜೆಕ್ಟ್‌ಗಳು, These projects have brought only politics in the State, ಎಲ್ಲಿ ನೀರಿಲ್ಲವೋ ಅಲ್ಲಿ ಒಂದು ಪ್ರಾಜೆಕ್ಟ್ ಕೂಡ ಇಲ್ಲ. ಎಲ್ಲಿ ತಮ್ಮ ಒಂದು ಸಂಬಂಧ ಜಾಸ್ತಿ ಇದೆಯೋ ಅಂಥಾ ಕಡೆ ಪ್ರಾಜೆಕ್ಟ್‌ಗಳ ಕೆಲಸಗಳು ನಡೆಯುತ್ತಿವೆ. ಇಂಥಾ ಪೊಲಿಟಿಕಲ್ ಪ್ರಾಜೆಕ್ಟ್‌ಗಳನ್ನು ನಮ್ಮ ದೇಶದಲ್ಲಿ ಮಾಡಿ ನಮ್ಮ ದೇಶವನ್ನು ಬರಗಾಲದ ಬೆಂಗಾಡು ದೇಶವನ್ನಾಗಿ ಮಾಡಿದ್ದಾರೆ. ಈ ಸರ್ಕಾರದ ನೀತಿ ಪೊಲಿಟಿಕಲ್ ನೀತಿ Political projects have brought its country to the verge of famine. ಮೀಡಿಯಂ ಪ್ರಾಜೆಕ್ಟ್‌ಗಳಲ್ಲಿ ಮೈನರ್ ಪ್ರಾಜೆಕ್ಟ್‌ಗಳಲ್ಲಿ ಯಾವು ಯಾವುದನ್ನು ಕೂಡಲೇ ಕಾರ್ಯಗತ ಮಾಡುತ್ತೇವೆಂದು ಹೇಳಿದ್ದೀರೋ ಅವುಗಳ ಪೈಕಿ ಹೇಮಾವತಿ ಮತ್ತು ಹಾರಂಗಿ ಪ್ರಾಜೆಕ್ಟ್‌ಗಳನ್ನು ಅದಷ್ಟು ಜಾಗ್ರತೆ ಕಾರ್ಯಗತ ಮಾಡುತ್ತೇವೆಂದು ಹೇಳಿದ್ದೀರಿ, ಹೇಮಾವತಿ ಮತ್ತು ಹಾರಂಗಿ ಪ್ರಾಜೆಕ್ಟ್‌ಗಳನ್ನು ಪ್ರಾರಂಭಮಾಡಲು ನಮ್ಮ ದೇಶದ ಮುಖ್ಯ ಮಂತ್ರಿಗಳು ಈಗ್ಗೆ ಒಂದು ವರ್ಷದ ಹಿಂದೆ ಅವುಗಳಿಗೆ ಫೌಂಡೇಷನ್ ಕಲ್ಲನ್ನು ಹಾಕಿ ಬಂದಿದ್ದಾರೆ. ಈಗ ಅದು ಏನಾಗಿದೆ ಎಂದರೆ ಅಲ್ಲಿ ಆ ಫೌಂಡೇಷನ್ ಕಲ್ಲೇನೋ ಇದೆ, ಆದರೆ ಆ ಪ್ರಾಜೆಕ್ಟ್‌ಗಳ ಕೆಲಸ ಮಾತ್ರ ಏನೂ ಆಗಿಲ್ಲ. ಆದ್ದರಿಂದ ಅಲ್ಲಿ ಹಾಕಿರತಕ್ಕ ಫೌಂಡೇಷನ್ ಕಲ್ಲನ್ನು ತೆಗೆದುಕೊಂಡು ಬಂದರೆ ಬಹಳ ಸಂತೋಷ. ಆ ಕಲ್ಲನ್ನು ನೋಡಿ ಜನಗಳು ಶಾಪಹಾಕುತ್ತಾರೆ. ಈ ರೀತಿಯಾದಂತಹ ಫೌಂಡೇಷನ್ ಕಲ್ಲನ್ನು ಹಾಕತಕ್ಕ ನಿಮ್ಮ ಒಂದು ಚಟ ನಿಮ್ಮ ಒಂದು ನೀತಿ ಏನಿದೆ ಇದನ್ನು ನೀವು ಬಿಟ್ಟರೆ ದೇಶಕ್ಕೆ ನೆಮ್ಮದಿಯುಂಟಾಗುತ್ತದೆ. ಹಣಕಾಸಿನ ಪರಿಸ್ಥಿತಿ ಹೇಗಿದೆ, ಎಲ್ಲೆಲ್ಲಿ ಎಷ್ಟರ ಮಟ್ಟಿಗೆ ಹಣವನ್ನು ಖರ್ಚು ಮಾಡಬೇಕು, ಎನ್ನತಕ್ಕ ಒಂದು ನೀತಿ ನಿಮ್ಮಲ್ಲಿ ಇಲ್ಲ. ಮನಸ್ಸಿಗೆ ಬಂದ ಹಾಗೆ ಹಣವನ್ನು ಖರ್ಚು ಮಾಡಿ ಏನು ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಮಾಡಿದ್ದೀರೋ ಅವುಗಳಿಂದ ನೀರನ್ನು ಒದಗಿಸಿಕೊಂಡ ಅದರಿಂದ ಅನ್ನವನ್ನು, ಆಹಾರವನ್ನು ಉತ್ಪಾದನೆ ಮಾಡುತ್ತಿದ್ದಾರೆಯೇ ಎಂಬುದನ್ನು ದಯವಿಟ್ಟು ಯೋಚನೆ ಮಾಡಿ. ರಾಜ್ಯಪಾಲರ ಭಾಷಣದಲ್ಲಿ 42 ಸಾವಿರ ಬಾವಿಗಳ ಕೆಲಸವನ್ನು ಕೈಕೊಳ್ಳಲಾಗಿದೆ, ಇವುಗಳ ಪೈಕಿ 24,500 ಬಾವಿಗಳು ಯೋಜನಾವಧಿಯ ನಾಲ್ಕನೆಯ ವರ್ಷದೊಳಗಾಗಿ ಪೂರ್ತಿಯಾಗಿರುವಂತೆ ತಿಳಿದು ಬಂದಿದೆ ಎಂದು ಹೇಳಿದ್ದಾರೆ. ಮೈನರ್ ಇರಿಗೇಷನ್‌ನಿಂದ ಸುಮಾರು ಒಂದು ಮುಕ್ಕಾಲು ಲಕ್ಷ ಎಕರೆ ಭೂಮಿ ನೀರಾವರಿಯಾಗುತ್ತದೆ ಎಂದು ತಿಳಿಸಿದ್ದೀರಿ, ಅದರಿಂದ 3 ಲಕ್ಷ ಟನ್ ಆಹಾರ ಉತ್ಪಾದನೆಯಾಗಬೇಕು. ಮೇಜರ್ ಇರಿಗೇಷನ್‌ನಿಂದ 5-6 ಲಕ್ಷ ಟನ್ ಆಹಾರ ಉತ್ಪಾದನೆಯಾಗ

(ಶ್ರೀ ಎಸ್. ಶಿವಪ್ಪ)

ಬೇಕು, ಅದೆಲ್ಲವೂ ಎಲ್ಲಿ ಹೋಯಿತು ? ಅದೆಲ್ಲವೂ ನಿಜವಾಗಿದ್ದ ಪಕ್ಷದಲ್ಲಿ ಹೆಚ್ಚು ಆಹಾರೋತ್ಪಾದನೆಯಾಗಲೇ ಬೇಕು. ಸರ್ಕಾರದವರು ಬಾವಿಗಳಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆಯೋ ಅದನ್ನು ಬಾವಿಗಳಿಗೆ ಹಾಕಿದ್ದಾರೆಯೋ ಅಥವಾ ಬಾಯಿಗಳಿಗೆ ಹಾಕಿದ್ದಾರೆಯೋ ಗೊತ್ತಿಲ್ಲ. ಪ್ರಾಜೆಕ್ಟ್‌ಗಳಿಗಾಗಿ ಸರ್ಕಾರದವರು ಏನು ಹಣವನ್ನು ಖರ್ಚುಮಾಡಿದ್ದಾರೆಯೋ ಅದು ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಹಂಚಿಕೆಯಾಗಿದೆ. ಇದರಿಂದ ಇವೊತ್ತು ದೇಶದಲ್ಲಿ ಜನಗಳಿಗೆ ತಿನ್ನುವದಕ್ಕೆ ಅನ್ನವಿಲ್ಲ. ಇವೊತ್ತು ನೀವು ಮಾಡಿರತಕ್ಕ 3 ಯೋಜನೆಗಳ ಫಲತಾಂಶವಾಗಿ ದೇಶದಲ್ಲಿ ಹೆಚ್ಚು ಸಂಪತ್ತನ್ನು ಉತ್ಪತ್ತಿ ಮಾಡಿದ್ದೀರಾ ? ನೀವು ನಮ್ಮ ದೇಶದಲ್ಲಿ ಏನು ಉತ್ಪತ್ತಿ ಮಾಡಿದ್ದೀರೆಂದರೆ ದೊಡ್ಡ ದೊಡ್ಡ ಶ್ರೀಮಂತ ಕಂಟ್ರಾಕ್ಟರುಗಳನ್ನು ದೊಡ್ಡ ಕಾಳಸಂತೆ ಕೋರರನ್ನು ದೊಡ್ಡ ದೊಡ್ಡ ವರ್ತಕರನ್ನು ಉತ್ಪಾದನೆ ಮಾಡಿದ್ದೀರಿ, ಬೆಂಗಳೂರಿನಲ್ಲಿ ಮಂಡಿಗಳನ್ನು ಇಟ್ಟುಕೊಂಡು ಸಾವಿರಾರು ರೂಪಾಯಿಗಳನ್ನು ಸಂಪಾದನೆ ಮಾಡತಕ್ಕ ವರ್ತಕರನ್ನು ನಿರ್ಮಾಣ ಮಾಡಿದ್ದೀರಿ, ನಿಮ್ಮ ಹಿಂದುಗಡೆ ತಿರುಗಾಡತಕ್ಕ ಪುಡಾರಿಗಳಿಗೆ ಬೋಗಸ್ ಪರ್ಮಿಟ್‌ಗಳನ್ನು ಮತ್ತು ಲೈಸನ್ಸ್‌ಗಳನ್ನು ಕೊಟ್ಟು ಅವರು ಸುಖಜೀವಿಗಳಾಗಿರುವುದಕ್ಕೆ ಏನು ಕೆಲಸ ಮಾಡಬೇಕೋ ಅದನ್ನು ಮಾಡಿದ್ದೀರಿ. ಇನ್ನು ಕೆಲವರು ಮಲ್ಟಿ ಮಿಲಿನಿಯರುಗಳಾಗುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ ; ಬೆಂಗಳೂರಿನಲ್ಲಿ ಕೆಲವರು ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಂಡು ದೊಡ್ಡ ದೊಡ್ಡ ಕಾರುಗಳಲ್ಲಿ ಸುಖಲೋಲರಾಗಿ ಓಡಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ನಿಜವಾಗಿಯೂ ಶ್ರದ್ಧೆಯಿಂದ ಕೆಲಸ ಮಾಡತಕ್ಕವನು ಬಡವನಾಗಿದ್ದರೆ ಅವನು ಕಡುಬಡವನೇ ಆಗಿದ್ದಾನೆ. ಬಡವನಿಗೆ ರಾಜಕೀಯದಲ್ಲಿಯೂ ರಕ್ಷಣೆಯಿಲ್ಲ, ವ್ಯಾಪಾರದಲ್ಲಿಯೂ ರಕ್ಷಣೆಯಿಲ್ಲ. ಯಾವ ವೃತ್ತಿಯಲ್ಲೂ ಬಡವನಿಗೆ ರಕ್ಷಣೆಯಿಲ್ಲ. ನಿಷ್ಠಾವಂತರಾಗಿ ಕೆಲಸ ಮಾಡತಕ್ಕ ವ್ಯಕ್ತಿಗಳಿಗೆ ಈ ದೇಶದಲ್ಲಿ ಜಾಗವಿಲ್ಲ. ಮೂರು ಯೋಜನೆಗಳ ಫಲತಾಂಶದಿಂದ ಇಂಥಾ ಒಂದು ಉತ್ತಮ ಪರಿಸ್ಥಿತಿ ಕಾಣುತ್ತಿದೆ.

ಇನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇನ್ನೊಂದು ಇಲಾಖೆಯ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಹೇಳುವುದಾದರೆ, ನಮ್ಮ ದೇಶದಲ್ಲಿ ಯಾವ ಇಲಾಖೆಯಿಂದ ನೀತಿ ಮತ್ತು ವಿದ್ಯೆ ಉತ್ಪತ್ತಿಯಾಗಬೇಕೋ ಆ ವಿದ್ಯಾ ಇಲಾಖೆಯಲ್ಲಿ ಒಂದು ಸರಿಯಾದ ನೀತಿಯಿಲ್ಲ, ಒಂದು ನಿರೂಪಣೆಯಿಲ್ಲ. ನಮ್ಮ ವಿದ್ಯಾ ಖಾತೆಯ ಮಂತ್ರಿಗಳು ಹೇಳುತ್ತಾರೆ, ಸರ್ಕಾರಿ ಕಾಲೇಜುಗಳಲ್ಲಿ ಮತ್ತು ಸರ್ಕಾರದ ವಶದಲ್ಲಿರತಕ್ಕ ವಿದ್ಯಾಶಾಲೆಗಳಲ್ಲಿ ಫಲತಾಂಶ ಚೆನ್ನಾಗಿಲ್ಲ. ಆದ್ದರಿಂದ ಅವುಗಳನ್ನು ಯಾರಾದರೂ ಪ್ರೈವೇಟ್ ಮ್ಯಾನೇಜ್‌ಮೆಂಟಿಗೆ ವಹಿಸಿ ಕೊಡೋಣ ಎಂದು ಹೇಳುತ್ತಿದ್ದಾರೆ. ಮಾನ್ಯ ವಿದ್ಯಾ ಮಂತ್ರಿಗಳು ಸರ್ಕಾರಿ ಶಾಲೆಗಳಲ್ಲಿ ಫಲತಾಂಶ ಚೆನ್ನಾಗಿಲ್ಲ ಎಂದು ತಮ್ಮ ತಪ್ಪನ್ನು ತಾವೇ ಒಪ್ಪಿಕೊಂಡ ಮೇಲೆಯೂ ಕೂಡ ಅವರು ಇನ್ನೂ ಅಧಿಕಾರದಲ್ಲಿದ್ದಾರೆ. ಅವರು ತಮ್ಮ ಕಾಲದಲ್ಲಿ ವಿದ್ಯಾಭ್ಯಾಸ ಖಾತೆಯಲ್ಲಿ ಇಂಥಾ ಒಂದು ಅವ್ಯವಸ್ಥೆ ಉಂಟಾಯಿತಲ್ಲಾ ಎಂದು ತಮ್ಮ ಮಂತ್ರಿಪದವಿಗೆ ರಾಜೀನಾಮೆ ಕೊಡಬೇಕಾಗಿತ್ತು ಎಂದು ನಾನು ಹೇಳುತ್ತೇನೆ. ಮೊನ್ನೆ ತಾನೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ತಮಗೆ ದಿವಂಗತ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿಗಳೊಂದಿಗೆ ಸುಮಾರು 30 ವರ್ಷಗಳಿಂದ ಸ್ನೇಹ ಇತ್ತು ಎಂದು. ಹಾಗಿದ್ದ ಮೇಲೆ ಅವರ 30 ವರ್ಷಗಳ ಸ್ನೇಹದಲ್ಲಿ ಅವರು ಮಾಡಿರತಕ್ಕ ಕೃತಿಗಳಲ್ಲಿ ತಾವು ಒಂದನ್ನಾದರೂ ಅನುಕರಣೆ ಮಾಡಿದ್ದೀರಾ ಎಂದು ಕೇಳುತ್ತೇನೆ. ಹಿಂದೆ ಲಾಲ್ ಬಹದ್ದೂರ್ ಶಾಸ್ತ್ರಿಗಳು ಕೇಂದ್ರದಲ್ಲಿ ರೈಲ್ವೆ ಮಂತ್ರಿಗಳಾಗಿದ್ದಾಗ್ಯೆ ನಡೆದಂತಹ ಒಂದು ಸಣ್ಣ ತಪ್ಪಿಗಾಗಿ ಅವರು ತಮ್ಮ ಮಂತ್ರಿಪದವಿಗೆ ರಾಜಿನಾಮೆಯನ್ನು ಕೊಟ್ಟರು. ತಮ್ಮ ಮಂತ್ರಿ ಮಂಡಲದಲ್ಲಿರತಕ್ಕ ಕೆಲವು ಮಂತ್ರಿಗಳು ತಮ್ಮ ಇಲಾಖೆಗಳಲ್ಲಿ ನಡೆದಂತಹ ತಪ್ಪುಗಳಿಗೆ ತಾವು ಜವಾಬ್ದಾರರಾದರೂ ಕೂಡ ಅವರು ಅಧಿಕಾರದಲ್ಲಿ ಬಿಗಿಯಾಗಿ ಅಂಟಿಕೊಂಡಿದ್ದಾರೆ. ಇಂಥಾ ಒಂದು ವಿಚಿತ್ರವಾದ ಪ್ರಜಾಪ್ರಭುತ್ವ ನಮ್ಮ ದೇಶದಲ್ಲಿದೆ. ವಿದ್ಯಾಶಾಲೆಗಳಲ್ಲಿ ಖಾಸಗೀ ಶಾಲೆಗಳು ನಮ್ಮ ದೇಶದಲ್ಲಿ ಜಾಸ್ತಿಯಾಗುತ್ತಾ ಇವೆ. ವಿದ್ಯಾಭ್ಯಾಸವನ್ನು ಮಾರಾಟ ಮಾಡತಕ್ಕ ವಿದ್ಯಾ ಸಂಸ್ಥೆಗಳು ಈ ದೇಶದಲ್ಲಿ ಹುಟ್ಟಿ ಬೆಳೆಯುತ್ತಿವೆ. ಖಾಸಗೀ ವಿದ್ಯಾ ಶಾಲೆಗಳಲ್ಲಿ ಪಾಠವನ್ನು ಚೆನ್ನಾಗಿ ಹೇಳಿಕೊಡುತ್ತಾರೆ ಎನ್ನುವ ನೆಪದಿಂದ ನಮ್ಮ ಮಕ್ಕಳನು ಸರ್ಕಾರಿ ಶಾಲೆಗಳನ್ನು ಬಿಟ್ಟು ಖಾಸಗೀ ಶಾಲೆಗಳಿಗೆ ಕಳುಹಿಸತಕ್ಕ ಪದ್ಧತಿ ನಮ್ಮಲ್ಲಿ ಬಂದಿದೆ. ಇದನ್ನು ಕಂಡು ಖಾಸಗೀ ಶಾಲೆಗಳನ್ನು ನಡೆಸತಕ್ಕವರು ಅದನ್ನು ಒಂದು ವ್ಯಾಪಾರೋದ್ಯಮವಾಗಿ ಮಾಡಿಕೊಂಡು ಮಕ್ಕಳಿಗೆ ಫೀಜನ್ನು ಜಾಸ್ತಿ ಮಾಡಿದ್ದಾರೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಕ್ಕಳ ಮೇಲ್ಮೈಗಾಗಿ ತಂದೆ ತಾಯಿಗಳು ಸಾಲವನ್ನು ಮಾಡಿ ಓದಿಸಬೇಕಾಗಿದೆ. ಇದರಿಂದ ಆ ಶಾಲೆಗಳವರು ಮಕ್ಕಳಿಗೆ ಎಷ್ಟು ಫೀಜನ್ನು ಹಾಕಿದರೂ ಕೂಡ ಅದನ್ನು ಅವರು ಕೊಡುತ್ತಿದ್ದಾರೆ.

ಇವತ್ತು ಖಾಸಗಿ ಶಾಲೆಗಳಿಗೂ ಮತ್ತು ಸರ್ಕಾರಿ ಶಾಲೆಗಳಿಗೂ ಇರತಕ್ಕ ಅಂತರ ಎಷ್ಟು ಇದೆ!

ಕೆಲವು ಕಡೆ ತಿಂಗಳಿಗೆ 10—20 ರೂಪಾಯಿ ಸಂಬಳ ಮಾಡುವ ಶಾಲೆಗಳು ಬೆಂಗಳೂರು,
ಮೈಸೂರು ಮತ್ತು ಇನ್ನೂ ಅನೇಕ ದೊಡ್ಡ ದೊಡ್ಡ ನಗರಗಳಲ್ಲಿವೆ. ಈ ರೀತಿಯಾಗಿ ವಿದ್ಯಾ
ಭ್ಯಾಸವು ಒಂದು ವ್ಯಾಪಾರದ ದೃಷ್ಟಿಯಲ್ಲಿ ನಡೆದುಕೊಂಡು ಹೋಗುತ್ತಾ ಇದೆ. ಇವತ್ತು ದೇಶದ
ಪ್ರಪ್ರಥಮವಾದ ಕರ್ತವ್ಯವೆಂದರೆ ರಾಜ್ಯಾಂಗದಲ್ಲಿ ವಿಧಿತವಾಗಿರುವಂತೆ 14 ವರ್ಷದವರೆಗಿನ ಮಕ್ಕ
ಳಿಗೆ ಉಚಿತ ಶಿಕ್ಷಣ ಕೊಡತಕ್ಕದ್ದು. ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಗುರೆಡ್ಡಿಯವರು
ಹೇಳಿದ ಹಾಗೆ ಇಂದು ವಿದ್ಯಾ ಶಾಲೆಗಳು ಒಂದು ಛತ್ರದಂತೆ ಇವೆ. ಅಲ್ಲಿ ಯಾವ ಒಂದು ದಿಕ್ಕು
ಇಲ್ಲದೆ, ಯಾವ ಒಂದು ಶಿಸ್ತು ಇಲ್ಲದೆ, ಹಳ್ಳಿಯ ಮಕ್ಕಳು ಅಂತಹ ಶಾಲೆಗಳಿಗೆ ಹೋಗಿ ವಿದ್ಯೆ
ಕಲಿಯಬೇಕಾಗಿದೆ. ಒಳ್ಳೆಯ ವಿದ್ಯೆಯನ್ನು ಮಕ್ಕಳಿಗೆ ಕೊಟ್ಟರೆ ಮುಂದೆ ಒಳ್ಳೆಯ ಜೀವನವನ್ನು
ಹೊಂದಬಹುದು. ನಮ್ಮ ಮಕ್ಕಳಿಗೆ ಇಂತಹ ಪೈಪೋಟಿ ನಡೆಸತಕ್ಕ ಏನೊಂದು ಶಿಸ್ತಿಲ್ಲದ ಶಾಲೆ
ಗಳಲ್ಲಿ ವಿದ್ಯಾಭ್ಯಾಸ ಕೊಟ್ಟರೆ ನಮ್ಮ ಮಕ್ಕಳ ಮುಂದಿನ ಗತಿಯೇನು? ಇವತ್ತು ಶಾಲೆಗಳಿಗೆ
ಬೇಕಾದ ಕಟ್ಟಡಗಳಿಲ್ಲ, ತರಬೇತಿ ಪಡೆದಂತಹ ಉಪಾಧ್ಯಾಯರುಗಳಿಲ್ಲ, ಹಿಂದಿ ಮಾಸ್ತರುಗಳಿಲ್ಲ. ಈ
ರೀತಿ ಉಪಾಧ್ಯಾಯರುಗಳಿಲ್ಲದೆ, ಸರಿಯಾದ ಶಾಲಾ ಕಟ್ಟಡಗಳಿಲ್ಲದೆ ವಿದ್ಯಾಭ್ಯಾಸವನ್ನು ಕೊಡ
ತಕ್ಕಂತಹ ಪ್ರಸಂಗ ನಮ್ಮ ದೇಶಕ್ಕೆ ಬಂದಿದೆ. ಇವತ್ತು ನೀವು ಬಿಚ್ಚು ಮನಸ್ಸಿನಿಂದ ಮೈಸೂರು
ದೇಶದಲ್ಲಿ ಹೈಸ್ಕೂಲುಗಳ ಸಂಖ್ಯೆಯನ್ನು 1,151ರಿಂದ 1,309ಕ್ಕೆ ಹೆಚ್ಚಿಸಿದ್ದೇವೆಂದು ಭುಜ ತಟ್ಟಿ
ಹೇಳುತ್ತಿದ್ದೀರಿ. ಆದರೆ ಬರೀ ಸಂಖ್ಯೆಯಿಂದ ಯಾರೂ ತೃಪ್ತಿ ಪಡಬೇಕಾದುದು ಏನೂ ಇಲ್ಲ. ಇವತ್ತು
ನಮಗೆ ಬೇಕಾಗಿರತಕ್ಕದ್ದು ಒಳ್ಳೆಯ ತರದ ವಿದ್ಯಾಭ್ಯಾಸ. ಆ ವಿದ್ಯೆಯನ್ನು ಕಲಿಸುವುದಕ್ಕೋಸ್ಕರ
ವಿದ್ಯಾವಂತರಾದ, ತರಬೇತಿ ಪಡೆದಂತಹ ಉಪಾಧ್ಯಾಯರುಗಳನ್ನು, ಎಷ್ಟೇ ಹಣ ಖರ್ಚಾದರೂ,
ತಯಾರು ಮಾಡಲೇಬೇಕು. ಮತ್ತು ವಿದ್ಯಾ ಇಲಾಖೆಯಲ್ಲಿ ರಾಜಕೀಯ ಸೋಂಕು ಹೋಗಬಾರದು.
ವಿದ್ಯಾ ಇಲಾಖೆಗಳಲ್ಲಿ ಅಧಿಕಾರಿಗಳನ್ನು ನೇಮಕ ಮಾಡುವ ಕಾಲದಲ್ಲಿ ಅನೇಕ ತರದ ಒತ್ತಡಗಳಿಗೆ
ಕಾರಣವಾಗಿವೆ. ಒಳ್ಳೆಯ ಮತ್ತು ನಿಷ್ಠಾವಂತರಾಗಿ ಕೆಲಸ ಮಾಡುವ ಅಧಿಕಾರಿಗಳಿಗೆ ನಿಮ್ಮಲ್ಲಿ
ಪುರಸ್ಕಾರವಿಲ್ಲ. ಯಾವನೇ ಆಗಲೀ, ಒಳ್ಳೆಯ ನಿಷ್ಠೆಯಿಂದ ಕೆಲಸ ಮಾಡುವಂಥವನಿಗೆ ಬೆನ್ನು ತಟ್ಟಿ
ಪ್ರೋತ್ಸಾಹ ಕೊಟ್ಟರೆ ಶಾಲೆಗಳಲ್ಲಿ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ದೊರೆಯುತ್ತದೆ. ವಿದ್ಯಾ
ಇಲಾಖೆಗಳಲ್ಲೂ ಭೇದ ಭಾವ ಬಂದರೆ ವಿದ್ಯೆಗೆ ಒಂದು ಏಟು ಕೊಟ್ಟಂತಾಗುತ್ತದೆ. ಇಂತಹ
ವಿದ್ಯಾ ಇಲಾಖೆಗಳಲ್ಲಿ ರಾಜಕೀಯ ಬರಬಾರದು, ಜಾತೀಯತೆ ಬರಬಾರದು, ಮತ್ತು ಇಲ್ಲಿ
ಯಾವ ದಾಕ್ಷಿಣ್ಯಕ್ಕೂ ಆಸ್ಪದವಿಲ್ಲದೆ ಕೆಲಸ ಮಾಡಿದರೆ, ಆಗ ಒಳ್ಳೆಯ ವಿದ್ಯಾಭ್ಯಾಸ ಬರುತ್ತದೆಂದು
ನಾನು ಇವತ್ತು ಇಲ್ಲಿ ಬಿಚ್ಚು ಮನಸ್ಸಿನಿಂದ ಹೇಳಬೇಕಾಗುತ್ತದೆ.

ಇನ್ನು ವಿಶ್ವವಿದ್ಯಾನಿಲಯದ ವಿಷಯ ಹೇಳಬೇಕಾಗುತ್ತದೆ. ವಿಶ್ವವಿದ್ಯಾನಿಲಯಕ್ಕೆ ಮೈಸೂ
ರಿನ ಒಂದು ಡಿಮ್ಯಾಂಡ್ ಇಲ್ಲದೆ, ಅದನ್ನು ನಿರ್ಲಕ್ಷ್ಯ ಮಾಡಿ ಹೊರಗಡೆಯಿಂದ, ಮೈಸೂರು ವಿಶ್ವ
ವಿದ್ಯಾನಿಲಯಕ್ಕೂ, ಬೆಂಗಳೂರು ವಿಶ್ವವಿದ್ಯಾನಿಲಯಕ್ಕೂ ವೈಸ್ ಛಾನ್ಸಲರನ್ನು ತಂದು ನೇಮಕ
ಮಾಡಿದರು. ನಮ್ಮ ದೇಶದಲ್ಲಿರುವ ವಿದ್ಯಾ ಪ್ರವೀಣರು ಹೊರದೇಶಕ್ಕೆ ಹೋಗಿ ಪ್ರವೀಣರಾಗಿದ್ದಾರೆ.
ಅವರಿಗೆ ಯುನೈಟೆಡ್ ನೇಶನ್ಸ್‌ನಂತಹ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಪುರಸ್ಕಾರ ಕೊಟ್ಟಿದ್ದಾರೆ.
ಮೈಸೂರು ದೇಶದ ಜನರಿಗೆ ದೊಡ್ಡ ದೊಡ್ಡ ಹುದ್ದೆಗಳನ್ನು ಕೊಟ್ಟು ಮರ್ಯಾದೆ ಮಾಡಿದ್ದಾರೆ.
ಆದರೆ ಮೈಸೂರಿನಲ್ಲಿ, ಇಲ್ಲಿಯ ಜನರಿಗೇ ಅಂತಹ ಮರ್ಯಾದೆ ಇಲ್ಲ. ಬಹುಶಃ ನಮ್ಮ ದೃಷ್ಟಿಯ
ಹಿಂದಿರತಕ್ಕ ಮನೋಭಾವ ತಪ್ಪಬೇಕು. ಇಂತಹ ಮನೋಭಾವದಿಂದ ವಿದ್ಯೆಗೆ ದೊಡ್ಡ ಧಕ್ಕೆ ಬರು
ತ್ತದೆ. ದೇಶದಲ್ಲಿ ಭೇದ ಭಾವ ದೃಷ್ಟಿಯಿಲ್ಲದೆ ವಿಶಾಲ ಮನೋಭಾವದಿಂದ ವಿದ್ಯೆಯ ಮೇಲ್ಮೆಗೋ
ಸ್ಕರ, ಸರ್ಕಾರದವರು ಯಾವ ವ್ಯಕ್ತಿಯೇ ಆಗಲಿ, ಯಾವ ಜಾತಿಯವನೇ ಆಗಲಿ, ಅವನಿಗೆ ಪುರ
ಸ್ಕಾರ ಕೊಟ್ಟು ಮೈಸೂರಿನಲ್ಲಿರತಕ್ಕ ವಿದ್ಯಾವಂತರಿಗೆ ಬೆಲೆ ಕೊಟ್ಟರೆ, ಅಂದಿಗೆ ಖಂಡಿತವಾಗಿಯೂ
ಮೈಸೂರು ದೇಶವು ವಿದ್ಯೆಯಲ್ಲಿ, ಇಂಡಿಯಾ ದೇಶದ ಎಲ್ಲಾ ವಿದ್ಯಾ ಸಂಸ್ಥೆಗಳಿಗೂ ಮಾದರಿಯಾಗುವ
ಅವಕಾಶವಿದೆ ಎಂದು ಈ ಸಭೆಯಲ್ಲಿ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಸಭಾಪತಿಯವರೇ, ಇವತ್ತಿನ ದಿವಸ ನಮ್ಮ ದೇಶದಲ್ಲಿ ಯಾವುದೇ ಮೇಲ್ಮೆಯ ಕೆಲಸ, ಅಭಿ
ವೃದ್ಧಿಯ ಕೆಲಸವಾಗಲೀ ಆಗಬೇಕಾದರೆ ಅದು ಪಂಚಾಯತ್ ರಾಜ್ಯಗಳ ಮುಖಾಂತರ ಆಗಬೇಕು.
ಪಂಚಾಯತ್ ರಾಜ್ಯ ಎಂದರೆ, ತಾಲ್ಲೂಕು ಬೋರ್ಡು, ಜಿಲ್ಲಾ ಪರಿಷತ್ ಮುಖಾಂತರವಾಗಿ ಆ ಕೆಲಸ
ಆಗಬೇಕು. ಇವತ್ತು ಪಂಚಾಯ್ತಿ ರಾಜ್ಯಗಳ ಪರಿಸ್ಥಿತಿ ಎಂತಹ ಪೇಚಾಟಕ್ಕೆ ಬಂದಿದೆ ಎಂದು
ತಮಗೆ ಗೊತ್ತಿದೆ. ತಾಲ್ಲೂಕು ಬೋರ್ಡು ಮತ್ತು ಪಂಚಾಯ್ತಿಗಳಿಗೆ ಚುನಾವಣೆ ನಡೆಸಿ ಏಳು
ವರ್ಷಗಳಾಯ್ತು. ಯಾವ ಪಂಚಾಯ್ತಿಗಳಲ್ಲಿ ಮತ್ತು ತಾಲ್ಲೂಕು ಬೋರ್ಡುಗಳಲ್ಲಿ ಸರ್ಕಾರ
ದವರು ನಾಲ್ಕು ವರ್ಷಕ್ಕೋಸ್ಕರ ಚುನಾವಣೆ ಮಾಡಿದರೋ ಇವತ್ತು ಆ ಚುನಾವಣೆ ಮಾಡದೆ 7
ವರ್ಷವಾಗಿದೆ. ಇನ್ನೂ ಕೂಡ ಚುನಾವಣೆ ಮಾಡತಕ್ಕ ಸಾಹಸ ಮಾಡುತ್ತಾ ಇಲ್ಲ. ಮೊದಲು
ಕೊಂಡಜ್ಜಿ ಬಸಪ್ಪನವರ ರಿಪೋರ್ಟು ನೆಪ ಹೇಳಿ ಚುನಾವಣೆ ಮುಂದಕ್ಕೆ ಹಾಕಿದರು. ಆ ಮೇಲೆ

(ಶ್ರೀ ಎಸ್. ಶಿವಪ್ಪ)

ಪಂಚಾಯ್ತಿ ಮಸೂದೆಯನ್ನು ಸಭೆಯ ಮುಂದಿಟ್ಟು, ಅದರಿಂದ ಒಂದೆರಡು ವರ್ಷ ಮುಂದಕ್ಕೆ ಹಾಕಿದರು. ಮೂರನೆಯದಾಗಿ ಸರ್ಕಾರಕ್ಕೆ ಯುದ್ಧದಿಂದ ಎಮರ್ಜೆನ್ಸಿ ಬಂದು ಪ್ರಜಾಪ್ರಭುತ್ವಕ್ಕೆ ಎಲ್ಲಿಯೂ ಇಲ್ಲದ ಧಕ್ಕೆ ಬಂದು ಬಿಟ್ಟಿತು. ಆದ್ದರಿಂದ ಪಂಚಾಯ್ತಿ ಮತ್ತು ತಾಲ್ಲೂಕು ಬೋರ್ಡು ಚುನಾವಣೆಯನ್ನು ಮುಂದಕ್ಕೆ ಹಾಕಲಾಯ್ತು ಎಂದು ಹೇಳಿದ್ದಾರೆ. ಏನು ಸ್ವಾಮಿ, ಇದೂ ಒಂದು ಪ್ರಜಾಪ್ರಭುತ್ವದ ವೈಖರಿಯೇ? ಇವತ್ತು ಪ್ರಜಾಪ್ರಭುತ್ವವಾದಿಗಳು ಪ್ರಪಂಚದಲ್ಲಿ ಭಾರತ ದೇಶದ ಪ್ರಜಾಪ್ರಭುತ್ವವನ್ನು ಎತ್ತಿ ತೋರಿಸುತ್ತಿದ್ದೇವೆ. ಚೀನಾ ದೇಶದ ಡಿಕ್ಟೇಟರಶಿಪನ್ನು ಎದುರಿಸಿ ಹೋರಾಟ ಮಾಡುತ್ತಿದ್ದೇವೆ. ಹಿಮಾಲಯದ ಆ ಕಡೆ ಇರುವುದು ಕಮ್ಯುನಿಸಂ, ಈ ಕಡೆ ಡೆಮೋಕ್ರಸಿ. ಆದರೆ ಮೈಸೂರು ದೇಶದಲ್ಲಿರುವುದು ವಿಚಿತ್ರವಾದ ಡೆಮೋಕ್ರೆಸಿ. ನಿಮಗೆ ಚುನಾವಣೆಗಳನ್ನು ಮಾಡತಕ್ಕ ಭಯವಿದ್ದರೆ, ಚುನಾವಣೆಗಳಿಲ್ಲ ಎಂದು ಹೇಳಿ ಜನರ ಮೆಚ್ಚುಗೆಯನ್ನು ತೆಗೆದುಕೊಳ್ಳಿ, ಭಯವಿದ್ದರೆ ಹೇಳಿ, ಮತ್ತು ಚುನಾವಣೆ ಬೇಡ ಎಂದು ಹೇಳಿ, ತಾಲ್ಲೂಕು ಬೋರ್ಡನ್ನು ತಾವು ದಯವಿಟ್ಟು ರದ್ದು ಪಡಿಸಿ. ನಾಲ್ಕು ವರ್ಷ ಇರಬೇಕಾದವರು ಏಳು ವರ್ಷ ಇರಲು ಏನು ಹಕ್ಕು ಇದೆ? ಈ ಒಂದು ಅನ್ಯಾಯದ ಪರಂಪರೆಯಿಂದ ದೇಶದಲ್ಲಿ ಇಂದು ಪ್ರಜಾಪ್ರಭುತ್ವದ ಕೊಲೆಯಾಗುತ್ತಾ ಇದೆ. What is the Constitutional right the Taluk Board has got I am asking the Government? ನೀವು ಏನು ಬೇಕಾದರೂ ಮಾಡಿ ಸಾಹಸಿ ಎನಿಸಿಕೊಳ್ಳಬೇಕು ಎಂದು ಸತ್ತು ಹೋದ ಸಂಸ್ಥೆಗಳಿಗೆ ಜೀವ ಕೊಟ್ಟುಕೊಂಡಿರಿ. ಇದಕ್ಕೆ ಎಂಥ ಮರ್ಯಾದೆ ಬರುತ್ತದೆ ಎಂದು ನಾನು ಇವತ್ತು ಸಭಾಪತಿಗಳನ್ನು ಕೇಳುತ್ತೇನೆ. ಇಂತಹ ತಾಲ್ಲೂಕು ಬೋರ್ಡಿನ ಸಹಾಯದಿಂದ ನಮಗೆ ಇವತ್ತಿನ ದಿವಸ ಆಹಾರದ ಉತ್ಪತ್ತಿಯಾಗಬೇಕಾಗಿದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳೂ ಆಗಬೇಕಾಗಿದೆ. ಪಂಚಾಯ್ತಿ ರಾಜ್ಯದ ತತ್ವಕ್ಕೆ ಅನುಗುಣವಾಗಿ ತಾಲ್ಲೂಕು ಬೋರ್ಡು ಮುಖಾಂತರ ಇವೆಲ್ಲಾ ಆಗಬೇಕೆಂದು ನಂಬಿ ಹಳೆಯ ಓಬರಾಯನ ಕಾಲದ ಕಾಂಗ್ರೆಸ್ಸಿಗೆ ಬಹುಮತ ಇದೆ ಎಂಬ ಒಂದೇ ದೃಷ್ಟಿಯನ್ನು ಇಟ್ಟುಕೊಂಡು ತಾಲ್ಲೂಕು ಬೋರ್ಡು ಚುನಾವಣೆಯನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದೀರಿ. ಇದರಿಂದ ಏನು ಒಂದು ತತ್ವ ಪಾಲಿಸಿದಂತಾಗುತ್ತದೆ ಎಂದು ನಾನು ಕೇಳುತ್ತೇನೆ. ಸರ್ಕಾರದವರು ಈಗಲಾದರೂ ಕೂಡಾ ಮನಸ್ಸು ಮಾಡಿ. ಏನು ಎಮರ್ಜೆನ್ಸಿ ಎಂದು ಹೇಳುತ್ತಿದ್ದೀರಿ, ಅದು ಹೋಯ್ತು. ರಾಜ್ಯಪಾಲರು ತಮ್ಮ ಭಾಷಣದಲ್ಲೂ ಕೂಡಾ ತಾಷ್ಕೆಂಟಿನ ಸಂಧಾನದಿಂದ ದೇಶದಲ್ಲಿ ಒಂದು normalcy ಎಂದರೆ ಸಾಧಾರಣ ಪರಿಸ್ಥಿತಿ ಉಂಟಾಗಿದೆ ಎಂದು ಹೇಳಿದ್ದಾರೆ. ಆದ್ದರಿಂದ ತಾವು ದಯವಿಟ್ಟು ತಾಲ್ಲೂಕು ಬೋರ್ಡುಗಳಿಗೆ ಬರುವ ಏಪ್ರಿಲ್ ತಿಂಗಳಿನೊಳಗಾಗಿ ಚುನಾವಣೆ ಮಾಡುತ್ತೇವೆಂದು ಘೋಷಣೆ ಹೊರಡಿಸಿದರೆ ನಿಮಗೆ ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ ಎಂದು ಹೇಳಬಹುದು. ಚುನಾವಣೆಗಳ ಫಲಿತಾಂಶವು ಏನೇ ಇರಲಿ, ಅದನ್ನು ಎದುರಿಸುವುದಕ್ಕೆ ಸಿದ್ಧರಾಗಬೇಕು; ಮತ್ತು ಚುನಾವಣೆ ನಡೆಸಿಯೇ ತೀರಬೇಕು. ಇಲ್ಲವಾದರೆ, ಈ ತಾಲೂಕು ಬೋರ್ಡುಗಳು ಏನಿವೆ, ಅದನ್ನು ಡಿಸ್‌ಮಿಸ್ ಮಾಡಬೇಕು. ಇಲ್ಲವಾದರೆ ಅಧಿಕಾರ ತ್ಯಾಜ್ಯ ಮಾಡಿ ಬೇರೆ ಯಾರಿಗಾದರೂ ವಹಿಸಿಕೊಡಿ. ಕೆಲಸವನ್ನು ನಾವು ಪ್ರಜಾಪ್ರಭುತ್ವ ದೃಷ್ಟಿಯಿಂದ ಮಾಡದೆ ಹೋದರೆ ಖಂಡಿತವಾಗಿಯೂ, ಈ ಪಂಚಾಯ್ತಿ ರಾಜ್ಯದ ಒಂದು ಅಮೂಲ್ಯವಾದ ಧ್ಯೇಯ ಏನಿದೆ, ಅದಕ್ಕೆ ಬೆಲೆ ಕೊಟ್ಟಂತಾಗುವುದಿಲ್ಲವೆಂದು ನಾನು ಇಲ್ಲಿ ಒತ್ತಿ ಹೇಳಬೇಕಾಗುತ್ತದೆ.

ಇನ್ನು ಇಲ್ಲಿ 'ಲಾ ಅಂಡ್ ಆರ್ಡರ್' ವಿಚಾರ ಹೇಳುತ್ತೇನೆ. ನಮ್ಮ ದೇಶದಲ್ಲಿ ಪರಿಸ್ಥಿತಿ ಏನು ಇದೆ ಎಂಬುದನ್ನು ಹೇಳಿದ್ದಾರೆ. ಆ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಏನಿದೆ, ಅದು ಕೈಗೆ ಒಳ್ಳೆಯ ಆಯುಧವಾಗಿ ಬಂದಿದೆ. ನಮ್ಮ ದೇಶದಲ್ಲಿ ಈ ಡಿ. ಐ. ಆರ್.ನ್ನು ನಮ್ಮ ಶತ್ರುಗಳ ಮೇಲೆ, ಶತ್ರುಗಳಿಗೆ ಬೆಂಬಲ ಕೊಡತಕ್ಕಂತಹ ಯಾವ ವ್ಯಕ್ತಿಯ ಮೇಲೆ ಅಥವಾ ಅಂತಹ ಪ್ರಬಲ ಶಕ್ತಿಗಳ ಮೇಲೆ ಉಪಯೋಗಿಸುವ ಬದಲು ಇವತ್ತಿನ ದಿವಸ ಈ ಡಿ. ಐ. ಆರ್. ಯಾವ ರೀತಿ ಉಪಯೋಗಿಸುತ್ತಿದ್ದಾರೆ ಎಂಬುದು ಗೊತ್ತಾಗುತ್ತದೆ. ಇವತ್ತು ರಾಷ್ಟ್ರದ ಶತ್ರುಗಳ ಮೇಲೆ ಈ ಡಿ. ಐ. ಆರ್‌ನ್ನು ಉಪಯೋಗಿಸಿದರೆ ನಾವು ಸೈ ಎನ್ನುತ್ತೇವೆ. ಇದು ಆಡಳಿತ ನಡೆಸುವ ನಿಮ್ಮೆಲ್ಲರತಕ್ಕ ಆಯುಧ. ನಿಮ್ಮ ರಾಜಕೀಯ ಶತ್ರುಗಳೇ ಆಗಲೀ, ಯಾರೇ ಆದರೂ, ಅವರ ಮೇಲೆ ಇದನ್ನು ಉಪಯೋಗಿಸಿ ಅದರ ಪವಿತ್ರವಾದ ಏನು ಒಂದು ತತ್ವ ಇದೆ, ಅದನ್ನು ನಾಶ ಮಾಡಿದಿರಿ. ಇವತ್ತು ಈ ಡಿ. ಐ ಆರ್‌ನ್ನು ಯಾವ ರೀತಿ ಉಪಯೋಗಿಸಿದ್ದಾರೆ ಎಂಬುದಕ್ಕೆ ಅನೇಕ ನಿದರ್ಶನಗಳಿವೆ, ಈಗಾಗಲೇ ಹೈಕೋರ್ಟಿನವರು ಎಷ್ಟೋ ತೀರ್ಮಾನ ಕೊಟ್ಟು ಕೆಲವರನ್ನು ಬಿಡುಗಡೆ ಮಾಡಿದ್ದಾರೆ. ಇವತ್ತು

ನಮ್ಮ ದೇಶದಲ್ಲಿ ಪರಿಸ್ಥಿತಿಯು ಒಂದು ಸಾದಾ ಸ್ಥಿತಿಗೆ ಇಳಿದಿದೆ ಎಂಬ ಭಾವನೆ ಮಾಡಿಕೊಂಡಿರುವುದರಿಂದ, ಸರ್ಕಾರದವರು ಈಗಲಾದರೂ ಕೂಡ ಡಿ. ಐ. ಆರ್‌ನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ದೇಶದಲ್ಲಿ ಪ್ರಜಾಪ್ರಭುತ್ವ ಬೆಳೆಯಬೇಕಾದರೆ ಬೆದರಿಕೆ ಹೆದರಿಕೆ ಮನೋಭಾವ ಹೋಗಬೇಕು. ನಮ್ಮ ಮಂತ್ರಿಗಳು ಜ್ವಲಂತವಾದ ಅನುಭವಿಸಿದ್ದಾರೆ. ಅವರಿಗೆ ವಿಷಯ ಗೊತ್ತಿದೆ. ಒಂದು ಹೇಳಿದರೆ ಅಧಿಕಾರಿಗಳು ನಾಲ್ಕು ಮಾಡುತ್ತಾರೆ. ಅಧಿಕಾರಿಗಳು ಅನೇಕ ಸಲ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. ಜಾರಿಯಲ್ಲಿರುವ ಡಿ. ಐ. ಆರ್. ಕಾನೂನು ಸರಿಪಡಿಸಬೇಕು. ಇಲ್ಲವೆ ವಾಪಸ್ ತೆಗೆದುಕೊಳ್ಳಬೇಕು, ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ. ದುರುಪಯೋಗ ಪಡಿಸಿಕೊಳ್ಳುವುದು ತಡೆಗಟ್ಟಬೇಕು. ಇದನ್ನು ದೇಶವನ್ನು ಕಾಪಾಡುವುದಕ್ಕಾಗಿ ಉಪಯೋಗಿಸಬೇಕು ಇಲ್ಲದಿದ್ದರೆ ಪ್ರಜಾಪ್ರಭುತ್ವಕ್ಕೆ ತೊಂದರೆಯಾಗುತ್ತದೆ. ಆದುದರಿಂದ ಈ ಕಾನೂನನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

4-30 P.M.

ಕೊನೆಯದಾಗಿ ಒಂದು ವಿಷಯ ಪ್ರಸ್ತಾಪ ಮಾಡುತ್ತೇನೆ. ಹೋದ ಸಾರಿ ರಾಜ್ಯಪಾಲರವರು ಭಾಷಣ ಮಾಡಿದ ಮೇಲೆ ಈ ಸಲ ಭಾಷಣ ಮಾಡುವವರೆಗೆ ಈ ಮಧ್ಯಂತರ ಅವಧಿಯಲ್ಲಿ ಅನೇಕ ಬದಲಾವಣೆಗಳಾಗಿವೆ. ಅನೇಕ ಸಚಿವರ ಖಾತೆಗಳು ಬದಲಾವಣೆಯಾಗಿವೆ. ಒಬ್ಬ ಸಚಿವರು ತಮ್ಮ ಪದವಿಯನ್ನು ಕೂಡ ತ್ಯಾಗ ಮಾಡಿ ರಾಜಿನಾಮೆ ಕೊಟ್ಟು ಹೋಗಿದ್ದಾರೆ. ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಯಾವುದೇ ಮಂತ್ರಿ ರಾಜಿನಾಮೆ ಕೊಟ್ಟ ಮೇಲೆ ಈ ಸಭೆಯಲ್ಲಿ ತಮ್ಮ ನಿಲುವನ್ನು ಸಮರ್ಥನೆ ಮಾಡಿ ಒಂದು ಹೇಳಿಕೆ ಕೊಡತಕ್ಕದ್ದು ಸೂಕ್ತವಾದುದು. ಆದುದರಿಂದ ಅವರು ಈ ಸಭೆಗೆ ಒಂದು ಸಂಪ್ರದಾಯಕ್ಕೆ ಅನುಸಾರವಾಗಿ ರಾಜಿನಾಮೆ ಕೊಟ್ಟಿರತಕ್ಕಂಥ ಸಚಿವೆಯವರು ಒಂದು ಹೇಳಿಕೆ ಕೊಡುವುದಕ್ಕಾಗಿ ಅವರನ್ನು ಬರಮಾಡಿಕೊಳ್ಳಬೇಕೆಂದು ಈ ಸಭೆಯ ಪರವಾಗಿ ಒತ್ತಾಯ ಮಾಡುತ್ತೇನೆ.

ಮುಂದೆ ಬರತಕ್ಕ ವರ್ಷದ ಬಗ್ಗೆ ಸರಕಾರದ ನೀತಿ ಪ್ರಣಾಲಿಕೆ ಏನಿದೆ ಎಂಬುದನ್ನು ತಿಳಿಸಬೇಕಾಗಿತ್ತು. ಈ ನೀತಿ ಪ್ರಣಾಲಿಕೆ ಹೇಗೆ ಇದೆ ಎಂದರೆ, it is almost like a bundle of inconsistencies. ಒಂದು ರೀತಿಯ ದ್ವಂದ್ವ ನೀತಿ ಸರಕಾರ ಅನುಸರಿಸುತ್ತಿದ್ದಾರೆ. ಒಂದೇ ರೀತಿಯ ನೀತಿ ಇಲ್ಲ. ವಿದ್ಯಾಭ್ಯಾಸ, ಪಾನ ನಿರೋಧ, ಕೈಗಾರಿಕೆ ಈ ವಿಚಾರದಲ್ಲಿ ಒಂದು ಸರಿಯಾದ ನೀತಿ ಇಲ್ಲ. ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಬಂಡವಾಳಗಾರರಿಗೆ ಸಹಾಯ ಮಾಡುತ್ತಾರೆ. ಒಂದೊಂದು ಜಾಗದಲ್ಲಿ ಒಂದೊಂದು ನೀತಿ ಇದೆ. ಇಂಥ ನೀತಿಗೆ ಪುರಸ್ಕಾರವಿಲ್ಲ. ಮರ್ಯಾದೆ ಇಲ್ಲ. ದ್ವಂದ್ವ ನೀತಿ ಇಟ್ಟುಕೊಂಡು ಸರಕಾರ ರಾಜ್ಯವಾಳುತ್ತಿದ್ದಾರೆ. (it is almost in a chaotic condition) ಹೀಗೆ ಆದರೆ ಸರಕಾರ ಎಲ್ಲಿ ಇದೆ ? ಆಹಾರಧಾನ್ಯದ ವಿಚಾರದಲ್ಲಿ ದಿನ ಬೆಳಗ್ಗೆ ಒಂದು ಕಾನೂನು. ಮಧ್ಯ ಇರತಕ್ಕಂಥವರನ್ನು ಬಲಿ ಹಾಕಲು ಸರಕಾರಕ್ಕೆ ಧೈರ್ಯವಿಲ್ಲ. ಒಳ್ಳೆ ನೀತಿ ಅನುಸರಿಸುವುದಕ್ಕೆ ಧೈರ್ಯವಿಲ್ಲ, ಮಾಡತಕ್ಕ ಎದೆಗಾರಿಕೆ ಇಲ್ಲ. ಕಾನೂನು ಮಾಡಿ ಕಾನೂನಿಗೆ ಅಪಮಾನ ಮಾಡುತ್ತಿದ್ದಾರೆ. ಸರಕಾರದ ನೀತಿ ಅಂಜುಬುರುಕ ನೀತಿಯಾಗಿದೆ. ಏನಾದರೂ ಮಾಡಿ ಎಂದು ಕೇಳಿದರೆ ಸರಕಾರದ ಹತ್ತಿರ ದುಡ್ಡು ಇಲ್ಲ, ಕೇಂದ್ರ ಸರಕಾರದ ನೆರವು ಇಲ್ಲ ಎಂದು ಹೇಳುತ್ತಾರೆ. ಸರಕಾರದ ಖಜಾನೆಯಲ್ಲಿ ಎಷ್ಟು ಹಣ ಇದೆ ಇದು ಅವರಿಗೇ ಗೊತ್ತಿಲ್ಲ. 25 ಕೋಟಿ ರೂಪಾಯಿ ಓವರ್ ಡ್ರಾಫ್ಟ್ ಮಾಡಿದ್ದಾರೆ ಎಂದು ಹೇಳತಕ್ಕ ಪರಿಸ್ಥಿತಿ ಸರಕಾರಕ್ಕೆ ಬಂದಿದೆ. ಈ ದೇಶದಲ್ಲಿ ಸರಕಾರ ಇದೆಯೋ ಎಂಬ ಭಾವನೆ ಬರುತ್ತದೆ. ಇದು ನಿಜವಾಗಿಯೂ ಕೆಟ್ಟದ್ದು. ಇಂಥ ಸಂದರ್ಭದಲ್ಲಿ ರಾಜ್ಯ ಲಕ್ಷ್ಮಿ ಬೇರೆ ಕಡೆ ಹೋಗುತ್ತಾಳೆ. ರಾಜ್ಯ ಭಾರವನ್ನು ಹೊರತಕ್ಕ ಶಕ್ತಿ ಅಧಿಕಾರದಲ್ಲಿ ಇರತಕ್ಕವರಿಗೆ ಇರಬೇಕಾದುದು ಅಗತ್ಯ. ನಮ್ಮ ರಾಜ್ಯ ಇಡೀ ಭಾರತ ದೇಶದಲ್ಲಿ ಒಂದು ಮಾದರಿ ರಾಜ್ಯವಾಗಿತ್ತು. ಅನೇಕರು ಇದನ್ನು ಹೊಗಳಿ ಹಾಡಿದ್ದಾರೆ. ಇವತ್ತಿನ ದಿವಸ ಜನತೆಯಲ್ಲಿ ಒಂದು ಹೊಸ ಶಕ್ತಿ ಬೆಳೆಯಬೇಕು. ಇಂಥ ಸಂದರ್ಭದಲ್ಲಿ ಎಂಥ ಸರಕಾರ ಯಾವ ಸರಕಾರ ಇರಬೇಕು ಎಂಬುದನ್ನು ಜನತೆ ತೀರ್ಮಾನ ಮಾಡುತ್ತಾರೆ. ಜನತೆ ಜಾಗೃತರಾಗಿದ್ದಾರೆ. ಅಂಥ ಸಮಯ ಬೇಗ ಬರಲಿದೆ ಎಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

†ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಸಭಾಪತಿಗಳವರೇ, ಶ್ರೀಮಾನ್ ಮಂಜಯ್ಯ ಶೆಟ್ಟಿಯವರು ಈ ಸಭೆಯ ಮುಂದೆ ಮಂಡಿಸಿರತಕ್ಕ ವಂದನಾರ್ಪಣ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ರಾಜ್ಯಪಾಲರು ಈ ಸಭೆಗೆ ಕೊಟ್ಟಿರತಕ್ಕಂಥ

(ಶ್ರೀ ಎಂ. ಸಿ. ಬಸಪ್ಪ)

ಭಾಷಣದಲ್ಲಿಯ ಎಲ್ಲ ಅಂಶಗಳನ್ನು ಕೂಡ ನನ್ನ ಮಾನ್ಯ ಸ್ನೇಹಿತರು ಕೂಲಂಕಷವಾಗಿ ಚರ್ಚೆ ಮಾಡಿದ್ದಾರೆ. ಮತ್ತು ಈ ಸಂದರ್ಭದಲ್ಲಿ ಅನೇಕ ವಿವರಗಳನ್ನು ಕೊಟ್ಟಿದ್ದಾರೆ. ಬಹುಶಃ ನಾನು ಪ್ರತಿಯೊಂದು ಅಂಶವನ್ನು ಹೇಳುವುದಾದರೆ ಅದು ಪುನರುಕ್ತಿಯಾಗುತ್ತದೆ. ಆದುದರಿಂದ ಕೆಲವು ವಿಷಯಗಳ ಬಗ್ಗೆ ಅಷ್ಟೇ ನನ್ನ ಅಭಿಪ್ರಾಯ ವ್ಯಕ್ತಪಡಿಸಲು ನಾನು ಪ್ರಯತ್ನ ಮಾಡುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಮುಖ್ಯವಾಗಿ ಒಂದು ಅಂಶವನ್ನು ಹೇಳಿದ್ದಾರೆ. ಈ ವರ್ಷ ಅಂತರರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪರಿಸ್ಥಿತಿ ವಾತಾವರಣ ಅಷ್ಟೊಂದು ಹಿತಕರವಾಗಿರಲಿಲ್ಲ ಎನ್ನತಕ್ಕದ್ದನ್ನು ಅವರು ಪ್ರಸ್ತಾಪಮಾಡಿದ್ದಾರೆ. ಇದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅದೇರೀತಿ ಇನ್ನೊಂದು ವಿಶೇಷ ಸಂಗತಿ ಇಲ್ಲಿ ಹೇಳಿದ್ದಾರೆ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದು ಕೊನೆಯ ವರ್ಷ. ನಾಲ್ಕನೇ ಪಂಚವಾರ್ಷಿಕ ಯೋಜನೆಯನ್ನು ಮುಂದಿನ ಹಣಕಾಸಿನ ಸಾಲಿನಿಂದ ನಮ್ಮ ರಾಜ್ಯ ಸರಕಾರ ಪ್ರಾರಂಭಮಾಡಬೇಕಾಗಿದೆ. ಇದೂ ಕೂಡ ಅವರ ಭಾಷಣದಲ್ಲಿ ಉಲ್ಲೇಖಿತವಾಗಿದೆ. ಮೂರನೇ ಯೋಜನೆಯನ್ನು ಪರಿಶೀಲನೆಮಾಡುವಾಗ ನೋಡಿದರೆ ಈ ಯೋಜನೆಗಾಗಿ ಇಟ್ಟಿದ್ದ ಹಣದಲ್ಲಿ ಶೇಕಡಾ 97 ರಷ್ಟು ಹಣವನ್ನು ಖರ್ಚುಮಾಡಿದ್ದಾರೆ. ಇದೂ ಅಲ್ಲದೆ ಮುಖ್ಯವಾದ ಕೆಲವು ಯೋಜನೆಗಳು ಹಾಗೂ ಸಣ್ಣ ನೀರಾವರಿ ಯೋಜನೆಗಳಿಗಾಗಿ ಖರ್ಚು ಮಾಡಬೇಕಾಗಿ ಬಂದುದರಿಂದ ಇವಕ್ಕೆ ಸುಮಾರು ಶೇಕಡಾ ಇನ್ನೂರರಷ್ಟು ವ್ಯಯ ಮಾಡಬೇಕಾಗಿ ಬಂದಿವೆ ಎನ್ನುವ ಒಂದಂಶವನ್ನು ಇದರಲ್ಲಿ ಹೇಳಿದ್ದಾರೆ. ಮುಂದೆ ರಾಜ್ಯಪಾಲರು ನಾಲ್ಕನೆಯ ಯೋಜನೆಯ ಮೊದಲನೆಯ ವರ್ಷದಲ್ಲಿ ಸುಮಾರು 50.72 ಲಕ್ಷ ರೂಪಾಯಿಗಳಷ್ಟು ವೆಚ್ಚವನ್ನು ಮಾಡುವುದರಲ್ಲಿವೆ ಮತ್ತು ಇದರಲ್ಲಿ ಮುಖ್ಯವಾಗಿ ವ್ಯವಸಾಯ ನೀರಾವರಿ ಬಾಬುಗಳಿಗಾಗಿ ಮತ್ತಿತರ ಇಲಾಖೆಗಳಿಗಾಗಿ ಖರ್ಚು ಮಾಡಬೇಕೆಂದೂ ಇದರಲ್ಲಿ ಅವರು ಪ್ರಸ್ತಾಪಮಾಡಿದ್ದಾರೆ. ಈಗಿನ ಒಂದು ಪರಿಸ್ಥಿತಿಯನ್ನು ನಾವು ಪ್ರಸ್ತಾಪಮಾಡಿದ ಪಕ್ಷದಲ್ಲಿ ನಮ್ಮ ದೇಶದಲ್ಲಿ ಒಂದೇ ಅಲ್ಲ ರಾಷ್ಟ್ರದ ಎಲ್ಲ ಭಾಗಗಳಲ್ಲೂ ಒಂದು ತರಹದ ಗೊಂದಲದ ಪರಿಸ್ಥಿತಿಗಳು ಬಂದೊದಗಿದೆ ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ಸಾಮಾನ್ಯವಾಗಿ ಹೇಳುವುದಾದರೆ, ಒಂದು ಎರಡು ಹಾಗೂ ಮೂರನೇ ಯೋಜನೆಗಳಲ್ಲಿ ಹೆಚ್ಚು ಹಣವನ್ನು ನೀರಾವರಿ ಯೋಜನೆಗಳಿಗಾಗಿ ಖರ್ಚು ಮಾಡಿದ್ದೇವೆ ಮತ್ತು ಹೆಚ್ಚು ಉತ್ಪಾದನೆ ಮಾಡಬೇಕೆಂದು ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನಮಾಡಿದ್ದಾರೆ. ಇದರಲ್ಲಿ ಇನ್ನೂ ಹೆಚ್ಚು ಪ್ರಗತಿಸಾಧನೆ ಮಾಡಬೇಕಾಗಿದೆ. ಇದು ನಮ್ಮ ದೇಶದಲ್ಲಿ ಒಂದೇ ಅಲ್ಲ, ದೇಶದಲ್ಲಿ ಇತರ ಎಲ್ಲ ಸಂಸ್ಥಾನಗಳಲ್ಲೂ ಕೂಡ ಹೆಚ್ಚು ಸಾಧನೆ ಮಾಡುವುದಕ್ಕಾಗಲಿಲ್ಲ. ಇದಕ್ಕೆ ನಾನಾ ಕಾರಣಗಳೂ ಇವೆ. ಬರೀ ಸರಕಾರ ಒಂದೇ ಕಾರಣ ಎಂದು ಹೇಳಿದರೆ ಅದು ತಪ್ಪಾಗುತ್ತದೆ. ನಮ್ಮ ಯೋಜನೆಗಳಲ್ಲಿ ಅನೇಕ ಅಂಶಗಳು ಒಳಗೊಂಡಿವೆ. ನಮ್ಮ ಯೋಜನೆ ಯಶಸ್ವಿಯಾಗಿ ಕೊನೆಗಾಣಬೇಕಾದರೆ ಯಾವ ಯಾವ ಅಂಶಗಳನ್ನು ಪರಿಶೀಲನೆ ಮಾಡಬೇಕೆಂದು ಇದ್ದೆವೋ ಅವಕ್ಕೆ ಸರಿಯಾಗಿ ವ್ಯಯಮಾಡದೇ ಹೋದುದೂ ಒಂದು ಕಾರಣವಾಗುತ್ತದೆ. ಅಲ್ಲದೆ ನಾವು ಎಷ್ಟು ಪ್ರಗತಿಯನ್ನು ಸಾಧಿಸಬೇಕೆಂದು ಯೋಚನೆಮಾಡಿದ್ದೆವೋ ಅದರಂತೆ ಉತ್ಪಾದನೆ ಮಾಡುವುದಕ್ಕೆ ನಿರ್ಣಯ ತೆಗೆದುಕೊಂಡಿದ್ದೆವೋ ಅದರಂತೆ ಮಾಡುವುದಕ್ಕೆ ಆಗಲಿಲ್ಲ ಎನ್ನುವ ಒಂದು ಅಂಶವನ್ನು ನಾವು ಒಪ್ಪಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಇದರ ಜೊತೆಗೆ ಈ ವರ್ಷದ ಪರಿಸ್ಥಿತಿಯನ್ನು ನೋಡಿದರೆ ಮಳೆ ಸಕಾಲದಲ್ಲಿ ಬರದೇ ಫಸಲು ಏನು ಬರುತ್ತೆ ಎಂದು ನಿರೀಕ್ಷೆ ಮಾಡಿದ್ದೆವೋ ಅದರಂತೆ ಫಸಲು ಬರಲಿಲ್ಲ, ಅಲ್ಲದೆ ದೇಶದ ಇತರ ಕಡೆಗಳಲ್ಲಿಯೂ ಕೂಡ ಮಳೆಯ ಅಭಾವದ ಪರಿಸ್ಥಿತಿಯಿಂದಾಗಿ ಇತರ ಕಡೆಗಳಲ್ಲಿಯೂ ಹೆಚ್ಚು ನಷ್ಟವಾಯಿತು ಎಂದು ಹೇಳಿದರೆ ಅದು ತಪ್ಪಾಗಲಾರದು. ಇದರ ಬಗ್ಗೆ ಏನೊಂದು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವು ಎನ್ನುವುದನ್ನೂ ರಾಜ್ಯಪಾಲರು ಅವರ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ನೀರಿನ ಅಭಾವದಿಂದ ಬೆಳೆಗಳಿಗೆ ತೊಂದರೆ ಬಂದುದರಿಂದ ಅದಕ್ಕಾಗಿ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡು ಮಾಡಿದೆವು ಎನ್ನುವುದನ್ನೂ ಇದರಲ್ಲಿ ನಿರೂಪಣೆಮಾಡಿದ್ದಾರೆ. ಇದು ನಿಜವಾಗಿಯೂ ಕೂಡ ಸರಕಾರ ಸಾಧಿಸಬೇಕಾದ ಕ್ರಮಗಳು. ಈ ರೀತಿ ಮಾಡದೇಹೋದರೆ ಇನ್ನೂ ಹೆಚ್ಚಿನ ನಷ್ಟವಾಗುತ್ತಿತ್ತು. ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬರದೇ ಹೋದಾಗ ಸರಕಾರದವರು ರೈತರಿಗೆ ನೀರನ್ನು ಒದಗಿಸಿಕೊಡಲು ತ್ವರಿತವಾದ ಒಂದು ಕಾರ್ಯಕ್ರಮವನ್ನು ಕೈಗೊಂಡು ಎಷ್ಟು ಫಸಲು ಮಾಡಲು ಸಾಧ್ಯವೋ ಅಷ್ಟನ್ನೂ ಮಾಡಲು ಮಹತ್ವವಾದ ಪ್ರಯತ್ನಗಳನ್ನು ಮಾಡಿದ್ದಾರೆ ಎನ್ನುವುದನ್ನು ಇದರಲ್ಲಿ ಉಲ್ಲೇಖಿಸಿದ್ದಾರೆ. ಇದೂ ಅಲ್ಲದೆ ಮತ್ತೊಂದು ಮುಖ್ಯವಾದ ಅಂಶ ಎಂದರೆ, ಬೇಸಿಗೆಯಲ್ಲಿ ಬೆಳೆಯನ್ನು ಮಾಡಲು ವಿಶೇಷವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಅದರಂತೆ ತ್ವರಿತವಾದ ಕ್ರಮಗಳನ್ನು ತೆಗೆದುಕೊಳ್ಳಲು ಸಹಕಾರವನ್ನು ಆಯಾ ಡಿವಿಜನಲ್ ಕಮಿಷ

ನರುಗಳ ಮೂಲಕ ಡೆಪ್ಯುಟಿ ಕಮಿಷನರುಗಳಿವರಿಗೆ ಹಣವನ್ನು ಒದಗಿಸಿಕೊಟ್ಟಿದ್ದರು. ಇದನ್ನೆಲ್ಲಾ ಪರಿಶೀಲನೆ ಮಾಡುವುದಾದರೆ; ಸರಕಾರ ಎಷ್ಟು ಹಣ ಒದಗಿಸಿದ್ದರೂ ಕೂಡ ಅದು ಸದುಪಯೋಗವಾಗಿದೆಯೋ ಎನ್ನುವುದು ಸಂಶಯಕ್ಕೆ ಕಾರಣವಾಗಿದೆ. ಉದಾಹರಣೆಯಾಗಿ ನಮ್ಮ ಮೈಸೂರು ಜಿಲ್ಲೆಯನ್ನೇ ತಗೆದುಕೊಂಡರೆ, ನಮ್ಮ ಮೈಸೂರು ಜಿಲ್ಲಾಧಿಕಾರಿಗಳಿಗೆ ಸುಮಾರು 6—7 ಲಕ್ಷ ರೂಪಾಯಿಗಳಷ್ಟು ಹಣವನ್ನು ಕೊಟ್ಟಿದ್ದರು. ಇದರಿಂದ ಎಷ್ಟು ಜನ ರೈತರಿಗೆ ನೀರನ್ನು ತೆಗೆಯುವುದಕ್ಕಾಗಿ ಡೀಸಲ್ ಪಂಪುಸೆಟ್ಟುಗಳನ್ನು ಕೊಡಲು ಸಾಧ್ಯವಾಯಿತು ಎನ್ನುವುದನ್ನು ಪರಿಶೀಲನೆ ಮಾಡಿದರೆ ಬಹುಶಃ ನಾವು ನಿರೀಕ್ಷೆಮಾಡಿದಷ್ಟು ಸಾಧನೆಮಾಡಲು ಆಗಲಿಲ್ಲ ಎನ್ನುವುದು ಗೋಚರವಾಗುತ್ತದೆ. ಇದನ್ನು ನೋಡಿದರೆ ಜಿಲ್ಲಾಧಿಕಾರಿಗಳಿಗೆ ಕೊಟ್ಟ ಹಣ ಸರಿಯಾಗಿ ಉಪಯೋಗವಾಗಿದೆಯೋ ಇಲ್ಲವೇ ಎನ್ನುವ ಸಂಶಯಕ್ಕೆ ಕಾರಣವಾಗುತ್ತದೆ. ಇದನ್ನು ಸರಕಾರದವರು ಇನ್ನೂ ಹೆಚ್ಚು ಪರಿಶೀಲನೆ ಮಾಡಬೇಕಾದುದು ಅಗತ್ಯ ಎಂದು ನಾನು ಇಲ್ಲಿ ಹೇಳಲು ಇಷ್ಟಪಡುತ್ತೇನೆ. ಎರಡನೆಯ ಅಂಶ ನೀರಾವರಿ ಬಾವಿಗಳಿಗಾಗಿ ಇನ್ನೂ ಹೆಚ್ಚು ಪ್ರೋತ್ಸಾಹ ಕೊಡಬೇಕು. ಇದಕ್ಕೆ ಹಣ ತ್ವರಿತವಾಗಿ ಸಿಗಲು ಅನುಕೂಲಮಾಡಿಕೊಡಬೇಕು. ಈಗೇನೋ ಲಿಬರಲೈಸ್ಡ್ ಸ್ಕೀಂ ಎಂದು ಮಾಡಿದ್ದಾರೆ. ಇದರಿಂದ ಸುಲಭವಾಗುವುದಕ್ಕೆ ಬದಲು ಕಾಂಪ್ಲಿಕೇಟೆಡ್ ಆಗಿದೆ ಎಂದು ನನಗೆ ಭಾಸವಾಗುತ್ತಿದೆ. ಸರಕಾರದವರು ಇದರ ಬಗ್ಗೆ ಸುಮಾರು ಆರೇಳು ಸರ್ಕ್ಯುಲರುಗಳನ್ನು ಹೊರಡಿಸಿದ್ದಾರೆ. ಇದರಂತೆ ರೈತರಿಗೆ ಅಡಮಾನದ ಬ್ಯಾಂಕಿನಿಂದ ಹಣ ಸಿಗಲು ಅನುಕೂಲ ಮಾಡಿಕೊಡಬೇಕೆಂದು ಇನ್ನೂ ಸುಲಭವಾಗಿರಬೇಕೆಂದು ಕ್ರಮ ಮಾಡುವುದಕ್ಕೆ ಹೋಗಿದ್ದರೂ ಕೂಡ ಅದರಿಂದ ಜನಕ್ಕೆ ಇನ್ನೂ ಹೆಚ್ಚು ತೊಂದರೆಗಳಾಗುತ್ತಿರುವುದು ನಮಗೆ ಭಾಸವಾಗುತ್ತಿದೆ. ಸರಕಾರದವರು ಇದರ ಬಗ್ಗೆ ಈಗಲಾದರೂ ತ್ವರಿತವಾಗಿ ಆಲೋಚನೆ ಮಾಡಬೇಕಾದುದು ಅವಶ್ಯಕ. ಇದು ಸುಲಭ ಮಾಡುವುದಕ್ಕೆಂದು ಮಾಡಿದ್ದರೂ ಇದರಿಂದ ಇಲ್ಲದ ಕಾಂಪ್ಲಿಕೇಷನ್ನುಗಳಿಗೆ ಅವಕಾಶವಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇದನ್ನು ಪರಿಶೀಲನೆಮಾಡಿ ರೈತರಿಗೆ ಸುಲಭವಾಗಿ ದುಡ್ಡು ಸಿಗುವಂತೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ರೈತರು ವ್ಯವಸಾಯಮಾಡುವುದಕ್ಕೋಸ್ಕರ ಪಂಪುಸೆಟ್ಟುಗಳನ್ನು ಲಿಬರಲ್ ಆಗಿ ಕೊಡಬೇಕೆಂದು ಸುಮಾರು ಒಂದು ಕೋಟಿ ರೂಪಾಯಿಗಳಷ್ಟನ್ನು ಎಲೆಕ್ಟ್ರಿಸಿಟಿ ಬೋರ್ಡಿಗೆ ಒದಗಿಸಿ ಕೊಟ್ಟಿದ್ದಾರೆ. ಆದರೆ ಅದರಂತೆ ಹಣವನ್ನು ಉಪಯೋಗಮಾಡುವುದಕ್ಕಾಗಲಿಲ್ಲ. ಕೆಲವು ಕಡೆಗಳಲ್ಲಿ ರೈತರು ಅದಕ್ಕೆ ಬೇಕಾಗುವ ಬಾಂಡು ಇತ್ಯಾದಿಗಳನ್ನೆಲ್ಲಾ ಮಾಡಿಕೊಟ್ಟಿದ್ದರೂ ಕೂಡ ಇನ್ನೂ ಎಷ್ಟೋ ಕಡೆಗಳಲ್ಲಿ ಪಂಪುಸೆಟ್ಟುಗಳನ್ನು ಸರಿಯಾಗಿ ಹಂಚುವುದಕ್ಕೆ ಆಗಲಿಲ್ಲ. ಆದುದರಿಂದ ಪಂಪುಸೆಟ್ಟುಗಳನ್ನು ಆಯಾ ತಾಲ್ಲೂಕುಗಳಲ್ಲಿಯೇ ಪಡೆಯುವುದಕ್ಕೆ ಬೇಕಾಗುವಂತಹ ಅನುಕೂಲಗಳನ್ನು ಮಾಡಿಕೊಡಲು ಪರಿಶೀಲನೆ ಮಾಡಬೇಕಾದುದು ಅವಶ್ಯಕ, ಈಗ ಮಾಡಿರುವ ಲಿಬರಲೈಸ್ಡ್ ಸ್ಕೀಂ ಸರಿಯಾಗಿ ಮಾಡದೇ ಇರುವುದರಿಂದ ಇಂತಹ ಅನಾನುಕೂಲಗಳು ಆಗುತ್ತಿವೆ ಎಂದು ತೋರುತ್ತದೆ. ಇದನ್ನು ಸರಿಪಡಿಸಿ ಸಾಕಷ್ಟು ಹಣವನ್ನು ಒದಗಿಸಿಕೊಡಬೇಕಾದುದು ಅಗತ್ಯವಾಗಿದೆ. ವ್ಯವಸಾಯಕ್ಕಾಗಿ ಸುಮಾರು 17.3 ಕೋಟಿಯಷ್ಟು ಹಣ ಒದಗಿಸಲಾಗಿದೆ ಎಂದು ಇದರಲ್ಲಿ ಹೇಳಿದ್ದಾರೆ.

ಇಲ್ಲಿ ಮುಖ್ಯವಾದ ಒಂದು ಅಂಶ. ವ್ಯವಸಾಯದ ವಿಚಾರದಲ್ಲಿ ರಾಜ್ಯಪಾಲರವರ ಭಾಷಣದಲ್ಲಿ ಒಂದು ಮುಖ್ಯವಾದ ಅಂಶವನ್ನು ಹೇಳಿದ್ದಾರೆ. ಹೈಬ್ರಿಡ್ ಸೀಡ್ಸನ್ನು ನಾವು ತಯಾರು ಮಾಡುತ್ತಿದ್ದೇವೆ. ಅದಕ್ಕೆ ಸಾಕಾದಷ್ಟು ಪ್ರಾಧಾನ್ಯತೆ ಕೊಟ್ಟಿದ್ದೇವೆ. ಸೂಕ್ತವಾದ ಕಾರ್ಯಕ್ರಮವನ್ನು ಮಾಡುತ್ತಾ ಇದ್ದೇವೆ ಎಂದು ಹೇಳಿದ್ದಾರೆ. ನಿಜವಾಗಿಯೂ ಸ್ತೋತ್ರಾರ್ಹವಾದ ಕಾರ್ಯವನ್ನು ಮಾಡುತ್ತಾ ಇದ್ದಾರೆ. ಆದರೆ ಸಾಕಾದಷ್ಟು ಪ್ರಮಾಣದಲ್ಲಿ ರೈತನಿಗೆ ಇದು ಸೇರುತ್ತಿಲ್ಲ. ಹೆಚ್ಚಿನ ರೀತಿಯಲ್ಲಿ ಸರ್ಕಾರ ವಿಶೇಷ ಕಾರ್ಯಕ್ರಮ ಹಾಕಿಕೊಂಡು ಹೈಬ್ರಿಡ್ ಸೀಡ್ಸನ್ನು ಇವೊತ್ತಿನ ದಿವಸ ಒದಗಿಸುವ ಪಕ್ಷದಲ್ಲಿ ಉತ್ಪನ್ನವನ್ನು ಅಧಿಕ ಮಾಡತಕ್ಕಂಥ ಒಂದು ಅವಕಾಶವಾಗುತ್ತದೆಂದು ವಿನಂತಿಮಾಡಿಕೊಳ್ಳುತ್ತೇನೆ ಮತ್ತು ಮುಖ್ಯವಾದ ಒಂದು ಅಂಶವೇನೆಂದರೆ ಫರ್ಟಿಲೈಸರ್ಸ್ ಗೊಬ್ಬರದ ಸರಬರಾಜು ವಿಚಾರದಲ್ಲಿ ನೈಟ್ರೊಜನಸ್ ಫರ್ಟಿಲೈಸರ್ಸ್ ಸೇರಿಸಿ ಸರ್ಕಾರದವರು ಒಂದು ನೀತಿಯನ್ನು ಮಾಡಿ ಹಂಚುತ್ತಿದ್ದಾರೆ. ಪ್ರತಿ ತಾಲ್ಲೂಕಿನ ರೈತರಿಗೂ ಹಂಚುವ ವ್ಯವಸ್ಥೆ ಮಾಡುವಂತೆ ಸರ್ಕಾರದವರು ಹೇಳಿದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಇಲಾಖೆಯ ಅಧಿಕಾರಿಗಳನ್ನು ಕೇಳಿದರೆ ಯಾವ ಬೆಳೆ ಬೆಳೆಯಬೇಕಾದರೂ ಇಂತಹ ಒಂದು ಬೆಳೆಯನ್ನೇ ಬೆಳೆಯಬೇಕೆಂದು ಪ್ರಚಾರ ಮಾಡಿದ್ದಾರೆ. ಹೆಚ್ಚಿನ ಬೆಳೆ ಬೆಳೆಯಬೇಕಾದರೆ ಇದು ಬೇಕು ಎಂದು ಪ್ರಚಾರ ಮಾಡುತ್ತಿದ್ದಾರೆ ಇದನ್ನು ರೈತರು ಅನುಸರಿಸುತ್ತಿದ್ದಾರೆ. ಇದನ್ನು ಇವೊತ್ತು ಸಾಕಾದಷ್ಟು ಪ್ರಮಾಣದಲ್ಲಿ ಉಪಯೋಗಿಸಬೇಕು ಎಂದು ಹೇಳುತ್ತಿದ್ದಾರೆ. ಈ ಒಂದು ಅಂಶವನ್ನು ಹೇಳುತ್ತಿದ್ದಾರೆ. ಇದು ನಮ್ಮ ಪೂಲ್‌ನಲ್ಲಿ ಸೇರಿಲ್ಲ ಆದುದರಿಂದ ಅದನ್ನು ಒದಗಿಸುವ ಜವಾಬ್ದಾರಿತ್ವಕ್ಕೆ ಸೇರಿಲ್ಲವೆಂದು ಹೇಳುತ್ತಿದ್ದಾರೆ. ಬಹುಶ; ಇದು ಸರಿಯಾದ ಒಂದು ನೀತಿ

(ಶ್ರೀ ಎಂ. ಸಿ. ಬಸಪ್ಪ)

ಯಾಗಿರಲಾರದು. ನಾವು ಒಂದು ಏನು ಪ್ರಚಾರ ಮಾಡುತ್ತೇವೆಯೋ ಅದನ್ನು ಕಾರ್ಯಗತ ಮಾಡಿ ಸಾಕಾದಷ್ಟು ಪ್ರಮಾಣದಲ್ಲಿ ಹೈ ಬ್ರಿಡ್‌ಸೀಡ್‌ನ್ನು ಒದಗಿಸಬೇಕೆಂದು ಸರ್ಕಾರಕ್ಕೆ ವಿನಂತಿಮಾಡಿ ಕೊಳ್ಳುತ್ತೇನೆ.

ಕಳೆದ ವರ್ಷ ಸರ್ಕಾರದವರು ಆಹಾರ ಧಾನ್ಯವನ್ನು ಶೇಖರಣೆ ಮಾಡುವುದರಲ್ಲಿ, ಹಂಚುವುದರಲ್ಲಿ ಒಂದು ನೀತಿಯನ್ನು ಅನುಸರಿಸುತ್ತಿದ್ದರು. ಅದು ಏನೆಂದರೆ ಎಲ್ಲ ಜಿಲ್ಲೆಗಳಲ್ಲಿ ವಿಶೇಷವಾಗಿ ಬೆಳೆ ಬೆಳೆಯತಕ್ಕ ಭತ್ತದ 10-15 ಗ್ರಾಮಗಳನ್ನು ಒಂದು ಸಹಕಾರ ಸಂಘಕ್ಕೆ ಸೇರಿಸಿ ಭತ್ತವನ್ನು ಶೇಖರಣೆ ಮಾಡಿಸಿ ಹಂಚಿಸುತ್ತಿದ್ದರು. ಆಯಾಯ ತಾಲ್ಲೂಕಿನ ಅವಶ್ಯಕತೆಯನ್ನು ನೋಡಿಕೊಂಡು ಪಂಪುಸೆಟ್ಟಿನ ನೆರವನ್ನು ಒದಗಿಸಿ ವ್ಯವಸಾಯಕ್ಕೆ ಸಹಾಯ ಮಾಡಿದ್ದರು. ಇದನ್ನು, ಈ ವರ್ಷ ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾಕ್ಕೆ ಒದಗಿಸಿದ್ದಾರೆ. ಸಹಕಾರ ಸಂಘಗಳು ಬೇಕಾದರೆ ಏಜೆಂಟ್ ಅಥವಾ ಸಬ್ ಏಜೆನ್ಸಿ ಆಗಿ ಕೆಲಸ ಮಾಡಬೇಕು. ಸರ್ಕಾರದವರು ಈ ಒಂದು ಶೇಖರಣೆಗೆ ಹೆಚ್ಚಿನ ಒಂದು ಗಮನವನ್ನೂ ಆದ್ಯತೆಯನ್ನೂ ಕೊಟ್ಟಿರುವಂತೆ ಕಾಣುವುದಿಲ್ಲ. ರಾಜ್ಯಪಾಲರ ಭಾಷಣವನ್ನು ನೋಡಿದರೂ ಕೂಡ ಇದರಲ್ಲಿ ನಾವು ನಿರೀಕ್ಷಿಸಿದಷ್ಟು ಶೇಖರಣೆ ಮಾಡುವ ಸಾಧ್ಯತೆ ಇಲ್ಲವೆಂದು ನಿರೂಪಣೆ ಮಾಡಿದ್ದಾರೆ. ಬಹುಶ : ಈ ಒಂದು ಆಹಾರದ ನೀತಿಯ ಬದಲಾವಣೆ ನೋಡಿದರೆ ಮುಂದೆ ಬರತಕ್ಕ ಆಹಾರದ ಅಭಾವದಲ್ಲಿ ಹೆಚ್ಚಿನ ಒಂದು ವಿಶೇಷ ಪರಿಸ್ಥಿತಿ ಬರುತ್ತದೆ ಮತ್ತು ಘೋರ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ ಎಂದು ತಿಳಿದು ಕೊಂಡು ಸರ್ಕಾರ ಈ ಜವಾಬ್ದಾರಿಯನ್ನು ಬಹುಶ : ಬಹಳ ಕಡಿಮೆ ಮಾಡಿಕೊಂಡ ಹಾಗೆ ಕಾಣು ತ್ತದೆ. ಈಗ ಇನ್‌ಫಾರ್ಮಲ್ ರೇಷನಿಂದ ಅನೇಕ ಕಡೆ ತೆಗೆದುಹಾಕಿದ್ದಾರೆ. ಕೆ. ಜಿ. ಎಫ್ ಮತ್ತು ಬೆಂಗಳೂರಿನಲ್ಲಿ ಫಾರ್ಮಲ್ ರೇಷನಿಂಗ್ ವ್ಯವಸ್ಥೆ ಮಾಡಬೇಕೆಂದು ಇದ್ದಾರೆಂದು ಕಾಣುತ್ತದೆ. ಸರ್ಕಾರದವರು ಅವರ ಒಂದು ಜವಾಬ್ದಾರಿಯನ್ನು ಇಷ್ಟರ ಮಟ್ಟಿಗೆ ಕಡಿಮೆ ಮಾಡಿಕೊಂಡ ಹಾಗೆ ಕಾಣುತ್ತದೆ. ಇದರಿಂದ ಜನತೆ ಕಷ್ಟವನ್ನು ಅನುಭವಿಸಬೇಕಾಗುತ್ತದೆ ಮತ್ತು ತುಂಬಾ ತೊಂದರೆಗೆ ಒಳಗಾಗಬೇಕಾಗುತ್ತದೆ. ಸರ್ಕಾರ ತಮ್ಮ ಒಂದು ಜವಾಬ್ದಾರಿ ದೃಷ್ಟಿಯಿಂದ ಸಾಕಾದಷ್ಟು ಏರ್ಪಾಡು ಮಾಡಬೇಕಾದ ಅವಶ್ಯಕತೆ ಇದೆ. ಅದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದರೂ ಕೂಡ ಹೆಚ್ಚಿನ ಜವಾಬ್ದಾರಿ ಸರ್ಕಾರದ ಕಡೆ ಇದ್ದಂತೆ ಕಾಣುವುದಿಲ್ಲ. ಈ ಘೋರ ಪರಿಸ್ಥಿತಿಯನ್ನು ಎದುರಿಸಬೇಕಾಗಿದೆ. ಹೆಚ್ಚಿನ ಒಂದು ಜವಾಬ್ದಾರಿಯನ್ನು ಸರ್ಕಾರ ನಿರ್ವಹಿಸ ಬೇಕಾದ ಅವಶ್ಯಕತೆ ಇದೆ. ಅದನ್ನು ಸರ್ಕಾರ ಪರಿಶೀಲನೆ ಮಾಡಬೇಕು. ನನಗೆ ಇಷ್ಟು ಮಾತ ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ಈ ನಿರ್ಣಯಕ್ಕೆ ನನ್ನ ಸಂಪೂರ್ಣ ಸಮ್ಮತಿಯನ್ನು ಕೊಡುತ್ತೇನೆ.

† ಶ್ರೀ ಸಿದ್ದಯ್ಯ ಕಾಶೀಮಠ್.—ಅಧ್ಯಕ್ಷರೇ, ಈ ರಾಜ್ಯಪಾಲರ ಭಾಷಣದಲ್ಲಿ ಭಾರತ ದೇಶದ ಮೇಲೆ ಆಕ್ರಮಣವನ್ನು ಮಾಡಿದಂಥ ಪಾಕೀಸ್ಥಾನವನ್ನು ಹೊಡೆದೋಡಿಸಿ ಜಯ ವನ್ನು ಗಳಿಸಿಕೊಟ್ಟ ಸೈನಿಕರಿಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ, ಅದು ನಮ್ಮ ಕರ್ತವ್ಯ. ಅಷ್ಟೇ ಅಲ್ಲದೆ ತಾಷ್ಕೆಂಟ್‌ನಲ್ಲಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಒಂದು ಶಾಂತಿಯ ಒಪ್ಪಂದವನ್ನು ಮಾಡಿಕೊಂಡದ್ದು ಒಂದು, ಈ ಘೋಷಣೆಯನ್ನು ಪ್ರಸ್ತಾಪ ಮಾಡಿದ್ದಾರೆ. ಕಲ್ಕತ್ತಾ ಅಲ್ಯೂಮಿನಿ ಯಮ್ ಕಂಪನಿಯವರು ಒಂದು ಅಲ್ಯೂಮಿನಿಯಮ್ ಫ್ಯಾಕ್ಟರಿಯನ್ನು ಬೆಳಗಾಮ್ ಹತ್ತಿರ ಸ್ಥಾಪಿಸ ಬೇಕೆಂದು ಇದ್ದಾರೆಂದು ಹೇಳಿದ್ದಾರೆ. ಈ ಕೆಲವು ಹೊಸ ವಿಷಯಗಳನ್ನು ಮಾತ್ರ ಬಿಟ್ಟರೆ ಉಳಿದ ವಿಷಯಗಳು ಹೋದ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಇದ್ದಂತೆಯೇ ಇರುತ್ತದೆ.

ನಾನಾದರೂ ಇವೊತ್ತಿನ ದಿವಸ ಹೇಳಬೇಕೆಂದರೆ, ಮೂರನೆಯ ಪಂಚವಾರ್ಷಿಕ ಯೋಜನೆಗಳು ಮುಗಿಯುತ್ತಾ ಬಂದರೂ ಕೂಡ ನಾವು ನಮ್ಮ ದೇಶದ ಜನರಿಗೆ ಬೇಕಾದಷ್ಟು ಆಹಾರವಿಲ್ಲದೆ ಆಹಾರದ ವಿಷಯದಲ್ಲಿ ಸ್ವಾವಲಂಬಿಗಳಾಗಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ರಾಜ್ಯ ಪಾಲರ ಭಾಷಣದಲ್ಲೂ ಕೂಡ ಇವೊತ್ತಿನ ದಿವಸ ಅನಾವೃಷ್ಟಿಯಿಂದ ರಾಜ್ಯದಲ್ಲಿ ತುಂಬಾ ಹಾಹಾಕಾರ, ಬರಗಾಲ ತಲೆದೋರಿದೆ, ಸರ್ಕಾರದವರು ಸಾಕಾದಷ್ಟು ಯೋಜನೆಗಳನ್ನು ತೆಗೆದು ಕೊಂಡು ಕಾರ್ಯಗತ ಮಾಡುವುದಕ್ಕೆ ಮುಂದೆ ಹೋಗಿದ್ದಾರೆ ಎಂದು ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲಿ ಮುಖ್ಯವಾಗಿ ಹೇಳುವುದಾದರೆ ಆಹಾರದ ಹೆಚ್ಚು ಉತ್ಪಾದನೆಗಾಗಿ ಸಾಕಾದಷ್ಟು ರೊಕ್ಕವನ್ನು ಖರ್ಚು ಮಾಡಬೇಕೆಂದು ಹೇಳಿದ್ದಾರೆ. ಅಲ್ಲದೇನೇ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಸಹ ಅದಕ್ಕೆ ಹೆಚ್ಚಿನ ಆದ್ಯತೆ ಕೊಟ್ಟಿದ್ದಾರೆ. ಆಹಾರ ಹೆಚ್ಚು ಉತ್ಪಾದನೆ ಮಾಡಬೇಕೆಂಬ ದೃಷ್ಟಿ ಇದ್ದರೆ ನಾನಾದರೂ ಕೇಳುತ್ತೇನೆ, ಸರ್ಕಾರದವರು ಆಹಾರ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಯಾವ ತರಹ ಸೌಲಭ್ಯವನ್ನು ರೈತನಿಗೆ ಒದಗಿಸಿ ಕೊಟ್ಟಿದ್ದೀರಿ? ಒಳ್ಳೆಯ

ಫಾರಂ ಬೀಜಗಳನ್ನು ಬೆಳೆದು ಕೊಟ್ಟಿದ್ದಾರೆಯೇ ? ನೀರಾವರಿ ಭಾವಿಗಳನ್ನು ಅಥವಾ ನೀರಾವರಿಗೆ ಸಂಬಂಧಪಟ್ಟ ಹಾಗೆ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆಯೇ ? ರಾಜ್ಯದಲ್ಲಿ ನೂರು ಇನ್ನೂರು ಸೀಡ್ಸ್ ಫಾರಂಗಳನ್ನು ತೆರೆದಿದ್ದೇವೆಂದು ಹೇಳಿದ್ದಾರೆ. ಮಿಶ್ರತಳಿ ಬೀಜಗಳನ್ನು ಬೆಳೆದಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಹೊರ ಪ್ರಾಂತವಾದ ಕೊಯಮತ್ತೂರಿನಿಂದ ರೊಕ್ಕಕೊಟ್ಟು ತರಿಸುತ್ತಿದ್ದಾರೆ. ಅವರು ಕೂಡ ಇವೊತ್ತು ಕುಶಲತೆಯಿಂದ ಹೆಚ್ಚು ಬೆಳೆಯುತ್ತೇವೆಂದು ಹೇಳುವ ರೈತನಿಗೆ ಸಾಕಷ್ಟು ಬೀಜವನ್ನು ಒದಗಿಸಿಕೊಟ್ಟಿಲ್ಲ. ಸರ್ಕಾರದವರು ಇವೊತ್ತಿನ ದಿವಸ ಬೀಜವನ್ನು ಹಂಚಿದ್ದೇವೆಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ಹೋದ ಸಲ ರಾಜ್ಯಪಾಲರ ಭಾಷಣದಲ್ಲಿ ಅವರು ರಾಸಾಯನಿಕ ಗೊಬ್ಬರ ಕಾರ್ಖಾನೆಯನ್ನು ಮಂಗಳೂರಿನಲ್ಲಿ ಸ್ಥಾಪನೆ ಮಾಡುತ್ತೇವೆಂದು ನಿರೂಪಿಸಿದ್ದರು. ಆದರೆ ಈ ವರ್ಷದ ವರದಿಯಲ್ಲಿ ನೋಡಿದರೆ ಯಾವ ತರಹದ್ದೂ ಕಾಣುವುದಿಲ್ಲ. ಬಹು ಮುಖ್ಯವಾದ ವಿಷಯ ರಾಸಾಯನಿಕ ಗೊಬ್ಬರ ಇವೊತ್ತಿನ ದಿವಸ ಅದಕ್ಕೆ ಹೆಚ್ಚಿನದಾದ ಆದ್ಯತೆ ಕೊಡದೇ ಹೋದರೆ ಯಾವರೀತಿ ರೈತನಿಗೆ ಬೇಕಾದ ಅನುಕೂಲ ಮಾಡುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ರೈತನಿಗೆ ಬೇಕಾದ ಬೀಜ, ಗೊಬ್ಬರ ಅವುಗಳಿಗೆ ಆದ್ಯತೆ ಕೊಟ್ಟು ಪುರವಠೆ ಮಾಡಬೇಕು. ಸೀಡ್ ಫಾರಂಗಳು ಎಲ್ಲೆಲ್ಲಿ ಕೆಲಸ ಮಾಡುತ್ತವೆ. ಅವುಗಳಲ್ಲಿ ಒಳ್ಳೆಯ ಬೀಜಗಳನ್ನು ಬೆಳೆದು ರೈತರಿಗೆ ಹಂಚಬೇಕು. ದೊಡ್ಡ ದೊಡ್ಡ ನೀರಾವರಿ ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದಾರೆ. ಭದ್ರಾ ಡ್ಯಾಮ್‌ಗೆ 31 ಕೋಟಿ ರೂಪಾಯಿ ಖರ್ಚಾಗಿದೆ. ತುಂಗಭದ್ರಾ ಜಲಾಶಯ ಕಟ್ಟಿ ಎಷ್ಟೋ ವರ್ಷವಾಯಿತು. ಈ ನೀರನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಿದ್ದಾರೆಯೇ ? ಆದರೆ ಇವೊತ್ತಿನವರೆಗೆ ಆ ನೀರನ್ನು ಪುರವಠೆ ಮಾಡಿದ್ದಾರೆಯೇ ? ಸರ್ಕಾರದವರು ಈ ಬಗ್ಗೆ ನಿಗಾ ವಹಿಸಿ ಈ ಎರಡು ಪ್ರಾಜೆಕ್ಟುಗಳಲ್ಲಿ ಇರತಕ್ಕಂಥ ನೀರನ್ನು ಸರಿಯಾಗಿ ಉಪಯೋಗಮಾಡಬೇಕು. ತುರ್ತು ಪರಿಸ್ಥಿತಿಯಲ್ಲಿ ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕೆರೆಗಳನ್ನು ಕಟ್ಟುವುದಕ್ಕೆ ಬಹಳ ದಿವಸ ಹಿಡಿಯುತ್ತದೆ. ರೈತರಿಗೆ ತಕಾವಿ ಲೋನುಗಳನ್ನು ಕೊಟ್ಟು ಬಾವಿಗಳನ್ನು ತೆಗೆಸಿ, ನೈಸರ್ಗಿಕವಾಗಿ ಹೊಳೆಗಳು, ಹಳ್ಳಗಳ ಮುಖಾಂತರವಾಗಿ ಬರುವ ನೀರನ್ನು ಲಿಫ್ಟ್ ಇರ್ರಿಗೇಷನ್ ಮುಖಾಂತರವಾಗಿ ನೀರಾವರಿ ಸೌಲಭ್ಯವನ್ನು ಒದಗಿಸಬೇಕು. ಅದರ ಉಪಯೋಗವನ್ನು ರೈತರು ಪಡೆದರೆ ಹೆಚ್ಚಿಗೆ ಆಹಾರ ಧಾನ್ಯ ಬೆಳೆಯುವುದಕ್ಕೆ ಸಾಧ್ಯ. ಆಹಾರದಾನ್ಯದ ಬಗ್ಗೆ ಹೇಳುವುದಾದರೆ ಪ್ರತಿವರ್ಷವೂ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯದೆ ಬೀಳು ಬೀಳುತ್ತದೆ. ಕಾರಣ ಮಳೆಯ ಅನಾವೃಷ್ಟಿ ಮುಖಾಂತರವಾಗಿ ಇವೊತ್ತಿನ ದಿವಸ ಆಹಾರದ ಪರಿಸ್ಥಿತಿ ಕೆಟ್ಟು ಹೋಗುತ್ತದೆ. ಹೆಚ್ಚಿನ ಆಹಾರಧಾನ್ಯವನ್ನು ಹೊರಪ್ರಾಂತಗಳಿಂದ ಅಮದು ಮಾಡಿಕೊಂಡು ಒದಗಿಸಬೇಕಾದ ಪರಿಸ್ಥಿತಿ ಬಂದಿದೆ. ನಮ್ಮ ರಾಜ್ಯದ ಆಹಾರ ಅಭಾವದ ಬಗ್ಗೆ ಒಂದೆರಡು ವಿಷಯಗಳನ್ನು ಆಹಾರದ ಮಂತ್ರಿಗಳು ಹೇಳಿದ್ದಾರೆ. ಇಡ್ಲಿ ತಿನ್ನುವುದು ಕಡಿಮೆ ಮಾಡಬೇಕು. ರಾಜ್ಯದಲ್ಲಿ ಅಕ್ಕಿ ಅಭಾವ ಇರುವುದರಿಂದ ಹೊಟೇಲ್‌ನಲ್ಲಿ ಮುಖ್ಯವಾಗಿ ಇಡ್ಲಿ, ದೋಸೆ ಕಡಿಮೆ ಮಾಡಬೇಕೆಂದು ಆಹಾರದ ಮಂತ್ರಿಗಳು ಹೇಳಿದ್ದಾರೆ. ಅಕ್ಕಿಯನ್ನು ಇಡ್ಲಿ ಮತ್ತು ದೋಸೆಗೆ ಉಪಯೋಗಿಸುತ್ತಾರೆಂದು ಹೇಳುತ್ತಿದ್ದಾರೆ. ಆದರೆ ಈ ಪದಾರ್ಥಗಳಿಗೆ ಉಪಯೋಗಿಸುವ ಅಕ್ಕಿಯೇ ಬೇರೆ, ಅನ್ನ ಮಾಡಲು ಉಪಯೋಗಿಸುವ ಅಕ್ಕಿಯೇ ಬೇರೆ ; ಎಷ್ಟೋ ಜನ ಇಡ್ಲಿ ದೋಸೆಗಳನ್ನು ತಿಂದು ಜೀವನ ಸಾಗಿಸುತ್ತಿದ್ದಾರೆ. ನಮಗೆ ಅಕ್ಕಿ ಅಭಾವವಿದೆ ಎನ್ನುವ ಒಂದೇ ದೃಷ್ಟಿಯಿಂದ ಹೋಟಲುಗಳಲ್ಲಿ ಇಡ್ಲಿ ಮತ್ತು ದೋಸೆಯ ತಯಾರಿಕೆಯನ್ನು ನಿಷೇಧ ಮಾಡುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗಿದೆ. ಈ ಆಜ್ಞೆಯನ್ನು ಸರ್ಕಾರ ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅಕ್ಕಿ ಅಭಾವದಿಂದ ಇಡ್ಲಿ, ದೋಸೆ ಮಾಡುವುದನ್ನು ನಿಷೇಧಿಸುವಾಗ ಮುಂದೆ ಗೋಧಿಯ ಅಭಾವವಾಯಿತು ಎಂದು ಗೋಧಿಗೆ ಸಂಬಂಧಪಟ್ಟಂತೆ ಎಲ್ಲ ಪದಾರ್ಥಗಳನ್ನೂ ನಿಷೇಧಿಸಬಹುದು. ಸರ್ಕಾರದವರು ಈ ರೀತಿಯಾದ ಧೋರಣೆಯನ್ನು ಇಟ್ಟುಕೊಳ್ಳದೆ ಮುಖ್ಯವಾಗಿ ಜನರಿಗೆ ಯಾವರೀತಿ ಆಹಾರ ಧಾನ್ಯಗಳನ್ನು ಒದಗಿಸಬೇಕೆಂದು ಯೋಚನೆ ಮಾಡಬೇಕು. ಕೇವಲ ಇಡ್ಲಿ ದೋಸೆಗಳ ತಯಾರಿಕೆಯನ್ನು ನಿಷೇಧಿಸುವುದರಿಂದ ಅಥವಾ ಉಪವಾಸ ಮಾಡುವುದರಿಂದ ಯಾವ ಪ್ರಯೋಜನವೂ ಆಗಲಾರದು. ಆಹಾರ ಧಾನ್ಯದ ಕೊರತೆಯ ಸಲುವಾಗಿ ಇಡ್ಲಿ ದೋಸೆಗಳನ್ನು ನಿಷೇಧ ಮಾಡಿದ್ದಾರೆ. ಅಂಥ ಆಜ್ಞೆಗಳನ್ನು ಮಾಡದೆ ಹೆಚ್ಚಿನ ರೀತಿಯಲ್ಲಿ ಆಹಾರ ಧಾನ್ಯಗಳನ್ನು ಬೆಳೆಯತಕ್ಕ ಯೋಜನೆಯನ್ನು ಇಟ್ಟುಕೊಂಡು ಅದನ್ನು ಪುರವಠೆ ಮಾಡಬೇಕೆಂದು ಈ ಸಮಯದಲ್ಲಿ ಹೇಳುತ್ತೇನೆ.

5-00 P.M.

ಆರೋಗ್ಯದ ವಿಚಾರವಾಗಿ, ಕುಷ್ಟರೋಗ ಹೆಚ್ಚಾಗಿ ಇದ್ದದ್ದರಿಂದ ಅದನ್ನು ನಿರ್ಮೂಲ ಮಾಡಲು ಕ್ರಮಗಳನ್ನು ಕೈಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಈಚೆಗೆ ಹೃದಯ ವಿಕಾರದಿಂದ ಸಾಕಷ್ಟು ಜನರು ಸಾಯುತ್ತಿದ್ದಾರೆ. ಅದೇ ರೀತಿ 'ಕ್ಯಾನ್ಸರ್' ರೋಗದಿಂದಲೂ ಜನ ಸಾಯು

(ಶ್ರೀ ಸಿದ್ದಯ್ಯ ಕಾಶೀಮಠ್)

ತ್ತಿದ್ದಾರೆ. ಇವೆರಡು ರೋಗಗಳಿಗೂ ನಮ್ಮ ರಾಜ್ಯದಲ್ಲಿ ಆಸ್ಪತ್ರೆಗಳಿಲ್ಲ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮಾತ್ರ ಒಂದೆರಡು ಆಸ್ಪತ್ರೆಗಳಿದ್ದರೂ ಅದರಿಂದ ಹೆಚ್ಚಿನ ಪ್ರಯೋಜನವಾಗುತ್ತಿಲ್ಲ. ಪ್ಲೇಗ್, ಕಾಲರಾ, ಮಲೇರಿಯಾ ಮುಂತಾದ ರೋಗಗಳನ್ನು ತಡೆಗಟ್ಟಿ ನಿವಾರಿಸಲು ಯಾವರೀತಿ ಕ್ರಮಗಳನ್ನು ತೆಗೆದುಕೊಳ್ಳಲಾಯಿತೋ ಅದೇ ರೀತಿ ಹೃದಯ ವಿಕಾರ ಮತ್ತು ಕ್ಯಾನ್ಸರ್ ರೋಗದಿಂದ ಸಾಯುವ ಜನರಿಗೆ ಚಿಕಿತ್ಸೆ ನೀಡಲು ಮತ್ತು ಅವುಗಳ ನಿವಾರಣೆಗೆ ಪ್ರಯತ್ನಮಾಡಬೇಕು.

ಎಲ್ಲ ಆಸ್ಪತ್ರೆಗಳನ್ನೂ ನೋಡಿದಾಗ ಡಾಕ್ಟರುಗಳ ಕೊರತೆ ಇದೆ. ಡಾಕ್ಟರುಗಳ ಕೊರತೆಯನ್ನು ನೀಗಲು ಪ್ರಯತ್ನ ಮಾಡಬೇಕು. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಕೊಡತಕ್ಕ ಆಹಾರದ ಪ್ರಮಾಣ ಬಹಳ ಕಡಮೆ ಇದೆ. ಆ ಪ್ರಮಾಣವನ್ನು ಹೆಚ್ಚಿಸಿದರೆ ತೀವ್ರಗತಿಯಿಂದ ರೋಗಿಗಳು ಗುಣವಾಗುವುದಕ್ಕೆ ಹೆಚ್ಚಿನ ರೀತಿಯಲ್ಲಿ ಸಹಾಯ ಆಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಹಣ ಖರ್ಚು ಮಾಡಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆದಿದ್ದಾರೆ. ಆದರೆ ಅಲ್ಲಿಗೆ ಔಷಧಿಗಳನ್ನು ಸರಿಯಾಗಿ ಒದಗಿಸುತ್ತಿಲ್ಲ. ಡಾಕ್ಟರುಗಳಿಲ್ಲದೆ ಇದ್ದರೂ ಕೂಡ ಔಷಧಿಗಳಿದ್ದರೆ ಅಲ್ಲಿರುವ ಕಾಂಪೌಂಡರ್ ಔಷಧಿಯನ್ನು ಕೊಟ್ಟು ರೋಗವನ್ನು ಗುಣ ಪಡಿಸುವುದಕ್ಕೆ ಸಾಧ್ಯವಾದೀತು. ಸರ್ಕಾರದವರು ಈ ದಿಸೆಯಲ್ಲಿ ಗಮನ ಕೊಡಬೇಕು.

ರಾಜ್ಯಪಾಲರ ಭಾಷಣದಲ್ಲಿ 11 ವಿಧೇಯಕಗಳನ್ನು ಸಭೆಯ ಮುಂದೆ ತರಲಾಗುವುದೆಂದೂ ಅಭಿವೃದ್ಧಿ ಕಾರ್ಯಗಳಿಗೆ ಬೇಕಾಗುವ ಹಣವನ್ನು ಹೊಂದಿಸಿಕೊಳ್ಳಲು ಈ ರೀತಿ ಮಾಡಲಾಗುವುದೆಂದೂ ಹೇಳಿದ್ದಾರೆ. ಮುನಿಸಿಪಲ್ ಆಡಳಿತದ ಸಲುವಾಗಿ ದೊಡ್ಡ ದೊಡ್ಡ ಕಮಿಟಿಗಳನ್ನು ಮಾಡುವುದು, ಕಮಿಷನರುಗಳನ್ನು ನೇಮಕ ಮಾಡುವುದು ಪರಿಪಾಠವಾಗಿದೆ. ರಾಜ್ಯಪಾಲರ ಭಾಷಣದಲ್ಲಿ :

> "The Mysore Town and Country Planning Act was brought into force with effect from the 15th January 1965. For implementing the various provisions, of this Act, Government have constituted a Town Planning Board for the State."

ಎಂದು ಹೇಳಿದ್ದಾರೆ? ಏಕೆ ಟೌನ್ ಪ್ಲಾನಿಂಗ್ ಬೋರ್ಡ್ ಮಾಡಬೇಕು ಎಂದು ಕೇಳುತ್ತೇನೆ. ಇದಕ್ಕೆ ಖರ್ಚು ಮಾಡತಕ್ಕ ಹಣವನ್ನು ಉಳಿಸಿದರೆ ಅಭಿವೃದ್ಧಿ ಕಾರ್ಯಗಳಿಗೆ ಅದನ್ನು ಉಪಯೋಗ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ರಸ್ತೆ ಸಾರಿಗೆ ಬಗ್ಗೆ ಕೆಲವು ವಿಷಯಗಳನ್ನು ಈ ಸಭೆಯಲ್ಲಿ ಹೇಳಬೇಕಾಗಿದೆ. ಕಾರ್ಪೊರೇಷನ್‌ನಲ್ಲಿ ಪ್ರತಿವರ್ಷವೂ ಲುಕ್ಸಾನು ಆಗತಕ್ಕ ಸಂಭವವೇ ಇದೆ. ಖಾಸಗಿಯವರು ಇದೇ ಉದ್ಯಮದಿಂದ ಹೆಚ್ಚು ಹೆಚ್ಚು ಉತ್ಪನ್ನವನ್ನು ತೆಗೆದುಕೊಳ್ಳುತ್ತಿದ್ದಾರೆ. ಇವೆರಡನ್ನೂ ತುಲನಾತ್ಮಕವಾಗಿ ನೋಡಿದರೆ ಸರ್ಕಾರದವರು ನಡೆಸತಕ್ಕ ಬಸ್ಸುಗಳಲ್ಲಿ ಪ್ರಯಾಣದ ದರ ಹೆಚ್ಚಾಗಿದ್ದರೂ ನಷ್ಟ ಸಂಭವಿಸುತ್ತಿದ್ದು, ಖಾಸಗಿಯವರ ದರಗಳು ಕಡಮೆ ಇದ್ದು ಅದರಿಂದ ಹೆಚ್ಚು ಉತ್ಪನ್ನವನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ರೀತಿ ಇರುವಾಗ ಕಾರ್ಪೊರೇಷನ್ ಯಾವ ರೀತಿ ಕಾರ್ಯ ನಡೆಸಬೇಕು ಎನ್ನುವುದನ್ನು ವಿಚಾರ ಮಾಡಬೇಕು. ಕೋಟಿಗಟ್ಟಲೆ ರೊಕ್ಕ ಕೊಟ್ಟು ಈ ರೀತಿ ಮಾಡುವುದಕ್ಕೆ ಬದಲಾಗಿ ರಸ್ತೆ ಸಾರಿಗೆ ಉದ್ಯಮವನ್ನು ಖಾಸಗಿಯವರಿಗೆ ಕೊಟ್ಟು ಅದರಿಂದ ಬರುವ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗ ಮಾಡುವುದಕ್ಕೆ ಸಾಧ್ಯ ಎಂದು ಹೇಳಬಯಸುತ್ತೇನೆ.

ಪ್ರಾಥಮಿಕ ಶಾಲೆಗಳ ವಿಚಾರವಾಗಿ ಹೇಳಬೇಕಾದರೆ, ಎಲ್ಲಿ ನೋಡಿದರೂ ಹುಡುಗರ ಸಂಖ್ಯೆ ಹೆಚ್ಚಾಗುತ್ತಿದೆ. ಅವರಿಗೆ ಕೂಡಲಿಕ್ಕೆ ಜಾಗವಿಲ್ಲದ ಪರಿಸ್ಥಿತಿ ಒದಗಿದೆ. ಅವರಿಗೆ ಕಲಿಸುವುದಕ್ಕೆ ಶಿಕ್ಷಕರ ಸಂಖ್ಯೆಯೂ ಕಡಮೆ ಇದೆ. ಪ್ರಾಥಮಿಕ ಶಾಲೆಗಳಲ್ಲಿ ಮಧ್ಯಾಹ್ನದ ಉಪಹಾರವನ್ನು ಒದಗಿಸಲು ಪರದೇಶಗಳವರು ಕೊಟ್ಟಿರತಕ್ಕ ಹಾಲಿನ ಪುಡಿ, ಹಿಟ್ಟು, ರವೆ ಇವುಗಳನ್ನು ಉಪಯೋಗಿಸುತ್ತಿದ್ದಾರೆ. ಇದರಿಂದಾಗಿ ಶಾಲೆಗಳಲ್ಲಿ ಅರ್ಧ ಸಮಯ ಹಾಳಾಗುತ್ತಿದೆ. ಎಷ್ಟೋ ಕಡೆಗಳಲ್ಲಿ ಕೊಡತಕ್ಕ ಹಾಲಿನ ಪುಡಿ, ರವೆ, ಇವು ಒಳ್ಳೆಯ ರೀತಿಯಲ್ಲಿಲ್ಲ. ಅಲ್ಲದೆ ಇದರ ವಿತರಣೆ ಎಷ್ಟೋ ಶಾಲೆಗಳಲ್ಲಿ ಸರಿಯಾಗಿ ನಡೆಯುತ್ತಿಲ್ಲ ಧಾರ್ಮಿಕವಾಗಿ ಕೊಟ್ಟಿರತಕ್ಕದ್ದನ್ನು ಉಪಯೋಗಿಸಿ ನಮ್ಮ ಮುಂದಿನ ಪೀಳಿಗೆಯನ್ನು ಅಭಿವೃದ್ಧಿ ಮಾಡುವುದಕ್ಕಿಂತ ನಮಗೆ ಇರುವುದನ್ನೇ ಅವರಿಗೆ ಕೊಟ್ಟು ಅವರನ್ನು ಸರಿಯಾದ ರೀತಿಯಲ್ಲಿ ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು. ಆದ್ದರಿಂದ ಶಾಲೆಗಳಲ್ಲಿ ಈಗ ಇಟ್ಟಿರುವ ಮಧ್ಯಾಹ್ನದ ಉಪಹಾರ ಪದ್ಧತಿಯನ್ನು ತೆಗೆದು ಹಾಕಿ ಅದಕ್ಕಾಗಿ

ಪರದೇಶಗಳಿಂದ ಬರುತ್ತಿರುವ ಉಚಿತ ಪದಾರ್ಥಗಳನ್ನು ಬೇರೆ ಕಡೆಗೆ ಅಂದರೆ ಕಾರ್ಮಿಕರು ವಾಸ ಮಾಡುವ ಸ್ಥಳ ಮತ್ತು ಇನ್ನು ಎಲ್ಲಿ ಸಾಧ್ಯವೋ ಅಲ್ಲಿ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಶ್ರೀ ಎಸ್. ಶಿವಪ್ಪನವರು ಸಲಹೆ ಮಾಡಿದ ಪ್ರಕಾರ ಉಚಿತವಾಗಿ ಬರುತ್ತಿರುವ ಈ ಆಹಾರ ಪದಾರ್ಥಗಳನ್ನು ಬರಗಾಲ ಪೀಡಿತ ಪ್ರದೇಶಗಳಿಗೆ ಕಳಿಸಿ ಆ ಜನರಿಗೆ ಗಂಜಿ ಕೊಡಲು ಉಪಯೋಗ ಮಾಡಬೇಕು.

ಪ್ರಾಥಮಿಕ ಶಾಲೆಗಳು ಮಕ್ಕಳ ಬುನಾದಿಯಾಗಿರುವುದರಿಂದ ಅವುಗಳಲ್ಲಿ ಸರಿಯಾದ ರೀತಿ ಶಿಕ್ಷಣ ಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ನಮ್ಮ ವಿದ್ಯಾ ಮಂತ್ರಿಗಳು ಪ್ರಶ್ನೋತ್ತರ ಕಾಲದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಸ್ಕೂಲ್‌ಬೋರ್ಡ್ ಮುಖಾಂತರ ಶಾಲೆಗಳನ್ನು ನಡೆಸುತ್ತೇವೆ ಎಂದು ಹೇಳಿದರು. ಹಾಗೆ ನಡೆಸುವುದು ಉಚಿತವಿಲ್ಲದೆ ಇರುವುದರಿಂದ ಆದಷ್ಟುಮಟ್ಟಿಗೆ ಈಗ ಇರುವಂಥ ಸ್ಕೂಲ್ ಬೋರ್ಡ್‌ಗಳನ್ನು ತೆಗೆದು ಅಲ್ಲಿರುವ ಶಾಲೆಗಳನ್ನು ಸರ್ಕಾರವೇ ವಹಿಸಿಕೊಂಡು ಏನೇನು ಸೌಕರ್ಯ ಬೇಕೋ ಅದನ್ನೇ ಕೊಟ್ಟು ಸರಿಯಾಗಿ ಹುಡುಗರಿಗೆ ಕಲಿಸುವ ವ್ಯವಸ್ಥೆ ಮಾಡಿ ನಮ್ಮ ಮಕ್ಕಳು ಸರಿಯಾದ ರೀತಿಯಲ್ಲಿ ಓದುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಕೈಗಾರಿಕೆಗಳ ಬಗ್ಗೆ ಹೇಳಬೇಕಾದರೆ ಸಾಕಷ್ಟು ವಿದ್ಯುಚ್ಛಕ್ತಿ ನಮಗೆ ಪುರವಣಿ ಆಗುತ್ತಿರುವುದು ಶರಾವತಿಯಿಂದ. ಸಣ್ಣ ಪ್ರಮಾಣದ ಕೈಕಾರಿಕೆಗಳಿಗೆ ಸರ್ಕಾರದವರು ನಿಗದಿ ಮಾಡಿದ ಹಣ ಸರಿಯಾಗಿ ದೊರೆಯದೆ ಆ ಹಣ ಲ್ಯಾಪ್ಸ್ ಆಗತಕ್ಕ ಪರಿಸ್ಥಿತಿ ಇದೆ. ಸರ್ಕಾರ ಯೋಗ್ಯ ರೀತಿಯಿಂದ ಚೌಕಸಿ ಮಾಡಿ ಅದನ್ನು ಅಮಲನಲ್ಲಿ ತರುವಂತೆ ಮಾಡಬೇಕು.

ವಿದ್ಯುಚ್ಛಕ್ತಿಯ ಬಗ್ಗೆ ಹೇಳಬೇಕಾದರೆ ಒಂದು ಪ್ಲಾನ್ ಇಲ್ಲದೆ, ಅಂದಾಜು ಮಾಡದೆ ತಮಗೆ ಸಿಕ್ಕ ಹಾಗೆ ವಿದ್ಯುತ್ತನ್ನು ಕೊಡುವುದು, ಪಂಪ್‌ಸೆಟ್‌ಗಳಿಗೆ ವಿದುತ್ತನ್ನು ಕೊಡುವುದು ಪದ್ಧತಿಯಾಗಿದೆ. ವಿದ್ಯುತ್ತನ್ನು ಕೊಡಲು ಬೇಕಾದ ಸಲಕರಣೆಗಳು ಸಾಕಷ್ಟು ಇಲ್ಲದೆ ಇರುವುದರಿಂದ ತೊಂದರೆಯಾಗಿದೆ. ಆದ್ದರಿಂದ ಪ್ರತಿ ತಾಲ್ಲೂಕಿಗೂ ಒಂದು ಯೋಜನೆಯನ್ನು ಮಾಡಿಕೊಂಡು ಆ ಪ್ರಕಾರ ಕೆಲಸ ಮಾಡುವಂತೆ ಆ ದೇಶವನ್ನು ಬೋರ್ಡಿಗೆ ಸರ್ಕಾರದವರು ಕೊಡಬೇಕು. ಎಲ್ಲೆಲ್ಲಿ ನೀರಾವರಿ ಸೌಕರ್ಯಗಳಿವೆ ಅಲ್ಲಿ ತಕ್ಷಣ ವಿದ್ಯುತ್ತನ್ನು ಪುರೋಠಿ ಮಾಡಲು ವ್ಯವಸ್ಥೆ ಮಾಡಬೇಕು. ಸರ್ಕಾರದವರು ಬಡ ರೈತರಿಗೆ ಉಪಯೋಗವಾಗುವಂತೆ ವಿದ್ಯುತ್ತನ್ನು ಕ್ಷಿಪ್ರದಲ್ಲಿ ಒದಗಿಸತಕ್ಕ ಆ ದೇಶವನ್ನು ಬೋರ್ಡಿನವರಿಗೆ ಕೊಡಬೇಕು ಮತ್ತು ಸರಿಯಾದ ಒಂದು ಯೋಜನೆ ಹಾಕಿಕೊಂಡು, ಅದನ್ನು ಸರಿಯಾಗಿ ಅಳವಡಿಸಿಕೊಂಡು ವಿದ್ಯುತ್ತನ್ನು ಪುರೋಠಿ ಮಾಡಬೇಕು ಎಂದು ನಾನು ಈ ಸಮಯದಲ್ಲಿ ಹೇಳುತ್ತೇನೆ. ಈ ಬಗ್ಗೆ ಕಟ್ಟುನಿಟ್ಟಾದ ಧೋರಣೆಯನ್ನನುಸರಿಸಿ ಎಲ್ಲಾ ತಾಲ್ಲೂಕುಗಳಲ್ಲೂ ಸರ್ವೆ ಮಾಡಿ ಎಲ್ಲ ಕಡೆಗೂ ವಿದ್ಯುಚ್ಛಕ್ತಿಯನ್ನೊದಗಿಸಲು ವ್ಯವಸ್ಥೆಮಾಡಬೇಕು.

ಕೊನೆಯದಾಗಿ ಒಂದೇ ಒಂದು ವಿಚಾರ. ಈಗಾಗಲೆ ಪೋಲೀಸ್ ಕ್ವಾರ್ಟರ್ಸ್ ಕಟ್ಟಿಸುತ್ತಿದ್ದಾರೆ. ಅದು ಸಂತೋಷದ ಸಂಗತಿ. ಅದೇ ರೀತಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಿಗೂ ಕೂಡ ಒಂದು ಯೋಜನೆಮಾಡಿ ಅವರಿಗೆ ವಸತಿಯನ್ನೊದಗಿಸಬೇಕು. ಹಳ್ಳಿಗಳಲ್ಲಿ ಮನೆಗಳ ಅಭಾವವಿರುವುದರಿಂದ ಆದಷ್ಟು ಬೇಗ ಶಿಕ್ಷಕರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ನಮ್ಮ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸಲು ಶ್ರೀಮಾನ್ ಮಂಜಯ್ಯಶೆಟ್ಟರು ತಂದಿರುವ ನಿರ್ಣಯಕ್ಕೆ ಸಂಪೂರ್ಣವಾಗಿ ಬೆಂಬಲ ಕೊಡುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪಿಸಬೇಕೆಂದಿದ್ದೇನೆ.

ಈ ಭಾಷಣದಲ್ಲಿ ಯೋಜನಾ ವಿಷಯ ಪ್ರಸ್ತಾಪಿಸಲ್ಪಟ್ಟಿದೆ, ಹಿಂದೆ ಕೂಡ ಬಹಳವಾಗಿ ಯೋಜನೆಗಾಗಿ ಖರ್ಚುಮಾಡಿದ್ದಾರೆ, ಮುಂದೆ ಬರುವ ಯೋಜನೆಗಳಿಗೆ ಎಷ್ಟು ಹಣ ಒದಗಿಸಿ ಜನರಿಗೆ ಸೌಕರ್ಯವನ್ನುಂಟುಮಾಡಿಕೊಡಬೇಕೆಂದಿದ್ದಾರೆಂಬುದನ್ನು ತಿಳಿಸಿದ್ದಾರೆ. ಈಗ ನಾಲ್ಕನೆಯ ಯೋಜನೆಯಲ್ಲಿ ಮೈಸೂರಿಗೆ 537 ಕೋಟಿ ರೂಪಾಯಿಗಳನ್ನೊದಗಿಸುವುದಾಗಿ ಗೊತ್ತು ಮಾಡಿದ್ದಾರೆ. ಮುಖ್ಯವಾಗಿ ವ್ಯವಸಾಯಕ್ಕೆ, ಆಹಾರ ಪದಾರ್ಥಗಳನ್ನು ಹೆಚ್ಚಿಸುವ ಯೋಜನೆಗಳಿಗೆ ಪಂಚವಾರ್ಷಿಕ ಯೋಜನೆಯ ಮೊಬಲಗಿನಲ್ಲಿ ಅರ್ಧಕ್ಕಿಂತ ಹೆಚ್ಚು ಹಣವನ್ನು ಒದಗಿಸಿರುವುದಾಗಿ ತಿಳಿಸಿದ್ದಾರೆ. ಇದು ಬಹಳಮಟ್ಟಿಗೆ ಹಾರ್ದಿಕವಾಗಿ ಸ್ವಾಗತಿಸುವ ವಿಚಾರ. ಏಕೆಂದರೆ ದೇಶದಗಿ ಈಗ ನಾವೆಲ್ಲಾ ನೋಡಿರುವ ಹಾಗೆ ಆಹಾರದ ಕೊರತೆ ಇದೆ. ಎಲ್ಲಿ ನೋಡಿದರೂ ಪ್ರಕೃತಿ ವಿಕೋಪದಿಂದ ಕೆರೆ, ಹರಿಯುವ ನದಿಗಳು, ಬಾವಿಗಳು ಮುಂತಾದುವುಗಳಲ್ಲಿ ನೀರೇ ಇಲ್ಲದೆ ಬತ್ತಿಹೋಗಿ ದನಗಳು ಮತ್ತು ಜನಗಳು ಬಹಳವಾಗಿ ಕಷ್ಟಪಡುತ್ತಿದ್ದಾರೆ. ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಹೊರದೇಶಗಳಿಂದ ಆಮದುಮಾಡಿಕೊಂಡು ದೇಶದಲ್ಲಿ ಹಂಚುತ್ತಿದ್ದು ಅದರಿಂದ ಆಹಾರದ ಕೊರತೆಯನ್ನು ನೀಗಿ ಜನರಿಗೆ ಸಮಾಧಾನ ಮಾಡುತ್ತಿದ್ದಾರೆ. ಅದಕ್ಕೆ ಬದಲಾಗಿ ನಮ್ಮ ದೇಶದಲ್ಲೇ

(ಶ್ರೀ ಆರ್. ಮುನಿಸ್ವಾಮಯ್ಯ)

ಹೆಚ್ಚಾಗಿ ಬೆಳೆದು ಹಂಚುವುದು ಒಳ್ಳೆಯದು, ಅದಕ್ಕಾಗಿ ಗೊಬ್ಬರ, ಬೀಜ, ಹಣ ಸಹಾಯ, ದನ ಕರುಗಳು ಮುಂತಾದುವನ್ನು ಸಾಕಷ್ಟು ಒದಗಿಸಬೇಕು. ಇದರ ಬಗ್ಗೆ ಹೆಚ್ಚಾಗಿ ಯೋಚನೆಮಾಡಬೇಕು.

ಈಗ ಸಣ್ಣ ನೀರಾವರಿ ವಿಷಯ ಯೋಚನೆಮಾಡುವುದಾದರೆ ಮಾಸ್ಟರ್ ಪ್ರಾಜೆಕ್ಟ್ ಮಾಡಿದ್ದಾರೆ. ಜನರಿಗೆ ಸಾಕಾದಷ್ಟು ಹಣ ಸೌಕರ್ಯ ದೊರೆಯಬೇಕು. ಒಂದು ತಾಲ್ಲೂಕಿಗೆ ಕೇವಲ 20 ಬಾವಿಗಳನ್ನೊದಗಿಸಿದರೆ ಅದರಿಂದ ಎಷ್ಟು ನೀರು ದೊರೆಯಬಹುದು, ಎಷ್ಟು ರೈತರಿಗೆ ಸಹಾಯವಾಗಬಹುದು ಎಂಬುದನ್ನು ಯೋಚನೆಮಾಡಬೇಕು. ರೈತರಿಗೆ ಸಾಕಾದಷ್ಟು ಸಹಾಯ ನೀಡದಿದ್ದರೆ ಆಹಾರದ ಉತ್ಪತ್ತಿ ಹೇಗೆ ಹೆಚ್ಚುತ್ತದೆ ಎಂಬುದನ್ನು ಯೋಚನೆಮಾಡಬೇಕು. ಆಹಾರದ ಉತ್ಪನ್ನವನ್ನು ಹೆಚ್ಚಿಸುವುದಾಗಿ ಬರವಣಿಗೆಯಲ್ಲಿ ನಮೂದಿಸಿದರೆ, ಪತ್ರಿಕೆಗಳಲ್ಲಿ ಹಾಕಿಸಿದರೆ, ರೈತರಿಗೆ ಅದಕ್ಕಾಗಿ ಬೇಕಾದಷ್ಟು ಅನುಕೂಲಮಾಡುವುದಾಗಿ ಭಾಷಣ ಮಾಡಿದರೆ ಉತ್ಪತ್ತಿ ಹೇಗಾಗುವುದು ? ಆದುದರಿಂದ ಈ ವಿಷಯದಲ್ಲಿ ತಾತ್ವಿಕವಾಗಿರುವುದನ್ನು ಕೃತಿಗಿಳಿಸಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನು ಜನಾರೋಗ್ಯ ವಿಚಾರ. ಹಳೆಯ ಮೈಸೂರು ಭಾಗದಲ್ಲಿ 5 ಅಥವ 10 ಮೈಲಿಗಳಿಗೆ ಒಂದು ಆಸ್ಪತ್ರೆ ಇದೆ, ಆದರೆ ಡಾಕ್ಟರುಗಳಿಲ್ಲ. ಮತ್ತು ಅಲ್ಲಿ ಔಷಧಿಗಳಿಲ್ಲ. ಈ ರೀತಿ ಆಸ್ಪತ್ರೆಗಳು ನಡೆಯುತ್ತಿವೆ. ಇದು ಸರಿಯಲ್ಲ, ಅಲ್ಲಿಗೆ ವೈದ್ಯರನ್ನೊದಗಿಸಬೇಕು ಎಂದು ಸಲಹೆಮಾಡುತ್ತೇನೆ.

ವಿದ್ಯಾಭ್ಯಾಸದ ವಿಷಯ ನೋಡಿದರೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿದೆ. ಪಾಠಶಾಲೆಗಳೂ ಹೆಚ್ಚುತ್ತಿವೆ. ಆದರೆ ರಿಜಿಸ್ಟರುಗಳಲ್ಲಿ ಮಾತ್ರ ಹೆಸರಿರುತ್ತದೆ, ಹುಡುಗರು ಹಾಜರಿರುವುದಿಲ್ಲ. ಲೆಕ್ಕಕ್ಕೆ ಇಷ್ಟು ಹುಡುಗರೆಂದು ರಿಜಿಸ್ಟರಿನಲ್ಲಿರುವುದೇ ಹೊರತು ಸರಿಯಾಗಿ ಗ್ರಾಮಾಂತರಗಳಲ್ಲಿ ವಿದ್ಯಾಭ್ಯಾಸ ನಡೆಯುತ್ತಿಲ್ಲ; ಪಟ್ಟಣಗಳಲ್ಲಿ ಸರಿಯಾಗಿರಬಹುದು. ಆದರೆ ಪ್ರಶ್ನೋತ್ತರಗಳ ಕಾಲದಲ್ಲಿ ಉತ್ತರ ಕೊಟ್ಟಹಾಗೆ ಈಗ 50 ವಿದ್ಯಾರ್ಥಿಗಳಿಗೆ ಒಬ್ಬ ಉಪಾಧ್ಯಾಯರಿದ್ದಾರೆ. ಹಾಗಿರುವಾಗ ಉಪಾಧ್ಯಾಯರು ಒಬ್ಬೊಬ್ಬ ವಿದ್ಯಾರ್ಥಿಗೆ ಅರ್ಧ ನಿಮಿಷ ಕೂಡ ಗಮನ ಕೊಡಲು ಸಾಧ್ಯವಿಲ್ಲ. ಆದುದರಿಂದ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸಬೇಕು. ಇಲ್ಲದಿದ್ದರೆ ವಿದ್ಯಾಭ್ಯಾಸದ ಮಟ್ಟ ಕಡಮೆಯಾಗಿ ಸಾಕಾದಷ್ಟು ಪ್ರಯೋಜನವಾಗುವುದಿಲ್ಲ. ಹೀಗಾದರೆ ಮುಂದೆ ತೊಂದರೆಯಾಗುತ್ತದೆ. ಉಪಾಧ್ಯಾಯ ವೃತ್ತಿಗೆ ಅನೇಕರು ಬರುವುದಿಲ್ಲ, ಬರುವವರಿಗೆ ತರಬೇತಿ ಇರುವುದಿಲ್ಲ. ಎಸ್. ಎಸ್. ಎಲ್. ಸಿ. ಆದವರಿಗೆ ಕೇವಲ 80 ರೂಪಾಯಿ ವೇತನ ಕೊಡುವುದರಿಂದ ಉಪಾಧ್ಯಾಯರ ವೃತ್ತಿ ಆಕರ್ಷಕವಾಗಿಲ್ಲ. ಜನರು ಹೆಚ್ಚಾಗಿ ಈ ವೃತ್ತಿಗೆ ಬರಬೇಕಾದರೆ ಎಸ್. ಎಸ್. ಎಲ್. ಸಿ. ಆಗದಿರುವವರನ್ನೂ ಕೂಡ ನೇಮಕಮಾಡಿಕೊಳ್ಳುವಂತೆ ವ್ಯವಸ್ಥೆಮಾಡಬೇಕು. ಅಂಥವರನ್ನು 60 ರೂಪಾಯಿಗಳ ತಲಬಿನ ಮೇಲೆ ನೇಮಕಮಾಡಿ ತರಬೇತಿ ಕೊಡಬೇಕು.

ಇನ್ನು ಹಿಂದುಳಿದ ವರ್ಗಗಳ ಕಲ್ಯಾಣ ನೋಡಿದರೆ ಯೋಜನೆಯಲ್ಲಿ ಚೆನ್ನಾಗಿ ರೂಪಿತವಾಗಿದ್ದರೂ ವ್ಯಾಪಕವಾಗಿ ಉತ್ತೇಜನ ಪೂರ್ವಕವಾಗಿ ಕೆಲಸ ನಡೆಸುತ್ತಿಲ್ಲ. ಸಾಮಾಜಿಕ ದೋಷವಾದ ಅಸ್ಪೃಶ್ಯತೆಯ ನಿವಾರಣಾರ್ಥವಾಗಿ ಗ್ರಾಮ ಪಂಚಾಯತಿಗಳಲ್ಲಿ ಬಹುಮಾನಸ್ಪರ್ಧಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಎಂದು ರಾಜ್ಯಪಾಲರು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಇದು ಸಂತೋಷದ ವಿಷಯ. ಹರಿಜನ ವಿದ್ಯಾರ್ಥಿ ನಿಲಯಗಳಲ್ಲಿ ಇತರ ಪಂಗಡದವರಿಗೂ ಕೊಂಚ ಅವಕಾಶ ಕೊಟ್ಟಿದ್ದಾರೆ. ಇದರಿಂದ ಹರಿಜನರಿಗಿದ್ದ ಸೌಕರ್ಯವನ್ನು ಮೊಟಕು ಮಾಡಿದಂತಾಗಿದೆ. ಹರಿಜನರಿಗೇನು ಸೌಲಭ್ಯ ಒದಗಿಸಬೇಕೆಂಬುದು ರಾಜ್ಯಾಂಗದಲ್ಲಿ ನಮೂದಾಗಿದೆ. ಆದರೆ ಹರಿಜನರ ವಿದ್ಯಾರ್ಥಿನಿಲಯಗಳ ವಿಷಯದಲ್ಲಿ ಅದರಂತೆ ನಡೆಯುತ್ತಿಲ್ಲ ಎಂಬ ಶಂಕೆ ಇದೆ. ಆದುದರಿಂದ ಇದನ್ನು ಗಮನಿಸಿ ಇದುವರೆಗೆ ಅವರಿಗೆ ಕೊಡುತ್ತಿದ್ದಂತೆ ತಕ್ಕ ಸೌಲಭ್ಯಗಳನ್ನೊದಗಿಸಬೇಕೆಂದು ಸಲಹೆಮಾಡುತ್ತೇನೆ.

ಶಿಕ್ಷಣ ಇಲಾಖೆ ನೋಡಿದರೆ ತಾಂತ್ರಿಕ ಶಿಕ್ಷಣರಂಗದಲ್ಲಿ ಅನೇಕ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಲ್ಲಿ ಸಂಬಂಧಪಟ್ಟ ಪಾಠಶಾಲೆಗಳನ್ನು ಸ್ಥಾಪಿಸಿದ್ದಾರೆ. ಆದರೆ ಅಲ್ಲಿ ಉಪಾಧ್ಯಾಯರಿಲ್ಲ, ಸರಿಯಾಗಿ ಕೆಲಸ ನಡೆಯುತ್ತಿಲ್ಲ ಎಂಬ ದೂರಿದೆ. ಆದುದರಿಂದ ಆ ಕಡೆ ಸರಿಯಾಗಿ ಗಮನ ಕೊಡಬೇಕು. ಎನ್. ಸಿ. ಸಿ. ಮುಂತಾದುವುಗಳಿಗೆ ಪ್ರೋತ್ಸಾಹ ಕೊಡುವಂತೆ ಸ್ಕೌಟ್ಸ್ ಮತ್ತು ಗೈಡುಗಳನ್ನು ತಯಾರುಮಾಡಿ ದೇಶಸೇವೆ ಮಾಡಲು ಸಾಕಷ್ಟು ಜನರನ್ನು ಒದಗಿಸಬೇಕು.

ಉದ್ಯೋಗ. ವಿದ್ಯಾವಂತರಾದವರಿಗೆ ಸಾಕಾದಷ್ಟು ಉದ್ಯೋಗ ದೊರೆಯದೆ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ಇದನ್ನು ಗಮನಿಸಿ ಎಲ್ಲರಿಗೂ ಉದ್ಯೋಗ ದೊರೆಯುವಂತೆ ತಕ್ಕ ವ್ಯವಸ್ಥೆಮಾಡಬೇಕು. ವ್ಯವಸಾಯದಲ್ಲಿ ಒಂದು ರೀತಿಯಾದ ಪ್ರೋಗ್ರಾಂ ಹಾಕಿಕೊಂಡು ಸ್ವಲ್ಪ ಮಟ್ಟಿಗೆ ಪ್ರಗತಿಯನ್ನು ಸಾಧಿಸುವುದು ಇದ್ದರೂ ಕೂಡ ಪಶುವೈದ್ಯದ ವಿಷಯದಲ್ಲಿ ನಮ್ಮ ಸರ್ಕಾರ ಬಹಳಮಟ್ಟಿಗೆ

ಹಿಂದೆ ಇದೆ ಎಂದು ಹೇಳಬಹುದು. ಒಂದು ಡೈರಿ ಫಾರಂ ಮಾಡುತ್ತೇವೆ, ಹಾಲನ್ನು ಜನಗಳಿಗೆ ಒದಗಿಸುತ್ತೇವೆ, ಡೇನಿಷ್‌ರಿಂದ ಸಹಕಾರ ಬರುತ್ತದೆ ಕೇಂದ್ರ ಸರ್ಕಾರದಿಂದ ಸಹಾಯ ಬರುತ್ತದೆ ಬೇರೆ ಬೇರೆ ಸರ್ಕಾರಗಳಿಂದ ಸಹಕಾರ, ಸಹಾಯ ಬರುತ್ತದೆ ಎಂದು ನಿರೀಕ್ಷಣೆ ಮಾಡಿಕೊಂಡು ಅದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಂತೆ ಇದೆ. ಆದರೆ ಪಶುವೈದ್ಯ ಇಲಾಖೆಯಲ್ಲಿರತಕ್ಕ ಡಾಕ್ಟರುಗಳಿಗೆ ಸಾಕಾದಷ್ಟು ಪ್ರೋತ್ಸಾಹ ಕೊಟ್ಟಿಲ್ಲ. ಹಿಂದೆ ಯಾವಾಗಲೋ ನಿಗದಿ ಮಾಡಿದ್ದ 125 ರೂಪಾಯಿಗಳ ಸಂಬಳದಲ್ಲೇ ಅವರು ಇದ್ದಾರೆ. ಪದವೀಧರರಾದ ಪಶುವೈದ್ಯ ಇಲಾಖೆಯ ವೈದ್ಯರನ್ನು ಮೆಡಿಕಲ್ ಗ್ರ್ಯಾಜ್ಯುಯೇಟ್‌ಗಳಿಗೆ ಇರುವಂತ 200, 300 ರೂಪಾಯಿಗಳ ಸಂಬಳದ ಮೇಲೆ ನಿಯಮಿಸಬೇಕು. ಅವರ ಸ್ಥಿತಿಯನ್ನು ಉತ್ತಮ ಪಡಿಸಬೇಕು, ಆ ಮೂಲಕ ನಮ್ಮ ಡೈರಿ ಫಾರಂನ್ನು ಅಭಿವೃದ್ಧಿಪಡಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಮಳೆ ಸುರಿಯುವುದಕ್ಕೆ ಸಾಕಾದಷ್ಟು ಕಾಡುಗಳು ಇರಬೇಕಾದ್ದು ಬಹಳ ಅಗತ್ಯ ಎಂದು ಬಹಳ ಹಿಂದಿನಿಂದಲೂ ಹೇಳುತ್ತಾ ಬಂದಿದ್ದಾರೆ. ಆದರೆ ಅರಣ್ಯವನ್ನು ಸಂಪೂರ್ಣವಾಗಿ ಕತ್ತರಿಸುತ್ತಾ ಬಂದಿದ್ದಾರೆ, ನಾಶಪಡಿಸುತ್ತಾ ಬಂದಿದ್ದಾರೆ. ಈ ಕಾರಣಗಳಿಂದ ಕಾಲ ಕಾಲಕ್ಕೆ ಋತುಗಳಿಗನು ಸಾರವಾಗಿ ಮಳೆಯಾಗುವುದಿಲ್ಲ ಎಂಬುದು ಚೆನ್ನಾಗಿ ತಿಳಿದುಬಂದಿದೆ. ಆದ್ದರಿಂದ ಈಗ ಅವರು ತೆಗೆದುಕೊಂಡಿರತಕ್ಕ ಆಸಕ್ತಿಗಿಂತ ಇನ್ನೂ ಹೆಚ್ಚು ಆಸಕ್ತಿಯನ್ನು ವಹಿಸಿ ಹೆಚ್ಚು ಹೆಚ್ಚು ಅರಣ್ಯವನ್ನು ಬೆಳೆಸಿ ಮಳೆ ಕಾಲಕಾಲಕ್ಕೆ ಸುರಿಯುವ ಹಾಗೆ ಮಾಡ ಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಅಧ್ಯಕ್ಷರೇ, ಈ ಪ್ರಸ್ತಾವನೆಯಲ್ಲಿ ಟಾಷ್ಕೆಂಟ್ ವಿಷಯದಲ್ಲಿ...............

Mr. SPEAKER.—I am not allowing reference to Tashkent ; members must get themselves elected to Parliament and go there and speak on it.

ಶ್ರೀ ವಿ. ಎಂ. ದೇವ್.—ದಿವಂಗತ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ವಿಚಾರ, ಈಗ ಹೊಸದಾಗಿ ಆಯ್ಕೆಯಾಗಿರುವ ಪ್ರಧಾನ ಮಂತ್ರಿಯವರ ವಿಷಯದಲ್ಲಿ ಸ್ವಲ್ಪವೂ ಬರೆಯದೇ ಇರುವುದು ನೋಡಿ ನಿರಾಶೆಯಾಯಿತು. ಈ ಪ್ರಸ್ತಾವನೆ ಇದೆಯಲ್ಲಾ ಇದು ಇಂಗ್ಲೀಷ್‌ನಲ್ಲಿ 'ಡೆಮೊಗಾಗ್' ಎಂದು ಹೇಳುತ್ತಾರೆ ಆ ತರಹ ಭಾಸವಾಗುತ್ತಾ ಇದೆ. ಅದಕ್ಕೆ ಬದಲಾಗಿ ಹೇಗೆ ಇರಬೇಕಾಗಿತ್ತು ಎಂದರೆ ನನ್ನ ಅಭಿಪ್ರಾಯದಲ್ಲಿ ಟಾಷ್ಕೆಂಟ್ ಮಾತುಕತೆಗಳು ಆಗುವುದಕ್ಕೆ ಮುಂಚೆ:

> "The background was that the enemy was ousted and the chain of action that lead to that culmination was that he had taken the correct measure not only of our developed economic might for the growth of which he had ideas but the superiority of our way of life which infuses greater strength than that of the enemy. His was a life which has given the lasting idea to our people that in the context of the modern world, we need not merely weapons of quality to answer aggressors but also need build a way of life which ensures prosperity for all, to inspire people that it is worth fighting for which alone ensures lasting peace."

ನಾನು ಇದನ್ನು ಏಕೆ ಹೇಳುತ್ತೇನೆ ಎಂದರೆ, ನಮ್ಮ ದೇಶದಲ್ಲಿ ದೊಡ್ಡದಾದ ಎರಡು ಘಟನೆಗಳು ಆದವು. ನೇಫಾದಲ್ಲಿ ರಿವರ್ಸಸ್ ಆದಮೇಲೆ ನೆಹರೂಜಿ ಅವರು ಹೇಳಿದ ಮಾತು ಘಂಟೆ ಹೊಡದ ಹಾಗೆ ಕೇಳುತ್ತಾ ಇದೆ. ಇದಕ್ಕೆ ಒಂದು ಕಾರಣವೇನೆಂದರೆ, ದೊಡ್ಡ ಶ್ರೀಮಂತರು ಮತ್ತು ಕಂಟ್ರಾಕ್ಟರುಗಳು ಎಂದು ಅವರು ಹೇಳುತ್ತಾರೆ, ಲಾಲ್‌ಬಹದ್ದೂರ್ ಶಾಸ್ತ್ರಿಯವರು ಕೊನೆ ಕೊನೆಯಲ್ಲಿ ಒಂದು ಮಾತು ಹೇಳಿದರು. ರೈಟ್ ಮತ್ತು ಕನ್‌ಸ್ಯೂಮರ್ಸ್ ಇಂಡಸ್ಟ್ರೀಸ್ ಎರಡರಲ್ಲೂ ಕೂಡ ಗವರ್ನಮೆಂಟ್ ಇಂಡಸ್ಟ್ರೀಸ್‌ನವರು ಪ್ರೈವೇಟ್ ಇಂಡಸ್ಟ್ರೀಸ್‌ನವರಿಗಿಂತ ದೊಡ್ಡ ಸ್ಥಾನವನ್ನು ಬೆಳಸಿಕೊಳ್ಳಬೇಕೆಂದು ಹೇಳಿದರು. ಇದೇ ನಿಜವಾದ ಅವರ ಜೀವನದ ಅರ್ಥ. ದೇಶದ ಪರಿಸ್ಥಿತಿಯನ್ನು ವಿವರಿಸುವಾಗ ಉನ್ನತ ಸ್ಥಾನದಲ್ಲಿರತಕ್ಕ ಒಬ್ಬ ಪ್ರೆಸಿಡೆಂಟರೂ ಸಹಿತ ಹಿಂದೆ ಇದ್ದ ಸರ್ಕಾರದ ಉನ್ನತ ಪ್ರತಿನಿಧಿಯ ವಿಷಯವನ್ನು ಸ್ವಲ್ಪ ಪ್ರಸ್ತಾಪನೆ ಮಾಡಿ ಮುಂದೆ ಹೇಳಬೇಕಾದ ವಿಷಯಗಳನ್ನು ಹೇಳುತ್ತಾ ಹೋಗುತ್ತಾರೆ. ಇದರಲ್ಲಿ ಅದು ಒಂದೂ ಇಲ್ಲ. ಇದಕ್ಕೆ ಕಾರಣ

(ಶ್ರೀ ವಿ. ಎಂ. ದೇವ್)

ವೇನೆಂಬುದನ್ನು ಯೋಚನೆ ಮಾಡಿದೆ. ನನಗೆ ಏನು ಅನ್ನಿಸುತ್ತದೆ ಎಂದರೆ ಈಗ ನಮ್ಮಲ್ಲಿರುವ ನ್ಯೂನತಗಳು ಗೊತ್ತು, ಇದನ್ನೆಲ್ಲಾ ಬದಲಾವಣೆ ಮಾಡುತ್ತಾ ಹೋದರೆ ಅದು ಕಷ್ಟ ಸಾಧ್ಯದ ಕೆಲಸ ಏನಿದ್ದರೂ let us have an easy way of life ಎಂದು ಹೇಳಿ ಅವರು ಅಭಿಪ್ರಾಯಕ್ಕೆ ಹೊಂದಿಕೊಂಡು ಹೋಗೋಣ ಎಂಬ ಒಂದು ಮನೋಭಾವ ಇದೆ, ಇದುವರೆಗೂ ಇದ್ದಂಥ ಮಂತ್ರಿ ಮಂಡಲದಲ್ಲಿ ಒಂದು ಒಳ್ಳೆಯ ಮನೋಭಾವ ಇರುವುದು ಸ್ವಲ್ಪ ಪ್ರತಿಬಿಂಬಿಸುತ್ತದೆ. ದೇಶದಲ್ಲಿ ಎಲ್ಲರೂ ಒಗ್ಗಟ್ಟಾಗಿ ಸರಿಯಾದ ಒಂದು ರಾಷ್ಟ್ರವನ್ನು ಕಟ್ಟಬೇಕಾದರೆ ಅದಕ್ಕೆ ತಕ್ಕ ತ್ಯಾಗವನ್ನೂ ಕೂಡ ಮಾಡಬೇಕಾಗುತ್ತದೆ. ಇದೇ ಗವರ್ನರ್ ಅವರ ಅಡ್ರೆಸ್‌ನಲ್ಲಿರುವ ಒಂದು ಮುಖ್ಯವಾದ ಕೀ. ಆ ದೃಷ್ಟಿಯಿಂದ ಪ್ರತಿಯೊಂದನ್ನೂ ಮಾಡಿ ಅದನ್ನು ಮಾಡಿದ್ದೇವೆ, ಇದನ್ನು ಮಾಡಿದ್ದೇವೆ ಎಂದು ಹೇಳಿದ್ದಾರೆ. ಮುಖ್ಯವಾಗಿ ಏನು ಮಾಡಬೇಕೋ ಅದನ್ನು ಮಾಡಿಲ್ಲ. ಹಾಗೂ ಹೀಗೂ ಮಂತ್ರಿಯಾಗಿ ಕಾಲ ತಳ್ಳೋಣ ಎಂದು ಇರುತ್ತಾರೆಯೇ ಹೊರತು ಬೇರೆ ಏನೂ ಇದರಲ್ಲಿ ಕಾಣುವುದಿಲ್ಲ, ಸ್ವಲ್ಪ ಇಂಟಲಿಜೆಂಟ್ ಆಗಿ ಈ ಅಡ್ರೆಸ್‌ನ್ನು ಓದಿದರೆ ಈ ಅಂಶ ಅರ್ಥವಾಗುತ್ತದೆ ಎಂದು ಹೇಳಬಲ್ಲೆ, ಈಗ ಒಂದೆರಡು ವಿಷಯಗಳನ್ನು ಈ ವ್ಯವಹಾರಗಳ ಬಗ್ಗೆ ಹೇಳುತ್ತೇನೆ.

ಫ್ಯಾಮಿನ್ ವಿಷಯ ತೆಗೆದುಕೊಂಡರೆ, ನಮ್ಮ ಹಳ್ಳಿಯಲ್ಲಿ ಈಗಾಗಲೇ ಹತ್ತು ಹನ್ನೆರಡು ದಿವಸಗಳಿಂದ ಒಂದಲ್ಲ ಒಂದು ರೀತಿಯಲ್ಲಿ ಜನ ಮನೆಗಳಿಗೆ ನುಗ್ಗಿ ಗಲಾಟೆ ಮಾಡುತ್ತಾ ಇದ್ದಾರೆ. ನಾನು ಒಂದು ಸಾರಿ ಹೋಗಿದ್ದಾಗ ಯಾವನೋ ಒಬ್ಬ ಹೀಗೆ ಮನೆಗೆ ನುಗ್ಗಿದ್ದ. ಮನೆಯವರು ಅವನನ್ನು ಹಿಡಿದುಕೊಂಡರು, ಯಾರು ಇವನು ಎಂದು ಹೇಳಿದ್ದಕ್ಕೆ ನಮ್ಮವನೇ ಹೋಗಲಿ ಬಿಡಿ ಸ್ವಾಮಿ ಎಂದು ಹೇಳಿದರು. ಆಗ ನಾನು ಎಲ್ಲರನ್ನೂ ಕುಳ್ಳಿರಿಸಿಕೊಂಡು ಈ ತರಹ ಆಗುತ್ತ ಇದೆ ಅಂತ ಹೇಳಿ ಸರ್ಕಾರದವರಿಗೆ ಒಂದು ಅಂಕಿಅಂಶ ಆದರೂ ಸಿಕ್ಕಲಿ, ಆ ದೃಷ್ಟಿಯಿಂದ ಸರ್ಕಾರದವರಿಗೆ ಒಂದು ರಿಪೋರ್ಟ್ ಕೊಡಿ ಎಂದು ಶ್ಯಾನುಬೋಗರು, ಪಂಚಾಯ್ತಿ ಚೇರ್ಮನರು ಎಲ್ಲರಿಗೂ ಸೂಚನೆ ಮಾಡಿದೆ. ನಾನು ಗುಬ್ಬಿ ತಾಲ್ಲೂಕು ಸಿರಾ ಬಾರ್ಡರ್‌ನಲ್ಲಿ ಇರುವವನು, ಪರಿಸ್ಥಿತಿ ಹೀಗೆ ಇರುವುದರಿಂದ ಗುಬ್ಬಿ ತಾಲ್ಲೂಕನ್ನು ಫ್ಯಾಮಿನ್ ಏರಿಯಾ ಎಂದು ಡಿಕ್ಲೇರ್ ಮಾಡಿ, 3-4 ಹಳ್ಳಿಗಳಲ್ಲಿ ಅಷ್ಟೋ ಇಷ್ಟೋ ಅರ್ಧಭಾಗ ಬೆಳೆಯಾಗಿದೆ, ಸುಮಾರು ಎರಡು ಆಣೆ ಮೂರು ಆಣೆ ಮಾತ್ರ ಬೆಳೆಯಾಗಿದೆ. ಆದ್ದರಿಂದ ನಾನು ಮೊದಲೇ ಹೇಳಿದ ಹಾಗೆ ಇದಕ್ಕೆಲ್ಲಾ ಮುಖ್ಯವಾದ ಒಂದು ಕೀ ಏನೆಂದರೆ ದೇಶದಲ್ಲಿ ಕಷ್ಟ ಕಾಲ ಬಂದಾಗ ಕಷ್ಟವನ್ನೂ ಹಂಚಿಕೊಳ್ಳೋಣ, ಸುಖವನ್ನೂ ಹಂಚಿಕೊಳ್ಳೋಣ. ಈ ಒಂದು ಮನೋಭಾವ ಮಂತ್ರಿ ಮಂಡಲದಲ್ಲಿ ಬಂದಿಲ್ಲ ಎಂಬುದನ್ನು ಬಹಳ ಕಳಕಳಿಯಿಂದ ಹೇಳುತ್ತಾ ಇದ್ದೇನೆ. ಇವತ್ತು ನಮ್ಮ ದೇಶದ ಪರಿಸ್ಥಿತಿ ಹೇಗಿದೆ ಎಂದರೆ ಹಸಿವಿನ, ನಿರುದ್ಯೋಗದ ಮತ್ತು ಆದಾಯಕ್ಕೆ ಎಟುಕದ ಬೆಲೆಗಳ ದೆಸೆಯಿಂದ ಜನ ಪರಿತಪಿಸುತ್ತಾ ಇರುವ ದೃಶ್ಯ ದೇಶದಲ್ಲಿ ಅನೇಕ ಕಡೆ ಕಂಡು ಬರುತ್ತಾ ಇದೆ.

ಎತ್ತಿನ ವಿಚಾರ ಸ್ವಲ್ಪ ಹೇಳುವುದಕ್ಕೆ ಬಯಸುತ್ತೇನೆ. ಇದು ಬಹಳ ಜನಗಳ ಗಮನಕ್ಕೆ ಬಂದಿದೆ. ತುಮಕೂರಿನಲ್ಲಿ ದನದ ಮಾಂಸ ಎಂಟು ಆಣೆಯಿಂದ 12 ಆಣೆಯವರೆಗೂ ಒಂದು ಕೆ. ಜಿ.ಗೆ ಮಾರಾಟ ಮಾಡುತ್ತಾ ಇದ್ದಾರೆ. ಒಂದು ಜೊತೆ ಎತ್ತನ್ನು 40 ರೂಪಾಯಿಗೆ ಮಾರಾಟ ಮಾಡುತ್ತಾ ಇದ್ದಾರೆ, ಇಂತಹ ಪರಿಸ್ಥಿತಿಯನ್ನು ಸುಧಾರಿಸಲು ಏನಾದರೂ ಪರಿಹಾರೋಪಾಯ ಇದೆಯೇ ಎಂದು ನನಗೆ ಯೋಚನೆಯಾಗುತ್ತಾ ಇದೆ. ಪೂರ್ವದಲ್ಲಿ ಒಂದು ಯೋಜನೆ ಮಾಡಿದ್ದರು. ಸರ್ಕಾರದವರು ರೈತರಿಗೆ ಇಂತಹ ಪರಿಸ್ಥಿತಿಯಲ್ಲಿ ಅಮೃತಮಹಲ್ ದನಗಳನ್ನು ಮುಫತ್ತಾಗಿ ಕೊಡುತ್ತಾ ಇದ್ದರು. ಈಗಿನ ಪರಿಸ್ಥಿತಿಗೆ ನೀವು ಕೂಡ ಅದರಿಂದ ಏನಾದರೂ ಒಂದು ಪಾಠ ಕಲಿಯಬಹುದಲ್ಲ ಎಂದು ಯೋಚನೆ ಮಾಡಬಹುದು. ತಾವು ಏನು ಮಾಡಬೇಕು ಎಂದರೆ, ಕೆಲವು ಸಿಬ್ಬಂದಿ ಇಟ್ಟುಕೊಂಡು ಕಾಡು ಮೇಡು ಹೊಲಗದ್ದೆ ಇರುವ ಕಡೆಗಳಲ್ಲಿ ದನಗಳನ್ನು ಸಾಕುವುದಕ್ಕೆ ಆಗದಿದ್ದರೆ ಅವುಗಳನ್ನು ಬೇರೆ ಕಡೆಗೆ ಸಾಗಿಸಿ ಅವುಗಳನ್ನು ಕಾಪಾಡಿದ್ದೇ ಆದರೆ ಅಷ್ಟೋ ಇಷ್ಟೋ ದನಗಳು ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಎಲ್ಲಾ ದನಗಳೂ ಸತ್ತು ಹೋದಾವು ಎಂಬ ಭಯ ನನಗೆ ಉಂಟಾಗುತ್ತಾ ಇದೆ. ಇದನ್ನು ಬಹಳ ಆಳವಾಗಿ ಯೋಚನೆ ಮಾಡಬೇಕೆಂದು ಕಳಕಳಿಯಿಂದ ಹೇಳುತ್ತಾ ಇದ್ದೇನೆ,

5-30 P.M.

ನಾನು ಈ ಮೊದಲೇ ಹೇಳಿದ ಹಾಗೆ ಇನ್ನೊಂದು ಬಹಳ ಮುಖ್ಯವಾದ ವಿಷಯ ಎಂದರೆ ದೇಶದಲ್ಲಿ ವ್ಯವಸಾಯವನ್ನು ಯಾವ ಮಟ್ಟದಲ್ಲಿ ಮುಂದುವರಿಸಬೇಕು ಎಂಬುದನ್ನು ಇಂದು ತೀವ್ರವಾಗಿ ಪರಿಶೀಲನೆ ಮಾಡತಕ್ಕಂಥ ಕಾಲ ಈಗ ಬಂದಿದೆ. ನಾನು ಮೊನ್ನೆ ತುಮಕೂರಿಗೆ ಡೀಸೆಲ್ ಆಯಿಲ್ಗೆ

ಡ್ರಂಗಳನ್ನು ತರಲು ಹೋಗಿದ್ದೆ, ನನಗೆ ಡೀಸೆಲ್ ಆಯಿಲ್ಲೇನೂ ಬೇಕಾಗಿರಲಿಲ್ಲ, ಖಾಲಿ ಡ್ರಂಗಳು ಮಾತ್ರ ಬೇಕಾಗಿತ್ತು, ಈಗ ಅವುಗಳ ಬೆಲೆ 25, 30, 40, 45 ವರೆಗೂ ಏರಿಹೋಗಿದೆ. ಖಾಲೀ ಡ್ರಂಗಳ ಬೆಲೆಯೇ ಇಷ್ಟಾದರೆ ಇನ್ನು ಎಣ್ಣೆ ಇರತಕ್ಕ ಡ್ರಂಗಳ ಬೆಲೆಯೇನಾಗಿರಬೇಕು ? ಯಾವ ಅಂಗಡಿಯಲ್ಲಿ ನೋಡಿದರೂ ಡೀಸೆಲ್ ಆಯಿಲ್ಲೇ ಇಲ್ಲ. ಹೀಗಾದರೆ ಆ ರೈತನ ಗತಿಯೇನಾಗಬೇಕು? ಸಾಮಾನ್ಯವಾಗಿ ರೈತ ಬೆಳೆ ತೆಗೆಯಲು ಕಪಿಲೆ ಬಾವಿಗಳನ್ನು ಅವಲಂಬಿಸಬೇಕು, ಇಲ್ಲವೇ ಡೀಸೆಲ್ ಆಯಿಲ್‌ಗಳ ಪಂಪ್ ಸೆಟ್ಟನ್ನು ಇಟ್ಟುಕೊಳ್ಳಬೇಕು, ಇಲ್ಲವೆ, ಕರೆಂಟಿನ ಸಹಾಯದಿಂದ ನೀರನ್ನೆತ್ತುವ ಸಾಧನೆ ಇಟ್ಟುಕೊಳ್ಳಬೇಕು. ಆದರೆ ಈ ಮೂರರಲ್ಲಿ ಕಪಿಲೆ ಬಾವಿಯ ಬೇಸಾಯ ರೈತನಿಗೆ ಲಾಭ ದಾಯಕವಾಗುವುದಿಲ್ಲ. ಆತ ಜಮೀನನ್ನು ಮಾರಾಟ ಮಾಡಿಕೊಂಡು ಹೋಗುವುದು ಸುಲಭವೇ ವಿನಾ ಕಪಿಲೆಯಿಂದ ಬೇಸಾಯ ಮಾಡುವುದ ಅಷ್ಟು ಕಷ್ಟ. ಇನ್ನು ಡೀಸೆಲ್ ಆಯಿಲ್ ಸೆಟ್ಟನ್ನು ಬೆಳೆಗೆ ಕೇವಲ ಇನ್ನು ಒಂದೆರೆಡು ಹದ ನೀರು ಬೇಕೆಂಬ ಸಂದರ್ಭಗಳಲ್ಲಿ ಮಾತ್ರ ಅದನ್ನು ಬಳಸುವು ದಕ್ಕೆ ಸಾಧ್ಯ. ಆದರೆ ನೀರಾವರಿ ಬೇಸಾಯದಲ್ಲಿ ಎಲೆಕ್ಟ್ರಿಕ್ ಪಂಪ್ ಸೆಟ್ಟಿನ ಸಹಾಯ ದಿಂದ ಬರತಕ್ಕಷ್ಟು ಲಾಭ ಇನ್ನು ಯಾವುದರಿಂದಲೂ ಬರುವುದಿಲ್ಲ. ಆದರೆ ಇಲ್ಲಿಯ ವರೆಗೂ ವ್ಯವಸಾಯಾ ಭಿವೃದ್ಧಿಗಾಗಿ ಎಷ್ಟೋ ಹಣವನ್ನು ಖರ್ಚು ಮಾಡಿದ್ದೇವೆ. ನಾನು ಅನೇಕ ಸಲ ಆ ಬೋಚೇನಹಳ್ಳಿ ಕೆರೆಯ ರಿಪೇರಿ ಮಾಡಿಸಲು ಪ್ರಾರ್ಥನೆ ಮಾಡಿದ್ದೆ, ಅದಿನ್ನೂ ಆಗಿಲ್ಲ. ಆ ಕೆರೆ ಒಡೆದು ಅನೇಕ ವರ್ಷಗಳಾದವು, ಅಲ್ಲಿ 50 ಅಡಿ ಸಿಮೆಂಟ್ ಕಾಂಕ್ರೀಟ್ ಕೆಲಸ ಮಾಡಿದರೆ ಅದು ಸರಿಹೋಗುತ್ತದೆ. ಅಷ್ಟಕ್ಕೆ ಸರ್ಕಾರ ಹಿಂದೆಗೆಯುತ್ತಿದೆ. ಅದಕ್ಕೆ 25 ಸಾವಿರದ ಮೇಲೆ ಖರ್ಚಾಗುವುದಿಲ್ಲ. ಆ ಕೆಲಸವನ್ನು ಇನ್ನಾದರೂ ಸರ್ಕಾರದವರು ಕೂಡಲೆ ಮಾಡಿಸುತ್ತಾರೆಂದು ಭಾವಿಸುತ್ತೇನೆ. ಇನ್ನು ಮಂಗಳ ಪ್ರಾಜೆಕ್ಟಿನ ಫೀಸಿಬಿಲಿಟಿ ವಿಚಾರಕ್ಕೆ ಬಂದರೆ ಅದನ್ನು ಒಪ್ಪಿಕೊಳ್ಳುವುದು ಒಳ್ಳೆಯದು. ಹೀಗೆ ನಾನು ಆ ಮಂಡೇನಹಳ್ಳಿ ಕೆರೆಯ ವಿಚಾರದಲ್ಲೂ ಬಹಳ ಹೇಳಿದ್ದೇನೆ. ಅಲ್ಲೀಗ ಕೆಲವರು ಅಡಕೆ ತೋಟಗಳನ್ನು ಬೆಳೆಸಿದ್ದಾರೆ. ಅಲ್ಲಿ ಸ್ವಲ್ಪ ಏರಿಗೆ ಜಾಗವನ್ನು ಬಿಟ್ಟು ಕಟ್ಟೆಯನ್ನು ಹಾಕಬೇಕೆಂದು ಹೇಳಿದ್ದೆ. ಆದರೆ ಅದಿನ್ನೂ ಆಗಿಲ್ಲ. ಮೇಲೆ ಅರ್ಡರ್ಸಿಗಾಗಿ ಬರತಕ್ಕ ಫೈಲುಗಳ ಮೇಲೆ ಅಲ್ಲಸಲ್ಲದ ಕ್ವೆರಿಗಳನ್ನು ಹಾಕತಕ್ಕ ಅಧಿಕಾರಿಗಳು ಇಲ್ಲಿ ಜಾಸ್ತಿಯಾಗಿದ್ದಾರೆ. ಈ ವಿಚಾರದಲ್ಲಿ ಅನೇಕವೇಳೆ ಮಂತ್ರಿಗಳಿಗೂ ಹೇಳಿದ್ದೆ, ಅವರೂ ಸಹಾ ಇದಕ್ಕೆ ಕಿವಿಗೊಟ್ಟಿಲ್ಲ. ನೀರಾವರಿ ಪ್ರಾಜೆಕ್ಟುಗಳನ್ನು ಮಾಡತಕ್ಕ ವಿಚಾರದಲ್ಲಿ ಸರ್ಕಾರ ಆ ಫೀಜಿಬಿಲಿಟಿ ವಿಚಾರದಲ್ಲಿ ಸ್ವಲ್ಪ ರಿಯಾಯಿತಿ ತೋರಿಸಬೇಕೆಂದು ನಾನು ಹೇಳುತ್ತೇನೆ. ಹಿಂದಿನ ಕಾಲದಲ್ಲಿ ಯಾರು ಈ ಫೀಜಿಬಿಲಿಟಿ ವಿಚಾರಕ್ಕೆ ಅಷ್ಟು ಮಹತ್ವವನ್ನು ಕೊಡುತ್ತಿರಲಿಲ್ಲ. ಈಗಲೂ ಹಾಗೇ ಮಾಡಬೇಕು. ನಮ್ಮ ಶಿರಾ ತಾಲ್ಲೂಕಿನಲ್ಲಿ ಬೇಳೂರು ಮತ್ತು ಹಾಗಲವಾಡಿ ಪ್ರಾಂತ್ಯ ಯಾವಾಗಲೂ ಕ್ಷಾಮದಿಂದ ನರಳುತ್ತಿದೆ. ಅಲ್ಲಿಗೆ ಸರ್ಕಾರದವರು ಇದುವರೆಗಾದರೂ ಒಂದು ಕಾಸನ್ನೂ ಖರ್ಚು ಮಾಡಿಲ್ಲ. ಮಾತೆತ್ತಿದರೆ ಈ ವಿಧಾನಸೌಧದಲ್ಲಿ ಫೀಜಿಬಿಲಿಟಿ ವಿಚಾರ ಮಾತ ನಾಡುತ್ತಾರೆ. ಇದೊಂದು ರಾಜಕೀಯ ತಂತ್ರ. ಹೀಗಾಗಿ ಗುಬ್ಬಿ ತಾಲ್ಲೂಕಿನಲ್ಲಿ ಬಾವಿಗಳಿಗೆ ಅರ್ಜಿಗಳನ್ನು ಸ್ವೀಕರಿಸುತ್ತಿದ್ದರೂ ಅಲ್ಲಿಗೆ ಒದಗಿಸಬೇಕಾಗಿದ್ದ ಹಣಕ್ಕಿಂತ ಹೆಚ್ಚಿನ ಹಣವನ್ನು ಒದಗಿಸಿದೆ ಎಂಬ ನೆಪವನ್ನು ಹೇಳುತ್ತಾ ಬಾವಿಗಳಿಗೆ ಹಣವಿಲ್ಲದೆ ಕೆಲಸವೇ ನಿಂತು ಹೋಗಿದೆ. ಈ ವಿಚಾರದಲ್ಲಿ ನಾವು ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನೊಂದಿಗೆ ವ್ಯವಹಾರ ಮಾಡಬೇಕಾದ್ದು ಅತ್ಯ ಗತ್ಯವಾಗಿದೆ. ನಮ್ಮ ಸರ್ಕಾರಕ್ಕೆ ಸಮಾಜವಾದದಲ್ಲಿ ಆಳವಾದ ನಂಬಿಕೆ ಇದ್ದಲ್ಲಿ ಅವರು ಒಬ್ಬೊಬ್ಬ ವ್ಯಕ್ತಿಗೆ ಬಾವಿಗಾಗಿ ಹಣ ಕೊಡುವುದರ ಬದಲು, ಹೀಗೆ ಕೊಟ್ಟರೆ ಹೆಚ್ಚಿನ ನಷ್ಟವಾಗುವುದರಿಂದ ಸಾಮೂಹಿಕ ಬಾವಿಗಳಿಗೆ ಪ್ರೋತ್ಸಾಹ ನೀಡಬೇಕಾದ್ದು ಅವಶ್ಯಕ ಎಂದು ಹೇಳುತ್ತೇನೆ.

ಇನ್ನು ನಮ್ಮ ಗುಬ್ಬಿ ತಾಲ್ಲೂಕಿಗೆ ಬಂದರೆ. ಅಲ್ಲಿ ಈ ಹಿಂದೆಯೇ ಇಂಟರ್‌ವ್ಯಾಲಿ ಸರ್ವೆ ಕೆಲಸ ಮುಗಿದಿತ್ತು. ಅದಕ್ಕೆಲ್ಲಾ 7-8 ಅಥವಾ 15 ಲಕ್ಷಕ್ಕಿಂತ ಜಾಸ್ತಿಯಾಗುವುದಿಲ್ಲ. ಅದನ್ನು ಸ್ವಲ್ಪ ಸ್ವಲ್ಪ ವಿಭಾಗ ಮಾಡಿಕೊಂಡು ಒಂದೊಂದು ಲಕ್ಷ ರೂಪಾಯಿನ ಕೆಲಸವನ್ನು ಮುಗಿಸುತ್ತಾ ಬಂದಲ್ಲಿ ಇದರಿಂದ ಒಂದು ಚರಿತ್ರಾರ್ಹವಾದ ಫಲಿತಾಂಶವನ್ನೇ ಪಡೆಯಬಹುದು. ಅಲ್ಲಿ ಆಜೂ ಬಾಜೂ ಇರತಕ್ಕ ಮೇಜರ್, ಮೈನರ್ ಮತ್ತು ಮೀಡಿಯಂ ಕೆರೆಗಳಿಗೆಲ್ಲಾ ಬಹಳ ಅನುಕೂಲವಾಗು ವುದು. ಅಲ್ಲಿರತಕ್ಕ ಮೂಕನಹಳ್ಳಿ ಕೆರೆಯ ಸರ್ವೆ ಕೆಲಸ ಬಹಳ ಹಿಂದೆಯೇ ಮುಗಿದಿತ್ತು. ಈ ಕಣಿವೆಯಲ್ಲಿ ನೀರು ನಿಲ್ಲುವಂತೆ ಮಾಡಿದರೆ ಅಲ್ಲಿಗೆ ಬಹಳ ಅನುಕೂಲ. ಆ ವ್ಯಾಲಿಯಿಂದ ಅನುಕೂಲ ಪಡೆಯಲು ಸಾಧ್ಯವಿಲ್ಲದ ಕಡೆಯಲ್ಲಿ 40-50 ಬೋರ್‌ವೆಲ್‌ಗಳನ್ನು ಹಾಕಿಸಿದಲ್ಲಿ ಆ ಜನರಿಗೆ ಪಂಪ್ ಸೆಟ್ಟನ್ನು ಒದ ಗಿಸಿದ ನಂತರ ಸರ್ಕಾರದವರು ಎಲ್ಲರಿಗೂ ಸಮಾಜವಾದದ ಪ್ರಕಾರ ನ್ಯಾಯವನ್ನು ದೊರಕಿಸಿದಂತಾ ಗುವುದು. ಸರ್ಕಾರದ ಆಡಳಿತ ರಂಗದಲ್ಲಿ—ಕಾರ್ಯಾಂಗ, ನ್ಯಾಯಾಂಗ ಮತ್ತು ಆಡಳಿತ ವಿಭಾಗ ಎಂದು ಬಧ್ಧಲಾವಣೆ ಮಾಡಿರುವಂತೆ ಇಲ್ಲ ಬದಲಾವಣೆ ಮಾಡದವೆ, ಜನರಿಗೆ ಅನುಕೂಲ ಕಲ್ಪಿಸಿದಲ್ಲಿ

(ಶ್ರೀ ಎ. ಎಂ. ದೇವ್)

ಮಾತ್ರ ಸೋಷಿಯಲಿಜಂಗೆ ಮಾನ್ಯತೆ ಕೊಟ್ಟ ಹಾಗಾಗುತ್ತದೆ. ಆದರೆ ನನಗಿನ್ನೂ ಹೇಳತಕ್ಕ ವಿಚಾರಗಳು ಅನೇಕವಾಗಿದ್ದರೂ ಇಲ್ಲಿ ಕಾಲಾವಕಾಶವಿಲ್ಲದ್ದರಿಂದ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸಭಾಪತಿಗಳೇ, ನಮ್ಮ ಆಯವ್ಯಯಾಧಿವೇಶನವು ಪ್ರಾರಂಭವಾಗುವುದಕ್ಕೆ ಇನ್ನೂ ಒಂದು ತಿಂಗಳ ಕಾಲ ಮುಂಚಿತವಾಗಿಯೇ ನಮ್ಮ ರಾಜ್ಯಪಾಲರು 28 ಪುಟಗಳಿಂದ ಕೂಡಿರತಕ್ಕ ಒಂದು ಅಡ್ರೆಸ್ಸನ್ನು ಈ ಸಭೆಯಮುಂದೆ ಓದಿ, ಅದನ್ನು ಈ ಸಭೆಯವರು ಚರ್ಚೆ ಮಾಡಬೇಕೆಂದೂ, ರಾಜ್ಯಪಾಲರ ಭಾಷಣದಲ್ಲಿ ನಮ್ಮ ಸರ್ಕಾರದ ಅಧಿಕಾರಿಗಳು ಒಂದು ವರ್ಷಕಾಲಾವಧಿಯಲ್ಲಿ—ಏನೇನು ಕೆಲಸಗಳನ್ನು ಸಾಧಿಸಿದ್ದಾರೆ ಏನೇನು ಅಭಿವೃದ್ಧಿಕಾರ್ಯಗಳನ್ನು ಮಾಡಿದ್ದಾರೆ, ಇವರು ಕಳೆದ ಮೂರು ಪಂಚವಾರ್ಷಿಕ ಯೋಜನೆಗಳಿಂದ ದೇಶದಲ್ಲಿ ಏನನ್ನು ಸಾಧಿಸಿದ್ದಾರೆ, ಎಷ್ಟು ಹಣವನ್ನು ಖರ್ಚುಮಾಡಿದ್ದಾರೆ, ಹಾಗೂ ನಮ್ಮ ದೇಶದ ಹಣಕಾಸಿನ ಪರಸ್ಥಿತಿ ಏನಿದೆ. ಇಂಡಿಯಾದೇಶಕ್ಕೆ ಒದಗಿದ್ದಂಥ ಆಪತ್ತು ಆ ಬಗ್ಗೆ ಇಂಡಿಯಾದೇಶದ ಜನತೆ ತೋರಿದಂಥ ಧೈರ್ಯಸ್ಥೈರ್ಯಗಳು ಮತ್ತು ಈ ರಾಜ್ಯವನ್ನು ಅಥವಾ ಈ ರಾಷ್ಟ್ರವನ್ನು ಒಳ್ಳೆಯ ನೀತಿಗನುಗುಣವಾಗಿ ಧರ್ಮರಕ್ಷಣೆ ರಾಷ್ಟ್ರವೆಂದೆನಿಸಿಕೊಂಡಂಥ ದಿವಂಗತ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರ ನೆನಪು—ಇಂತಹುಗಳು ಮಾತ್ರ ರಾಜ್ಯಪಾಲರ ಭಾಷಣದಲ್ಲಿವೆ. ಇವತ್ತು ನಾವು ಬಹಳ ನಿರಾಶೆಯಿಂದ ಸರ್ಕಾರ ಸಾಧಿಸಿರತಕ್ಕ ಪ್ರಗತಿಯನ್ನು ನೋಡಬೇಕಾಗಿದೆ. ಅವರ ಭಾಷಣದ 28 ಪುಟಗಳಲ್ಲಿರತಕ್ಕಂಥ ಯಾವ ವಿಷಯವನ್ನು ತಗೆದರೂ ಕೇವಲ ಹಿಂದಿನವರ್ಷದ ಅಂಕಿ ಅಂಶಗಳು ಜಾಸ್ತಿ ಇವೆ.

ಎಲ್ಲೋ ಅಲ್ಲಿ ಇಲ್ಲಿ ಹೊಸ ಅಂಶಗಳು, ಎಂದರೆ, ಕೇವಲ ಸೆಕೆಂಡರಿ ಎಜುಕೇಷನ್ ಉಚಿತವಾಗಿ ಎಷ್ಟೇ ಶ್ರೀಮಂತರಾಗಿರಲಿ ಅಂತಹವರಿಗೂ ಸಹ ಕೊಡುವುದು ಎಂಬುದಾಗಿ ಮಾಡಿದ್ದಾರೆ. ಮೈನರ್ ಇರಿಗೇಷನ್ ಇಷ್ಟು ಸಾಧನೆ ಮಾಡುತ್ತಿದ್ದೇವೆ. ಎಷ್ಟೆಷ್ಟು ಹಣವನ್ನು ಪ್ರತಿವರ್ಷ ಕೊಟ್ಟಿದೆ, ಕೊನೆಯ ವರ್ಷದಲ್ಲಿ ಇಷ್ಟು ಮೊಬಲಗನ್ನು ಖರ್ಚುಮಾಡುತ್ತೇವೆಂಬುದು ಮಾತ್ರ ಈ ಭಾಷಣದಲ್ಲಿದೆಯೇ ಹೊರ್ತು ನಮ್ಮ ಕೈಗಾರಿಕೆಗಳ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ, ಅಗ್ರಿಕಲ್ಚರಲ್ ಪ್ರೊಡಕ್ಷನ್ ಎಷ್ಟರಮಟ್ಟಿಗೆ ಆಗಿದೆ, ಎಷ್ಟು ಎಕರೆ ಜಮೀನು ಸಾಗುವಳಿಯಾಗಿದೆ, ಎಷ್ಟು ಟನ್ನುಗಳಷ್ಟು ಆಹಾರವನ್ನು ಬೆಳೆದಿದ್ದಾರೆ ಎಷ್ಟು ಟನ್ನುಗಳಷ್ಟು ಆಹಾರದ ಕೊರತೆ ಇದೆ, ಎಷ್ಟು ಜನಗಳಿಗೆ ಉದ್ಯೋಗಗಳನ್ನು ಕಲ್ಪಿಸಿಕೊಟ್ಟಿದ್ದಾರೆ, ಎಷ್ಟು ಜನ ನಿರುದ್ಯೋಗಿಗಳು ಇನ್ನೂ ಇದ್ದಾರೆ, ಅವರಿಗೆಲ್ಲರಿಗೂ ಉದ್ಯೋಗಗಳನ್ನು ಕಲ್ಪಿಸಿಕೊಡಲು ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ—ಎಂಬೀ ವಿಚಾರಗಳು ಈ ಭಾಷಣದಲ್ಲಿದೆಯೇ ಎಂದು ನೋಡಿದರೆ ಆ ಯಾವ ಒಂದು ಅಂಶವೂ ಇದರಲ್ಲಿ ಕಾಣುತ್ತಾ ಇಲ್ಲ. ಇವರ ಬೊಕ್ಕಸದಲ್ಲಿ ಹಣವೆಷ್ಟು ಇರಬೇಕೆಂಬ ಬಗ್ಗೆ ಒಂದು ನಿರ್ಧಾರವಾದ ಮಾತೇ ಇಲ್ಲ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ 250 ಕೋಟಿ ರೂಪಾಯಿಗಳು ವೆಚ್ಚವಾಗತಕ್ಕದೆಂದು ಗೊತ್ತುಪಡಿಸಲಾಗಿದ್ದಿತು, ಅದರಲ್ಲಿ 243 ಕೋಟಿ ರೂಪಾಯಿಗಳು, ಅಂದರೆ, ಗೊತ್ತುಪಡಿಸಿದ ಹಣದ ಶೇಕಡ 97ಕ್ಕಿಂತಲೂ ಕೊಂಚ ಹೆಚ್ಚು ಹಣವು ವೆಚ್ಚವಾಗುವುದೆಂಬ ನಿರೀಕ್ಷೆ ಇದೆಯೆಂದು ಹೇಳುತ್ತಾರೆ. ಇವರದು 110 ಕೋಟಿ ರೂಪಾಯಿಗಳು, ಕೇಂದ್ರದ ಸಹಾಯ 140 ಕೋಟಿ ರೂಪಾಯಿಗಳು ಎಂದು ಬೇರೆ ಹೇಳುತ್ತಾರೆ. ಅಂದಮೇಲೆ 3 ನೇ ಪಾಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಹಣವನ್ನೊದಗಿಸಿ ಯೋಜನಾ ಕಾರ್ಯಗಳನ್ನು ಇಂಪ್ಲಿಮೆಂಟ್ ಮಾಡುತ್ತಾರೆಂಬ ಬಗ್ಗೆ ಯಾವ ಒಂದು ನಿರ್ಧಾರಕ್ಕೇ ಇನ್ನೂ ಬಂದಿಲ್ಲವೆಂಬುದು ಇವರು ರಾಜ್ಯಪಾಲರಿಂದ ಓದಿಸಿರತಕ್ಕ ಈ ಭಾಷಣದಿಂದ ಚೆನ್ನಾಗಿ ವ್ಯಕ್ತವಾಗುತ್ತದೆ.

ಇನ್ನು ಸಾಮಾನ್ಯ ವರ್ಷಗಳಲ್ಲಿಯೇ ಸುಮಾರು 5 ಲಕ್ಷ ಟನ್ನುಗಳಷ್ಟು ಆಹಾರವನ್ನು ಸಂಗ್ರಹಣೆ ಮಾಡಿದರೆ ನಮ್ಮ ದೇಶಕ್ಕೆ ಅದು ಸೆಲ್ಫ್-ಸಫಿಷಿಯೆನ್ಸಿಯಾಗಿರುತ್ತದೆ, ಅಂಥಾದ್ದನ್ನು ಸಾಧನೆ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡುತ್ತಿದ್ದೇವೆ ಎಂಬುದಾಗಿ ಮೊದಲಿನಿಂದಲೂ ಇವರು ಹೇಳುತ್ತಲೇ ಇದ್ದಾರೆ. ಆದರೆ ಈಗ 1-2-3ನೇ ಪಂಚವಾರ್ಷಿಕ ಯೋಜನೆಗಳು ಮುಗಿಯುವ ಸ್ಥಿತಿಗೆ ಬಂದರೂ ಕೂಡ ಈ ಕೊನೆಯ ವರ್ಷದಲ್ಲಿ ಇನ್ನೂ 20 ಲಕ್ಷ ಟನ್ನುಗಳಷ್ಟು ಆಹಾರ ಕಡಿಮೆ ಬಿದ್ದಿದೆ. ಅಂದಮೇಲೆ ಸರ್ಕಾರದವರು ಈ 1-2-3ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಏನು ಮಾಡಿದ್ದಾರೆ? ಭಾಷಣಗಳನ್ನು ಮಾಡಿದ್ದಾರೆಯೇ ಅಥವಾ ಪ್ರವಾಸಗಳನ್ನು ಮಾಡಿದ್ದಾರೆಯೇ ಅಥವಾ ಬೆಂಗಳೂರಿನಿಂದ ದಿಲ್ಲಿಗೂ, ದಿಲ್ಲಿಯಿಂದ ಬೆಂಗಳೂರಿಗೂ ಓಡಾಡಿದ್ದಾರೆಯೇ, ಏನು ಸಾಧನೆ ಮಾಡಿದ್ದಾರೋ ಒಂದೂ ಸರಿಯಾಗಿ ಗೊತ್ತಾಗುವುದಿಲ್ಲ. ಪುಟ 2ರಲ್ಲಿ ಒಂದು ಮಾತನ್ನು ಹೇಳಿದ್ದಾರೆ. "As against the Third Plan target of expenditure of Rs. 250 crores, the

actual expenditure, it is expected, will be of the order of Rs. 243 crores or a little above 97 per cent. Considering the two serious interruptions caused '' ಎಂದು. ಇವರಲ್ಲಿ ಹಣವೆಲ್ಲಿದೆ ? 1966-67ನೇ ಸಾಲಿಗೆ 50·72 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಪುಟ 3 ರಲ್ಲಿ ತಿಳಿಸಿದ್ದಾರೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಈ ರೀತಿಯಾಗಿ ಅಪ್ಪಣೆ ಕೊಡಿಸಿದ್ದಾರೆ. ಇದು 66-67ನೇ ಸಾಲಿನ ಬಡ್ಜೆಟ್ ಭಾಷಣಕ್ಕೆ ಸಂಬಂಧಪಟ್ಟ ವಿಷಯ. ಆದರೆ ಈ ಭಾಷಣದಲ್ಲಿ 50 ಕೋಟಿ 72 ಲಕ್ಷ ರೂಪಾಯಿಗಳನ್ನು 66-67ನೇ ಸಾಲಿಗೆ ಖರ್ಚು ಮಾಡುತ್ತೇವೆಂದು ಇವರು ಹೇಳುವಾಗ ಇವರ ಬೊಕ್ಕಸದಲ್ಲಿ ಹಣ ಎಷ್ಟಿದೆ, ಕೇಂದ್ರ ಸರ್ಕಾರದವರು ಇವರಿಗೆ ಎಷ್ಟು ಹಣ ಕೊಡುತ್ತಾರೆಂಬುದನ್ನು ವಿಚಾರ ಮಾಡಬೇಕಾಗಿದೆ. ಈ ಹಣದ ಪೈಕಿ 34 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಇವರು ನಿರೀಕ್ಷಣೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಈ ಸಾಲಿಗೆ ಇವರು ಒದಗಿಸತಕ್ಕ ಹಣವೆಷ್ಟೆಂಬುದನ್ನು ಇಲ್ಲಿ ನಮೂದು ಮಾಡಿಲ್ಲ. ಒಟ್ಟು 50·72 ಕೋಟಿ ರೂಪಾಯಿಗಳನ್ನು ಯಾವ್ಯಾವ ಬಾಬುಗಳಿಗೆ ಎಷ್ಟೆಷ್ಟು ಖರ್ಚು ಮಾಡಬೇಕೆಂಬ ವಿವರಗಳನ್ನು ಮಾತ್ರ ಕೊಟ್ಟಿದ್ದಾರೆ. ಅದರಲ್ಲಿ ಇವರ ಭಾಗ ಎಷ್ಟೆಂಬ ಬಗ್ಗೆ ವಿವರಗಳಿಲ್ಲ. ಇವತ್ತು ನಮ್ಮ ಫೈನಾನ್ಸಿಯಲ್ ಪೊಸಿಷನ್ ಹೇಗಿದೆಯೆಂದರೆ, 315 ಕೋಟಿ ರೂಪಾಯಿಗಳಷ್ಟು ಹಣ ಮೈಸೂರು ಸರ್ಕಾರ ಸಾಲ ಇಟ್ಟುಕೊಂಡಿದೆ. ಕೇಂದ್ರ ಸರ್ಕಾರ ಕೊಟ್ಟಂಥ 40 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಅವರಿಂದ ತಂದಿರತಕ್ಕ ಮೊತ್ತ 38 ಕೋಟಿ ರೂಪಾಯಿಗಳ ನಗದು ರಿಜರ್ವ್ ಸಹ ಖರ್ಚುಮಾಡಿ ಇವತ್ತು ಹಣಕಾಸಿನ ಪರಿಸ್ಥಿತಿ ಬಿಕ್ಕಟ್ಟಿಗೆ ಬಂದದ್ದರಿಂದ 20 ಕೋಟಿ ರೂಪಾಯಿಗಳಷ್ಟು ಸೆಕ್ಯೂರಿಟಿ ಕವರ್ ಆಗಿರತಕ್ಕ ಓವರ್ ಡ್ರಾಫ್ಟ್ ಇವರು ರಿಜರ್ವ್ ಬ್ಯಾಂಕಿನಿಂದ ಬೇಡಿದ್ದಾರೆ. ಇನ್ನು 10 ಕೋಟಿ ರೂಪಾಯಿಗಳನ್ನು ಬೇರೆ ಸೆಕ್ಯೂರಿಟಿಗಳಿಂದ ತೆಗೆದು ಕೊಂಡಿದ್ದಾರೆ. ಈ 30 ಕೋಟಿ ರೂಪಾಯಿಗಳನ್ನು ರಿಜರ್ವ್ ಬ್ಯಾಂಕಿನಿಂದ ಓವರ್ ಡ್ರಾಫ್ಟ್ ರೂಪದಲ್ಲಿ ತೆಗೆದುಕೊಂಡು ಈ 66-67 ನೇ ಸಾಲಿನಲ್ಲಿ ಇವರು ಜನಗಳ ಮೇಲೆ ಯಾವ್ಯಾವ ರೂಪದಲ್ಲಿ ತೆರಿಗೆಗಳನ್ನು ಇನ್ನೂ ಹಾಕಿ ಈ ಗಿರತಕ್ಕ ಕೊರತೆಯನ್ನು ನೀಗಿಸುತ್ತಾರೆಂಬುದನ್ನು ಈ ಭಾಷಣದಲ್ಲಿ ಹೇಳಿದ್ದರೆ ಚೆನ್ನಾಗಿತ್ತು. ಅಂಥಾದ್ದು ಏನೂ ಇದರಲ್ಲಿ ಕಾಣುತ್ತಾ ಇಲ್ಲ. ಬಡ್ಜೆಟ್ ಮಂಡಿಸುವಾಗ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯೇನೆಂಬುದನ್ನು ತಿಳಿಸುವುದಕ್ಕೂ ಈಗ ರಾಜ್ಯಪಾಲರ ಭಾಷಣದಲ್ಲಿ ಆ ಒಂದು ಅಂಶವನ್ನು ತಿಳಿಸುವುದಕ್ಕೂ ಒಂದಕ್ಕೊಂದು ವ್ಯತ್ಯಾಸವಿರುತ್ತದೆ. ಆದ್ದರಿಂದ ನಮ್ಮ ಹಣಕಾಸಿನ ಮಂತ್ರಿಗಳು ಈಗಲೇ ಆ ಅಂಶವನ್ನು ನಮಗೆ ತಿಳಿಸಿದರೆ ಈ ವಿಚಾರವಾಗಿ ಈಗ ನಾವು ಮಾತನಾಡುವುದಕ್ಕೆ ಮತ್ತಷ್ಟು ಸಹಕಾರವಾಗುತ್ತಿತ್ತು. ಏಕೆಂದರೆ ಇವತ್ತು ಮೈಸೂರು ಸರ್ಕಾರದ ಹಣಕಾಸಿನ ಪರಿಸ್ಥಿತಿ ಅವ್ಯವಸ್ಥೆಯಲ್ಲಿದೆ. ಇದನ್ನು ಮೈಸೂರಿನ ಜನತೆ ಬಹಳ ಆಶ್ಚರ್ಯದಿಂದ ಕಣ್ಣು ತೆರೆದು ನೋಡುತ್ತಿದೆ.

ಒಂದು ಸಾರಿ ಮುಖ್ಯಮಂತ್ರಿಗಳೇ ಒಂದು ಮಾತನ್ನು ಹೇಳಿದ್ದಾರೆ. ನಮ್ಮ ರಾಜ್ಯದ ಹಣಕಾಸನ್ನು ಮೈಸೂರಿನ ಅಕೌಂಟೆಂಟ್ ಜನರಲ್ ಅವರು ಅಡ್ಜಸ್ಟ್ ಮಾಡಿದರು ಅದರಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ ಎಂಬುದಾಗಿ. ಅಂದ ಮೇಲೆ ಮೈಸೂರಿನ ಹಣಕಾಸಿನ ಪರಿಸ್ಥಿತಿ ಇಂಥಾ ಅವ್ಯವಸ್ಥೆಯಲ್ಲಿರುವುದನ್ನು ನೋಡಿದರೆ ನಿಜವಾಗಿ ಇದು ಸರಿಯಲ್ಲ, ಗೌರವತರತಕ್ಕದ್ದಲ್ಲ, ಇವೆಲ್ಲವನ್ನೂ ಸರಿಯಾಗಿ ಅಧ್ಯಕ್ಷರಾದ ತಾವು ವ್ಯವಸ್ಥೆಗೊಳಿಸಿ ಈ ಸಭೆಯನ್ನು ಈ ವಿಚಾರದಲ್ಲಿ ಕಾನ್ಫಿಡೆನ್ಸಿಗೆ ತೆಗೆದುಕೊಳ್ಳದೇ ಹೋದರೆ, ಮತ್ತು ಮೈಸೂರು ಸರ್ಕಾರದ ಹಣಕಾಸಿನ ಪರಿಸ್ಥಿತಿಯೇನು ಎಂಬುದನ್ನು ಇವರು ಇಲ್ಲಿ ಸರಿಯಾಗಿ ತಿಳಿಸದೆ ಹೋದರೆ, ಇವರು ನಿಜವಾಗಿ ಇಲ್ಲಿ ರಾಜ್ಯಭಾರ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂದು ನಾನು ಪ್ರಶ್ನೆ ಮಾಡುತ್ತೇನೆ. ಈಗ 240 ಕೋಟಿ ರೂಪಾಯಿಗಳನ್ನು ಇವರು ಒದಗಿಸಬೇಕಾದರೆ ಅದರ ಪೈಕಿ ಇಂಡಿಯಾ ಸರ್ಕಾರದಿಂದ 140 ಕೋಟಿ ರೂಪಾಯಿಗಳು ಬರುತ್ತದೆಂದು ಹೇಳಿದ್ದಾರೆ. ಇವರು ಕೊಡತಕ್ಕ 100 ಕೋಟಿ ರೂಪಾಯಿಗಳ ಬ್ಯಾಂಕ್ ಸಾಲ-ಇವೆರಡನ್ನೂ ತೆಗೆದರೆ ಇನ್ನು ಇವರು ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ಪೂರ್ತಿಯಾಗಿ ಕಾರ್ಯಗತ ಮಾಡುವುದಕ್ಕೋಸ್ಕರ ಎಷ್ಟು ಹಣವನ್ನು ಕೂಡಿಟ್ಟಿದ್ದಾರೆ ಎಂಬ ಬಗ್ಗೆ ಇವರು ಏನೂ ತಿಳಿಸಿಲ್ಲ. ತಮ್ಮ ಕೈಯ್ಯಿಂದ 120 ಕೋಟಿ ರೂಪಾಯಿಗಳನ್ನು ಕೂಡಿಸುವುದಕ್ಕಾಗುವುದಿಲ್ಲವೆಂದು ಹೇಳಿರುತ್ತಾರೆ. ಇವರ ಎಲ್ಲಾ ಸಂಪನ್ಮೂಲಗಳಿಂದಲೂ ಕೇವಲ 60 ಕೋಟಿ ರೂಪಾಯಿಗಳನ್ನು ರೂಢಿಸುವುದಕ್ಕೆ ಇವರ ಕೈಲಿ ಸಾಧ್ಯವಾಗಿಲ್ಲ.

ಇವತ್ತು ನಮ್ಮ ಮುಂದೆ ಅನೇಕ ಟ್ಯಾಕ್ಸೇಷನ್ ಮೆಜರ್‌ಗಳನ್ನು ತೆಗೆದುಕೊಂಡು ಬಂದಿದ್ದಾರೆ. ಲ್ಯಾಂಡ್ ಸರ್‌ಚಾರ್ಜು ಮುಂದೆ ಬಿಟ್ಟುಬಿಡುತ್ತೇವೆಂದು, ಅದನ್ನು ಒಂದು ವರ್ಷಕ್ಕೆ ಮಾತ್ರ ವಸೂಲು ಮಾಡುತ್ತೇವೆಂದು ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟು, ಈಗ 2 ವರ್ಷ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಆ ರೀತಿ ವಸೂಲು ಮಾಡಿ ಕೊನೆಗೆ ಯಾವ ಪಾರ್ಟಿ ಆಡಳಿತ ನಡೆಸುತ್ತಾ ಇದೆಯೋ ಆ ಪಾರ್ಟಿ ಮುಂದೆ ಇದು ಹೋಗುವುದಿಲ್ಲವೆಂದು 2 ತಿಂಗಳ ಕೆಳಗೆ ಹೇಳಿದರು. 1966–67ನೆಯ ವರ್ಷದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಲ್ಯಾಂಡ್ ರೆವಿನ್ಯೂ ಸರ್‌ಚಾರ್ಜು ಹಾಕುತ್ತೇವೆಂದು ದೆಹಲಿಯಲ್ಲಿ ಹೇಳಿಕೆ ಕೊಟ್ಟರು. ಅದು ಪತ್ರಿಕೆಯಲ್ಲಿ ವರದಿಯಾಗಿದೆ ಆ ಪತ್ರಿಕೆಯನ್ನು ನಾನು ಸಹ ಓದಿದ್ದೇನೆ. ಇವತ್ತು ನಮ್ಮ ಕೈಯಲ್ಲಿ ಮೈಸೂರು ಸೆಕೆಂಡರಿ ಎಜುಕೇಷನ್ ಎಕ್ಸಾಮಿನೇಷನ್ ಬೋರ್ಡ್ ಮಸೂದೆ ಇದೆ, ಮೈಸೂರು ಸೇಲ್ಸ್ ಟ್ಯಾಕ್ಸ್ ಮಸೂದೆ ಇದೆ; ಮೈಸೂರು ಲ್ಯಾಂಡ್ ರೆವಿನ್ಯೂ ಅಮೆಂಡ್‌ಮೆಂಟ್ ಇದೆ, ಮತ್ತು ಲ್ಯಾಂಡ್ ರೆವಿನ್ಯೂ ಟೆಂಪರರಿ ಸರ್‌ಚಾರ್ಜು ಮಸೂದೆ ಇದೆ. ಇದರ ಜೊತೆಗೆ ಇನ್ನೂ ಯಾವಯಾವುದನ್ನು ನಿಮ್ಮ ಬೊಕ್ಕಸದಲ್ಲಿ ಅಡಗಿಸಿಕೊಂಡಿದ್ದೀರೋ ನನಗೆ ಗೊತ್ತಾಗಲಿಲ್ಲ. 2 ಮನಿ ಬಿಲ್ಸ್ ಈ ಕಾಲಿನಲ್ಲಿ ಬಂದಿವೆ. ನೀವು ಹೇಳಿದ 500 ಕೋಟಿ ರೂಪಾಯಿಗಳ ಪಂಚವಾರ್ಷಿಕಯೋಜನೆಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಯಾವ ಯಾವ ಸಂಪನ್ಮೂಲಗಳನ್ನು ಕಂಡುಹಿಡಿದಿದ್ದೀರಿ ಎಂದು ಕೇಳಬೇಕಾಗಿದೆ. ಆಹಾರ, ಅಗ್ರಿಕಲ್‌ಚರಲ್—ಸೆಕ್ಟಾರ್ ತೆಗೆದುಕೊಂಡರೆ ಅಗ್ರಿಕಲ್‌ಚರ್ ಸೆಕ್ಟಾರ್ ಬಗ್ಗೆ ನೋವಿನ ಮನಸ್ಸಿನಿಂದ ನಾನಾದರೂ ಹೇಳುತ್ತೇನೆ. ಆಹಾರ ಮತ್ತು ಅಗ್ರಿಕಲ್‌ಚರ್ ಸೆಕ್ಟಾರ್ ತೆಗೆದುಕೊಂಡರೆ ಆಹಾರದ ವಿಷಯದಲ್ಲಿ ಸ್ವಪರಿಪೂರ್ಣತೆಯನ್ನು ಪಡೆಯುವುದಕೋಸ್ಕರ ಏನು ಪ್ರಯತ್ನ ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ. ದೋಸೆ ಇಡ್ಲಿ ತಿನ್ನಬೇಡಿ, ಗೋಧಿ ತಿನ್ನಿ, ಹಣ್ಣು ತಿನ್ನಿ, ಪರಂಗಿಹಣ್ಣು ತಿನ್ನಿ, ಟೊಮ್ಯಾಟೋ ಹಣ್ಣು ತಿನ್ನಿ, ವೆಜಿಟಬಲ್ ಫುಡ್‌ಗಳನ್ನು ತಿನ್ನಿ ಎಂದು ಹೇಳುತ್ತೀರಿ. ಮೈಸೂರು ದೇಶ ಹಿಂದೂಸ್ಥಾನದಲ್ಲಿಯೇ ಆಹಾರದ ಕೊರತೆಯಲ್ಲಿ ಬಹಳ ಹಿಂದೆ ಬಿದ್ದಿದೆ. ಆಹಾರದ ಕೊರತೆಯನ್ನು 3ನೇ ಪಂಚವಾರ್ಷಿಕ ಯೋಜನೆ ಮುಗಿದರೂ ಅದನ್ನು ಸರಿಪಡಿಸುವುದಕ್ಕೆ ಆಗಲಿಲ್ಲ. 5 ಲಕ್ಷ ಟನ್ ಕೊರತೆಯನ್ನು 2 ಲಕ್ಷ ಟನ್‌ಗೆ ತರುವುದಕ್ಕೆ ಪ್ರಯತ್ನ ಮಾಡಲಿಲ್ಲ. 20 ಲಕ್ಷ ಟನ್ ಆಹಾರವನ್ನು ಮೈಸೂರಿಗೆ ಯಾವ ರೀತಿ ಒದಗಿಸುತ್ತೀರೆಂದು ಸರ್ಕಾರದವರನ್ನು ಕೇಳುತ್ತೇನೆ. ಮಾತೆತ್ತಿದರೆ ನಾವು ಎಲೆಕ್‌ಟ್ರಿಸಿಟಿ ಕೊಡುತ್ತೇವೆ, ಕೃಷ್ಣ ವಾಟರ್ ಕೊಡುತ್ತೇವೆ, ಗೋದಾವರಿ ನೀರು ಕೊಡುತ್ತೇವೆ, ತುಂಗಭದ್ರ ನೀರು ಕೊಡುತ್ತೇವೆ, ಎರಡನೆ ಬೆಳೆ ಬೆಳೆಯಿರಿ ಎಂದು ಹೇಳುತ್ತೀರಿ. ಆಂಧ್ರಕ್ಕೆ ನೀವು ನೀರು ಕೊಟ್ಟರೆ ಅವರು ಎಷ್ಟು ಲಕ್ಷ ಟನ್ ಆಹಾರ ಕೊಡುತ್ತಾರೆ. ರಾಜ್ಯಪಾಲರ ಭಾಷಣದಲ್ಲಿ ಆಹಾರದ ಬಗ್ಗೆ ಹೇಳಲಾಗಿದೆ. ಮನುಷ್ಯನೇನಾದರೂ ಜೀವಂತವಾಗಿರಬೇಕಾದರೆ ಪುಷ್ಟಿಯಿಂದ ಬೆಳೆದು ಜೀವನ ಮಾಡಬೇಕಾದರೆ ಕನಿಷ್ಠಪಕ್ಷ 17 ಔನ್ಸ್ ಬೇಕೆಂದು ಆಹಾರದ ನಿಪುಣರು ಹೇಳಿದ್ದಾರೆ. ಆಹಾರದ ಬಗ್ಗೆ ತಿಳಿವಳಿಕೆ ಇರತಕ್ಕವರು, ಮೈಸೂರು ಫುಡ್ ಟೆಕ್‌ನಲಾಜಿಕಲ್ ಇನ್ಸ್‌ಟಿಟ್ಯೂಟ್‌ನವರು ಕೂಡ ಹೀಗೆ ಹೇಳಿದ್ದಾರೆ, ಒಬ್ಬ ಮನುಷ್ಯ ಫೀಲ್ಡ್‌ನಲ್ಲಿ ದುಡಿಯಬೇಕಾದರೆ, ಕಾರ್ಖಾನೆಯಲ್ಲಿ ಕೆಲಸಮಾಡಬೇಕಾದರೆ, ಕನಿಷ್ಠಪಕ್ಷ 17 ಔನ್ಸ್ ಆಹಾರ ಕೊಡಬೇಕು ಎಂದು. ಹೆಂಗಸರಿಗೆ ಎಷ್ಟು ಪ್ರಮಾಣದಲ್ಲಿ ಆಹಾರ ಕೊಡಬೇಕಾಗುತ್ತದೆ ಎಂದರೆ, ಇನ್ನೂ ಒಂದು ಔನ್ಸ್ ಹೆಚ್ಚಿಗೆ ಆಹಾರವನ್ನು ಕೊಡಬೇಕಾಗುತ್ತದೆ. ಕಾರಣ ಅವರ ಹೊಟ್ಟೆಯಲ್ಲಿರುವ ಕೂಸಿಗೆ ಆಹಾರಬೇಕು. ಅದು ಬೆಳೆಯುವ ರೀತಿಯಲ್ಲಿ ಅದಕ್ಕೆ ಕೊಡಬೇಕಾಗುತ್ತದೆ. ಅದಕ್ಕೋಸ್ಕರವಾಗಿ ಹೆಂಗಸರಿಗೆ ಇನ್ನೂ ಹೆಚ್ಚಿಗೆ ಆಹಾರ ಬೇಕೆನ್ನುವುದನ್ನು ತಜ್ಞರು ಹೇಳಿರತಕ್ಕದ್ದನ್ನು ನಿಮ್ಮ ಮುಂದೆ ಹೇಳುತ್ತಿದ್ದೇನೆ. ಇಲ್ಲಿ ಡಾಕ್ಟರ್ ಶ್ರೀ ನಾಗಪ್ಪ ಆಳ್ವರವರು ಇದ್ದಾರೆಂದು ಬಹಳ ಎಚ್ಚರಿಕೆಯಿಂದ ಮಾತನಾಡುತ್ತಿದ್ದೇನೆ. ಅವರು 'ಫ್ಯಾಮಿಲಿ ಪ್ಲಾನಿಂಗ್'ನಲ್ಲಿ ಎಷ್ಟು ದೂರ ಜಯಪ್ರದವಾಗಿದ್ದಾರೆ ಎಂಬುದನ್ನು ನೋಡಿ. ಬರೀ ಸ್ಟ್ಯಾಟಿಸ್ಟಿಕ್ಸ್ ಕೊಟ್ಟರೆ ಪ್ರಯೋಜನವಿಲ್ಲ. ಫೂಟ್ ಪಾತಿನಲ್ಲಿ ಎಷ್ಟು ಜನ ಬಾಣಂತಿಯರು ಕಂಕುಳಲ್ಲಿ ಮಕ್ಕಳನ್ನು ಇಟ್ಟುಕೊಂಡು ಓಡಾಡುತ್ತಿದ್ದಾರೆ ಎಂಬುದನ್ನು ನೋಡಿದರೆ ನಮ್ಮ ಫ್ಯಾಮಿಲಿ ಪ್ಲಾನಿಂಗ್ ಎಲ್ಲಿಯವರೆಗೆ ಯಶಸ್ವಿ ಆಗಿದೆ ಎಂಬುದು ಗೊತ್ತಾಗುತ್ತದೆ. ಮೊದಲು ಹೇಳಿದಂತೆ ಗರ್ಭಿಣಿ ಹೆಂಗಸರಿಗೆ 17 ಔನ್ಸ್ ಅಲ್ಲ, 19 ಔನ್ಸ್ ಬೇಕಾಗುತ್ತದೆ. ರಾಜ್ಯದಲ್ಲಿ ಆಹಾರದ ಕೊರತೆ ನೀಗಬೇಕಾದರೆ ಒಂದು ಸ್ಪಷ್ಟವಾದ ಚಿತ್ರವನ್ನು ಇಟ್ಟುಕೊಂಡರೆ ಮಾತ್ರ ಸಾಧ್ಯ. ಆಹಾರವಿಲ್ಲದೆ ಜನ ಸಾಯುತ್ತಿದ್ದಾರೆ. ಜನಗಳು ಅನ್ನವಿಲ್ಲದೆ ಕಷ್ಟಪಡುತ್ತಿದ್ದಾರೆಂದು ಹೇಳುವುದಕ್ಕೆ ಬದಲು ಸರ್ಕಾರದವರು ಕಣ್ಣು ಬಿಟ್ಟು ನೋಡಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇವತ್ತು ಮೈಸೂರು ಸರ್ಕಾರ ಈ ಎಲ್ಲಾ ಸ್ಕೀಮುಗಳನ್ನು ಇಂಪ್ಲಿಮೆಂಟ್ ಮಾಡಬೇಕಾದರೆ ಅವರು ರಿಜರ್ವ್ ಬ್ಯಾಂಕಿನ ಜೊತೆಯಲ್ಲಿ ಅಗ್ರಿಮೆಂಟ್ ಮಾಡಿರುವ ಪ್ರಕಾರ ಎಷ್ಟು ಸಾರಿ ಕೆಳಗಿಳಿಯಿತು, ಎಷ್ಟು ಸಾರಿ ಮೇಲೆ ಹೋಯಿತು ಎಂದು ನೋಡಿದರೆ ಗೊತ್ತಾಗುತ್ತದೆ. 25 ಲಕ್ಷ ಪ್ರತಿ ಶುಕ್ರವಾರ ನಿಮ್ಮ ಲೆಕ್ಕದಲ್ಲಿರಬೇಕು, ಶುಕ್ರವಾರ

ಬಿಟ್ಟು ಉಳಿದ ಬೇರೆ ವಾರಗಳಲ್ಲಿ 20 ಲಕ್ಷ ಮೈಸೂರು ಸರ್ಕಾರದ ಕೈಯಲ್ಲಿ ಇರಬೇಕು ಎಂದು ಇದೆ. ಮೈಸೂರು ಸರ್ಕಾರಕ್ಕೂ ರಿಸರ್ವ್ ಬ್ಯಾಂಕಿಗೂ ಆಗಿರುವ ಅಗ್ರಿಮೆಂಟ್ ಪ್ರಕಾರ ಮೂರನೆ ಪಂಚವಾರ್ಷಿಕ ಯೋಜನೆಯನ್ನು ತಾವು ಕಾರ್ಯಗತ ಮಾಡುವಾಗ 163 ಸಲ ಆ ಹಣದ ಮಟ್ಟದ ಕೆಳಗೆ ಹೋಗಿದ್ದೀರಿ. 118 ಸಲ ಬಹಳ ಕೆಳಗೆ ಹೋಗಿತ್ತು. ಹಾಗಾದರೆ ಬಡ್ಡಿ ಎಷ್ಟು ಕೊಟ್ಟಿರಿ ಎಂದರೆ ಒಂದು ಸಾರಿ 82 ಸಾವಿರ ರೂಪಾಯಿ ಬಡ್ಡಿ ಕೊಟ್ಟಿರಿ, ಇನ್ನೊಂದು ಸಾರಿ 8 ಲಕ್ಷ ರೂಪಾಯಿ ಬಡ್ಡಿ ಕೊಟ್ಟಿರಿ, ಸೆಕ್ಯೂರಿಟಿ ಕವರ್ ಮಾಡುವುದಕ್ಕೆ ಒಂದು ರೇಟು, ಸೆಕ್ಯೂರಿಟ್ ಇಲ್ಲದೇಯಿರುವುದಕ್ಕೆ ಒಂದು ರೇಟ್. ಹಾಗಾದರೆ ಪರಿಸ್ಥಿತಿ ಹೀಗೆ ಇರಬೇಕಾದರೆ ತಾವು ಸಾಧನೆ ಮಾಡಿದ್ದಾದರೂ ಏನು ಎಂದು ಕೇಳುತ್ತೇನೆ ಯಾವುದರಲ್ಲಿ ಸ್ವಪರಿಪೂರ್ಣತೆಯನ್ನು ಹೊಂದಿದ್ದೀರಿ. ಆಹಾರದಲ್ಲಿ ಸ್ವಪರಿಪೂರ್ಣತೆ ಇದೆಯೋ, ನಿರುದ್ಯೋಗಿಗಳಿಗೆ ಕೆಲಸ ಕೊಡಿಸುವುದರಲ್ಲಿ ಸ್ವಪರಿಪೂರ್ಣತೆಯಿದೆಯೋ, ಮೇಜರ್ ಇರಿಗೇಷನ್, ಮೈನರ್ ಇರಿಗೇಷನ್ ಪ್ರಾಜೆಕ್ಟ್ ಕಟ್ಟಿ ಲಕ್ಷಾಂತರ ಎಕರೆ ಜಮೀನಿನಲ್ಲಿ ಬೆಳೆ ಬೆಳೆಯುವುದರಲ್ಲಿ ಸ್ವಪರಿಪೂರ್ಣತೆಯಿದೆಯೆ, ಯಾವುದರಲ್ಲಿ ಸ್ವಪರಿಪೂರ್ಣತೆ ಸಾಧನೆ ಮಾಡಿದ್ದೀರಿ ಎಂದು ಹೇಳಿದರೆ ಸರ್ಕಾರವನ್ನು ಇವತ್ತಿನಿಂದ ಟೀಕೆ ಮಾಡುವುದಾಗಲಿ, ಚಕಾರ ಶಬ್ದವನ್ನು ಹೇಳುವುದನ್ನಾಗಲೀ ನಿಲ್ಲಿಸುತ್ತೇನೆ. 25 ಸಾವಿರ ಉಪಾಧ್ಯಾಯರನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ನೇಮಕ ಮಾಡುತ್ತೇವೆಂದು ಹೇಳಿದಿರಿ. ಆದರೆ ಇವತ್ತು ಎಷ್ಟು ಜನ ನೇಮಕವಾಗಿದ್ದಾರೆಂದರೆ ಕೇವಲ 14 ಸಾವಿರ ಮಂದಿ ಮಾತ್ರ. 11 ಸಾವಿರ ಮಂದಿ ಉಪಾಧ್ಯಾಯರನ್ನು ನೇಮಕ ಮಾಡುವುದಕ್ಕೆ ಆಗಲಿಲ್ಲ. ಇವತ್ತಿನ ದಿವಸ 51 ಜನ ಮಕ್ಕಳಿಗೆ ಒಬ್ಬ ಒಬ್ಬ ಉಪಾಧ್ಯಾಯನಂತೆ ಇದ್ದಾನೆಯೇ ಎಂದು ಕೇಳಿದರೆ ಅದೂ ಸಾಧ್ಯವಾಗಿಲ್ಲವೆಂದು ಹೇಳಿದಿರಿ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಸ್ಪಿಲ್ ಓವರ್ ಆಗಿದೆ ಎಂದು ಕೇಳುತ್ತೇನೆ? 254 ಕೋಟಿ ರೂಪಾಯಿಗಳನ್ನು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣವಾಗಿ ಖರ್ಚುಮಾಡಿದ್ದೇವೆಂದು ಭಾವನೆ ಮಾಡಿಕೊಂಡಿದ್ದೀರಾ? ಇದರ ಪೈಕಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಕೋಟಿ ರೂಪಾಯಿ ಸ್ಪಿಲ್ ಓವರ್ ಆಗಿದೆ ಎಂದು ನೋಡಿದರೆ ಗೊತ್ತಾಗುತ್ತದೆ. ಆಹಾರ, ವಿದ್ಯಾಭ್ಯಾಸ, ವೈದ್ಯಕೀಯ, ರಸ್ತೆ ಸಂಚಾರ, ಮತ್ತು ವ್ಯವಸಾಯ ಯಾವುದರಲ್ಲಿ ಹೆಚ್ಚಾಗಿ ಅಭಿವೃದ್ಧಿ ಸಾಧಿಸಿದ್ದೀರಿ ಎನ್ನುವುದನ್ನು ಧೈರ್ಯವಾಗಿ ಹೇಳಿ. ತಾವು ಆಶ್ವಾಸನೆ ಕೊಡುವುದು ಸಾಲದು, ನಮಗೆ ಎಲ್ಲಾ ಅಂಕಿ ಅಂಶಗಳನ್ನು ಕೊಟ್ಟು ಪರಿಸ್ಥಿತಿ ಈ ರೀತಿ ಇದೆ ಎಂದು ಹೇಳಿದರೆ ಸ್ವಲ್ಪ ಧೈರ್ಯ ಬರುತ್ತದೆ; ಇಲ್ಲದಿದ್ದರೆ ಧೈರ್ಯ ಬರುವುದಿಲ್ಲ. ಆದಕ್ಕೋಸ್ಕರ ಸರ್ಕಾರ ಸ್ವಲ್ಪ ಯೋಚನೆ ಮಾಡಬೇಕು. ಎಷ್ಟು ಜನರಿಗೆ ಸಾರ್ವಜನಿಕರಿಂದ ಪಡೆದ 54 ಕೋಟಿ ಸಾಲವನ್ನು ಖರ್ಚು ಮಾಡಿದಿರಿ.

Mr. SPEAKER.—The Hon'ble Member may conclude in another 2 minutes.

Sri C. J MUCKANNAPPA—If the Hon'ble Speaker will give me another 15 minutes I will conclude.

Mr. SPEAKER.—It is embarrassing to the Speaker. The House will now rise and meet tomorrow.

The House adjourned at Six of the Clock to meet again at One of the Clock on Tuesday, the 1st February 1966.

WD 6038—GPB—500+15—19-2-1966